

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಜುಲೈ 12 ಶುಕ್ರವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 87 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4




ಕಾವೇರಿ ಜಲಾನಯನ ಪ್ರದೇಶದ ರೈತರು; ರಾಜ್ಯ ಸರ್ಕಾರಕ್ಕೆ ಮತ್ತೆ ಕಾವೇರಿ ವರಿ

ಜು.31ರವರೆಗೆ ತಮಿಳುನಾಡಿಗೆ

ನಿತ್ಯವೂ ಒಂದು ಟಿಎಂಸಿ ನೀರು

ಸಿಡಬ್ಲ್ಯೂಆರ್‌ಸಿ ಆದೇಶ



ಬೆಂಗಳೂರು, ಜು.11(ಕೆಎಂಶಿ)– ರಾಜ್ಯದ ಕಾವೇರಿ ಜಲಾನಯನ ಭಾಗದಿಂದ ತಮಿಳುನಾಡಿಗೆ ಪ್ರತಿ ನಿತ್ಯ ಒಂದು ಟಿಎಂಸಿ (ಸರಾಸರಿ 11,500 ಕ್ಯೂಸೆಕ್ಸ್) ನೀರನ್ನು ಈ ತಿಂಗಳಾಂತ್ಯದವರೆಗೂ ಹರಿಸುವಂತೆ ಕಾವೇರಿ ನೀರು ನಿರ್ವಹಣಾ ಸಮಿತಿ (ಸಿಡಬ್ಲ್ಯೂಆರ್‌ಸಿ) ಆದೇಶಿಸಿದೆ

ಜುಲೈ 12ರಿಂದ 31ರವರೆಗೂ ಬಿಳಿಗುಂಡ್ಲುವಿನಲ್ಲಿ ಸಂಚಿತ ನೀರಿನ ಒಳ ಹರಿವಿನ ಪ್ರಮಾಣವನ್ನು ಖಚಿತಪಡಿಸಿಕೊಳ್ಳುವಂತೆ ಸಮಿತಿ ಆದೇಶಿಸಿದೆ. ಜಲಾನಯನ ವ್ಯಾಪ್ತಿಗೆ ಬರುವ ತಮಿಳುನಾಡು ಮತ್ತು ಕರ್ನಾಟಕ ರಾಜ್ಯಗಳ ವಾದ–ಪ್ರತಿವಾದ ಆಲಿಸಿದ ನಂತರ ಸಿಡಬ್ಲ್ಯೂಆರ್‌ಸಿ ಈ ಆದೇಶ ಮಾಡಿದೆ. ದೆಹಲಿಯಲ್ಲಿಂದು ಜರುಗಿದ ಸಿಡಬ್ಲ್ಯೂಆರ್‌ಸಿಯ 99ನೇ ಸಭೆಯ ಚರ್ಚೆಯಲ್ಲಿ ರಾಜ್ಯ ಸರ್ಕಾರ, ಜೂ.1ರಿಂದ ಜು.9ರವರೆಗೆ ಕರ್ನಾಟಕದ ನಾಲ್ಕು ಜಲಾಶಯಗಳಿಗೆ ಸಂಚಿತ ಒಳ ಹರಿವು 41.651 ಟಿಎಂಸಿ ಇದ್ದು, ರಾಜ್ಯದ ನಾಲ್ಕು ಜಲಾಶಯಗಳಿಗೆ ಸಂಚಿತ ಒಳಹರಿವಿನ ಕೊರತೆಯು ಸರಾಸರಿ 28.71 ಇದೆ ಎಂದು ವಾದಿಸಿತು.

ಕರ್ನಾಟಕದ ನಾಲ್ಕು ಜಲಾಶಯಗಳಲ್ಲಿನ ಸಂಗ್ರಹಣೆಯು 58.668 ಟಿಎಂಸಿ ಇದ್ದು, ಮೆಟ್ಟೂರಿನಿಂದ 4.905 ಟಿಎಂಸಿ ಮತ್ತು ಭವಾನಿಯಿಂದ 0.618 ಟಿಎಂಸಿ (ಒಟ್ಟು 5.542 ಟಿಎಂಸಿ) ನದಿಗೆ ■5ನೇ ಪುಟಕ್ಕೆ

ಇಂದು ಆಷಾಢ ಮಾಸದ ಮೊದಲ ಶುಕ್ರವಾರ:

ಚಾಮುಂಡಿಬೆಟ್ಟದಲ್ಲಿ ವಿಶೇಷ ಪೂಜಾ ಉತ್ಸವ


- ಮುಂಜಾನೆಯಿಂದಲೇ ನಾಡದೇವಿಗೆ ವಿಶೇಷ ಪೂಜೆ
- ಭಕ್ತ ಸಮೂಹ ದೇವಿಯ ಸುಗಮ ದರ್ಶನಕ್ಕೆ ಸೂಕ್ತ ವ್ಯವಸ್ಥೆ
- ಬೆಟ್ಟಕ್ಕೆ ಭಕ್ತರ ಕರೆದೊಯ್ಯಲು 35 ಬಸ್‌ಗಳ ಸೌಕರ್ಯ




ಮೈಸೂರು, ಜು.11 (ಎಂಟಿವೈ)– ಆಷಾಢ ಮಾಸದ ಮೊದಲ ಶುಕ್ರವಾರವಾದ ನಾಳೆ (ಜು.12) ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಾಲಯದಲ್ಲಿ ಮುಂಜಾನೆಯಿಂದಲೇ ನಾಡದೇವಿಗೆ ವಿಶೇಷ ಪೂಜಾ ಕೈಂಕರ್ಯ ಜರುಗಲಿವೆ. ಈ ವಿಶೇಷ ದಿನದಂದು ಭಕ್ತರು ಸರದಿ ಸಾಲಿನಲ್ಲಿ ನಿಂತು ಸರಾಗವಾಗಿ ದೇವಾಲಯ ಪ್ರವೇಶಿಸಲು ಸೂಕ್ತ ವ್ಯವಸ್ಥೆ ಮಾಡಲಾಗಿದೆ.

ದೇವಾಲಯದಲ್ಲಿ ಪ್ರಧಾನ ಅರ್ಚಕ ಡಾ.ಶಶಿಶೇಖರ್ ದೀಕ್ಷಿತ್ ನೇತೃತ್ವದಲ್ಲಿ ಚಾಮುಂಡೇಶ್ವರಿ ದೇವಿಗೆ ಮುಂಜಾನೆ 3.30ರಿಂದ ಮಹಾನ್ಯಾಸ ಪೂರ್ವಕ ರುದ್ರಾಭಿಷೇಕ, ಸಹಸ್ರನಾಮಾರ್ಚನೆ ಸೇರಿದಂತೆ ಇನ್ನಿತರ ಪೂಜಾ ಕೈಂಕರ್ಯ ಜರುಗಲಿದ್ದು, ಅಲಂಕಾರದೊಂದಿಗೆ ಮಂಗಳಾರತಿ ಬಳಿಕ ಬೆಳಗ್ಗೆ 6 ಗಂಟೆಯಿಂದ ಭಕ್ತರ ದರ್ಶನಕ್ಕೆ ಅವಕಾಶ ನೀಡಲಾಗುತ್ತದೆ. ಭಕ್ತರು ದೇವಾಲಯ ಪ್ರವೇಶಿಸಲು ಮೂರು ಸಾಲುಗಳ ವ್ಯವಸ್ಥೆ ಮಾಡಲಾಗಿದ್ದು, ಒಂದರಲ್ಲಿ ಧರ್ಮದರ್ಶನ, ಮತ್ತೆರಡು ಸಾಲಿನಲ್ಲಿ 50 ಹಾಗೂ 500 ರೂ. ಟಿಕೆಟ್ ಖರೀದಿಸಿ ಭಕ್ತರು ದರ್ಶನಕ್ಕೆ ಹೋಗಬಹುದಾಗಿದೆ.

ಬೆಟ್ಟಕ್ಕೆ ಖಾಸಗಿ ವಾಹನ ನಿಷೇಧ: ಪ್ರತಿ ವರ್ಷದಂತೆ ಈ ಬಾರಿಯೂ ಆಷಾಢ ಮಾಸದ ಶುಕ್ರವಾರದಂದು ಚಾಮುಂಡಿಬೆಟ್ಟಕ್ಕೆ ಖಾಸಗಿ ■5ನೇ ಪುಟಕ್ಕೆ










ಚಾಮುಂಡಿಬೆಟ್ಟದಲ್ಲಿ ಆಷಾಢ ಪೂಜೆ
ಸಾರ್ವಜನಿಕರಿಗೆ ಉಚಿತ ಸಾರಿಗೆ ಸೌಲಭ್ಯ



ಮೈಸೂರು, ಜು.11–ಆಷಾಢ ಮಾಸದ ಪ್ರಯುಕ್ತ ಶ್ರೀ ಚಾಮುಂಡೇಶ್ವರಿ ಅಮ್ಮನವರ ಪೂಜಾ ಉತ್ಸವದಲ್ಲಿ ಪಾಲ್ಗೊಳ್ಳಲು ಅನುವಾಗುವಂತೆ ಬೆಟ್ಟಕ್ಕೆ ಪ್ರತಿ ಶುಕ್ರವಾರದಂದು ಜಿಲ್ಲಾಡಳಿತದಿಂದ ಖಾಸಗಿ ವಾಹನಗಳ ಬೆಟ್ಟ ಪ್ರವೇಶ ನಿಷೇಧಿಸಿದ್ದು, ಲಲಿತ ಮಹಲ್ ಪಾರ್ಕಿಂಗ್ ಸ್ಥಳದಲ್ಲಿ ಖಾಸಗಿ ವಾಹನಗಳನ್ನು ಪಾರ್ಕಿಂಗ್ ಮಾಡಲು ವ್ಯವಸ್ಥೆ ಮಾಡಲಾಗಿದೆ.

ಈ ಹಿನ್ನೆಲೆಯಲ್ಲಿ ಮೈಸೂರು ನಗರ ವಿಭಾಗದಿಂದ ಭಕ್ತಾದಿಗಳ ಅನುಕೂಲಕ್ಕಾಗಿ ಶ್ರೀ ಚಾಮುಂಡೇಶ್ವರಿ ಅಮ್ಮನವರ ದರ್ಶನಕ್ಕೆ ಆಷಾಢ ಮಾಸದ ಪ್ರತಿ ಶುಕ್ರವಾರದ ದಿನಗಳಾದ ಜುಲೈ 12, 19, 26, ಆಗಸ್ಟ್ 2 ಮತ್ತು ಚಾಮುಂಡೇಶ್ವರಿ ಅಮ್ಮನವರ ವರ್ಧಂತಿ ದಿನವಾದ ಜು.27 ರಂದು ಭಕ್ತಾದಿಗಳು ಲಲಿತ ಮಹಲ್ ಪಾರ್ಕಿಂಗ್ ಸ್ಥಳದಿಂದ ಚಾಮುಂಡಿ ಬೆಟ್ಟಕ್ಕೆ ಉಚಿತವಾಗಿ ಹೆಚ್ಚುವರಿ ವಾಹನಗಳನ್ನು ಬೆಳಗ್ಗೆ 5 ಗಂಟೆಯಿಂದ ರಾತ್ರಿ 8ರವರೆಗೆ ಕಾರ್ಯಾಚರಣೆ ಮಾಡಲಾಗುತ್ತಿದೆ. ಆದ್ದರಿಂದ ಸಾರ್ವಜನಿಕ ಪ್ರಯಾಣಿಕರು ನಗರ ಬಸ್ ನಿಲ್ದಾಣದಿಂದ –ಚಾಮುಂಡಿಬೆಟ್ಟಕ್ಕೆ ನೇರವಾಗಿ ಟಿಕೆಟ್ ಪಡೆದು ಪ್ರಯಾಣಿಸಬಹುದಾಗಿದ್ದು, ಈ ಸೌಲಭ್ಯವನ್ನು ಸದುಪಯೋಗಪಡಿಸಿಕೊಂಡು ಸಾರಿಗೆ ಸಂಸ್ಥೆಯೊಂದಿಗೆ ಸಹಕರಿಸಬೇಕು ಎಂದು ಮೈಸೂರು ನಗರ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಆಲೂರು ವೆಂಕಟರಾವ್ ಜನ್ಮದಿನೋತ್ಸವ



ಮೈಸೂರು, ಜು. 11– ಭುವನೇಶ್ವರಿ ಸೇವಾ ಟ್ರಸ್ಟ್ ವತಿಯಿಂದ ಕನ್ನಡ ಕುಲ ಪುರೋಹಿತ ಆಲೂರು ವೆಂಕಟರಾವ್ ಅವರ 144ನೇ ಜನ್ಮ ದಿನಾಚರಣೆಯನ್ನು ಮೈಸೂರಿನ ಚಾಮುಂಡಿಪುರಂ ವೃತ್ತದಲ್ಲಿರುವ ತಗಡೂರು ರಾಮಚಂದ್ರರಾವ್ ಉದ್ಯಾನವನದಲ್ಲಿ ಜು.12ರಂದು ಬೆಳಗ್ಗೆ 11ಕ್ಕೆ ಆಚರಿಸಲಾಗುವುದು ಎಂದು ಭುವನೇಶ್ವರಿ ಸೇವಾ ಟ್ರಸ್ಟ್ ಅಧ್ಯಕ್ಷೆ ನಾಗಶ್ರೀ ಸುಚಿಂದ್ರ ತಿಳಿಸಿದ್ದಾರೆ

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಮಾಜಿ ಅಧ್ಯಕ್ಷ ಡಾ.ವೈ ಡಿ.ರಾಜಣ್ಣ, ಚಂದ್ರಶೇಖರ್, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಹಿರಿಯ ಸಮಾಜ ಸೇವಕ ಕೆ ರಘುರಾಮ್ ವಾಜಪೇಯಿ, ಸಾಹಿತಿಗಳಾದ ಲೀಲಾ ಪ್ರಕಾಶ್, ಪುಷ್ಪ ಅಯ್ಯಂಗಾರ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಕಾಂಗ್ರೆಸ್ ಮುಖಂಡರಾದ ಎನ್.ಎಂ.ನವೀನ್.ಕುಮಾರ್, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್ ಇನ್ನಿತರರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದಿನಿಂದ ವಿಶ್ವ ಭಾರತಿಗೆ ಕನ್ನಡದಾರತಿ

ಮೈಸೂರು, ಜು. 11– ಜೆಎಸ್‌ಎಸ್ ರೇಡಿಯೋ 91.2ಎಫ್.ಎಂ. ಸಮುದಾಯ ಬಾನುಲಿ ಕೇಂದ್ರವು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮೈಸೂರು ಮತ್ತು ಆಲೂರು ವೆಂಕಟರಾವ್ ಭಾಷಾ ಕೌಶಲ ಕೇಂದ್ರದ ಸಹಯೋಗದೊಂದಿಗೆ ಕನ್ನಡ ನಾಡು ನುಡಿಗೆ ಕೀರ್ತಿ ತಂದ ಜ್ಞಾನಪೀಠ ಪ್ರಶಸ್ತಿ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರ ಕೃತಿ ಮತ್ತು ಕರ್ತೃವಿನ ಪರಿಚಯಾತ್ಮಕ ಸರಣಿ ಕಾರ್ಯಕ್ರಮ ಆಯೋಜಿಸಲಾಗಿದೆ. ಕಾರ್ಯಕ್ರಮವು ಜು.12ರಿಂದ ಫೆಬ್ರವರಿ 2025ರವರೆಗೆ ನಡೆಯಲಿದ್ದು, ಪ್ರತಿ ಶುಕ್ರವಾರ ಬೆಳಗ್ಗೆ 11:30ರಿಂದ 12:30ರವರೆಗೆ ನೇರ ಸಂದರ್ಶನ ಫೋನ್–ಇನ್ ಕಾರ್ಯಕ್ರಮವನ್ನು ಮೈಸೂರು ಜಿಲ್ಲೆಯ ಎಲ್ಲಾ 10ನೇ ತರಗತಿ (ಪೌಢಶಾಲೆ) ಮಕ್ಕಳು ನೇರವಾಗಿ ಆಲಿಸಬಹುದು ಹಾಗೂ ಈ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರಶ್ನೆಗಳು ಅಥವಾ ಅನುಮಾನಗಳು ಇದ್ದಲ್ಲಿ ಸಂಪನ್ಮೂಲ ವ್ಯಕ್ತಿಗಳ ಜೊತೆ ನೇರವಾಗಿ ಹಂಚಿಕೊಳ್ಳಬಹುದು. ನೇರ ಫೋನ್–ಇನ್ ಕಾರ್ಯಕ್ರಮದಲ್ಲಿ ಮಾತನಾಡ ಬಯಸುವವರು ನಿಲಯದ ದೂರವಾಣಿ ಸಂಖ್ಯೆ: 8296725912 / 0821–2546563ಗೆ ಕರೆ ಮಾಡಬಹುದು.

ಕಾಂಪೌಂಡ್ ನಿರ್ಮಾಣಕ್ಕೆ ಭೂಮಿ ಪೂಜೆ



ಮೈಸೂರಿನ ಚಾಮುಂಡಿ ಮಕ್ಕಳ ಮನೆಯಲ್ಲಿ ಕಾಂಪೌಂಡ್ ನಿರ್ಮಾಣಕ್ಕೆ ನಗರಪಾಲಿಕೆ ಮಾಜಿ ಸದಸ್ಯ ಎಸ್.ಬಿ.ಎಂ.ಮಂಜು ಭೂಮಿ ಪೂಜೆ ನೆರವೇರಿಸಿದರು. ಈ ವೇಳೆ ಶ್ರೀಮತಿ ಶಾಂತ, ವನಮಾಲ, ಸಂತೋಷ್, ರಘೋತ್ತಮರಾವ್, ಮುರಳೀಧರ್, ಮೋಹನ್‌ಕುಮಾರ್ ಮತ್ತಿತರರಿದ್ದರು.

ರಾಜ್ಯ ರ್‍ಯಾಂಕಿಂಗ್ ಟೇಬಲ್ ಟೆನ್ನಿಸ್ ಪಂದ್ಯಾವಳಿ




ಮೈಸೂರು,ಜು.11–ಮೈಸೂರು ಜಿಲ್ಲಾ ಟೇಬಲ್ ಟೆನ್ನಿಸ್ ಅಸೋಸಿಯೇಷನ್ ಜು.18 ರಿಂದ 21ರವರೆಗೆ ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿರುವ ವಿವಿ ಜಿಮ್ನಾಷಿಯಂ ಹಾಲ್‌ನಲ್ಲಿ ರಾಜ್ಯ ರ್‍ಯಾಂಕಿಂಗ್ ಟೇಬಲ್ ಟೆನ್ನಿಸ್ ಪಂದ್ಯಾವಳಿ ಆಯೋಜಿಸಲಾಗಿದೆ. ಅಂಡರ್–11, ಅಂಡರ್–13, ಅಂಡರ್–15, ಅಂಡರ್–17, ಅಂಡರ್–19 ಬಾಲಕ, ಬಾಲಕಿಯರು, ಪುರುಷರ ಸಿಂಗಲ್ಸ್ ಮತ್ತು ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಪಂದ್ಯಗಳು ನಡೆಯಲಿವೆ. ಜು.14ರೊಳಗೆ ತಮ್ಮ ಹೆಸರು ನೋಂದಾಯಿಸಿಕೊಳ್ಳಲು ಕೋರಲಾಗಿದೆ. ಮಾಹಿತಿಗೆ ಆರ್.ರೋಹಿತ್, ಮೊ. 9448750558 ಸಂಪರ್ಕಿಸಬಹುದು.

ನಾಳೆ ರಕ್ತದಾನ ಶಿಬಿರ

ಮೈಸೂರು, ಜು.11–ಮೈಸೂರಿನ ದಟ್ಟಗಳ್ಳಿಯಲ್ಲಿರುವ ನಯನ ಕುಮಾರ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಲಯನ್ಸ್ ಬ್ಲಡ್ ಸೆಂಟರ್ ಜೀವಧಾರ ಸಹಯೋಗದಲ್ಲಿ ಜು.13ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 1.30ರವರೆಗೆ ರಕ್ತದಾನ ಶಿಬಿರ ಆಯೋಜಿಸಲಾಗಿದೆ. ಮಾಹಿತಿಗೆ ಮೊ. 9513310100, 9513310102 ಸಂಪರ್ಕಿಸಬಹುದು.

ನೊದೇಕೊಪ್ಪಲಿನ ವ್ಯಕ್ತಿ ನಾಪತ್ತೆ



ಮಂಡ್ಯ,ಜು.11–ಪಾಂಡವಪುರ ತಾಲೂಕಿನ ನೊದೇಕೊಪ್ಪಲು ಗ್ರಾಮದ ರಂಗನಾಥ್ ನಾಪತ್ತೆಯಾಗಿದ್ದಾರೆ. ಕಳೆದ ಜೂ.6ರಂದು ಮನೆಯಿಂದ ಹೊರ ಹೋದವರು ಇದುವರೆಗೂ ವಾಪಸ್ ಬಂದಿಲ್ಲ ಎಂದು ಪಾಂಡವಪುರ ಪೊಲೀಸ್ ಠಾಣೆಯಲ್ಲಿ ಕುಟುಂಬದವರು ಪ್ರಕರಣ ದಾಖಲಿಸಿದ್ದಾರೆ. ಇವರಿಗೆ ಮಾತನಾಡಲು ಬರುವುದಿಲ್ಲ. ಕಿವಿ ಸಹ ಕೇಳಿಸುವುದಿಲ್ಲ. ಇವರ ಬಗ್ಗೆ ಮಾಹಿತಿ ತಿಳಿದಲ್ಲಿ ಪಾಂಡವಪುರ ಪೊಲೀಸ್ ಠಾಣೆ ಮೊ.99006 68080 ಸಂಪರ್ಕಿಸಲು ಕೋರಲಾಗಿದೆ.

ನಿಧನ

ಸೈಯದ್ ಜಬಿ ಉಲ್ಲಾ



ಮೈಸೂರು, ಜು. 11– ಮೈಸೂರಿನ ರಾಜೀವ್‌ನಗರ ನಿವಾಸಿ, ಜನರಲ್ ಮರ್ಚೆಂಟ್ ಮತ್ತು ಎಲೆಕ್ಟ್ರೀಷಿಯನ್ ಸೈಯದ್ ಜಬಿ ಉಲ್ಲಾ (54) ಬುಧವಾರ ಸಂಜೆ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು, 7 ಮಂದಿ ಸಹೋದರರು, ಮೂವರು ಸಹೋದರಿಯರು ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ (ಜು.11) ಮಧ್ಯಾಹ್ನ ಟಿಪ್ಪು ಸರ್ಕಲ್ ಹಿಂಭಾಗ ಇರುವ ಮುಸ್ಲಿಮರ ರುದ್ರಭೂಮಿ ಗೇಟ್ ನಂ.1ರಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜಯಮ್ಮ



ಮೈಸೂರಿನ ಗಾಂಧಿನಗರದ ನಿವಾಸಿ ಎಂ.ಜಯಮ್ಮ (80) ಗುರುವಾರ ನಿಧನರಾದರು. ಇವರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಗುರುವಾರ ಸಂಜೆ ಗಾಂಧಿನಗರದ ಆದಿಜಾಂಬವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮುಡಾ ಬಹುಕೋಟಿ ಹಗರಣ: ಹೈಕೋರ್ಟ್‌ನಿಂದ ಸ್ವಯಂ ಪ್ರಕರಣ ದಾಖಲಿಸಿಕೊಳ್ಳಲು ಆಗ್ರಹಿಸಿ ಪ್ರತಿಭಟನೆ



ಮುಡಾ ಹಗರಣವನ್ನು ಹೈಕೋರ್ಟ್ ಸ್ವಯಂ ಪ್ರಕರಣ ದಾಖಲಿಸಿಕೊಳ್ಳಲು ಒತ್ತಾಯಿಸಿ ಪಿ.ಜಿ. ಜನಸ್ಪಂದನ ಫೌಂಡೇಷನ್ ವತಿಯಿಂದ ಅರಸು ರಸ್ತೆ, ನಾರಾಯಣ ಶಾಸ್ತ್ರಿ ರಸ್ತೆ ಜಂಕ್ಷನ್‌ನಲ್ಲಿ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಜು.11 (ಜಿಎ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) 50:50 ಅನುಪಾತದಲ್ಲಿ ನಿವೇಶನ ಹಂಚಿಕೆಯಲ್ಲಿನ ಬಹುಕೋಟಿ ಹಗರಣದ ಕುರಿತು ಉಚ್ಚ ನ್ಯಾಯಾಲಯ ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ನಡೆಸಬೇಕೆಂದು ಒತ್ತಾಯಿಸಿ ಪಿ.ಜಿ.ಜನಸ್ಪಂದನ ಫೌಂಡೇಷನ್ ವತಿಯಿಂದ ಅರಸು ರಸ್ತೆ, ನಾರಾಯಣಶಾಸ್ತ್ರಿ ರಸ್ತೆ ಜಂಕ್ಷನ್‌ನಲ್ಲಿ ಪ್ರತಿಭಟನೆ ನಡೆಸಲಾಯಿತು.

ಇತ್ತೀಚಿನ ದಿನಗಳಲ್ಲಿ ಮುಡಾ ಹಗರಣದ ಕುರಿತು ವಿವಿಧ ರಾಜಕೀಯ ಪಕ್ಷದ ಕೆಲ ಮುಖಂಡರು ಮತ್ತು ಚುನಾಯಿತ ಜನಪ್ರತಿನಿಧಿಗಳು, ಕೆಲ ಆರ್‌ಟಿಐ ಕಾರ್ಯಕರ್ತರು ವಿಭಿನ್ನ ಹೇಳಿಕೆ ನೀಡುತ್ತಾ ಸಾರ್ವಜನಿಕ ವಲಯದಲ್ಲಿ ಗೊಂದಲ ಸೃಷ್ಟಿಸುತ್ತಿದ್ದಾರೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಮುಡಾ ಅಧ್ಯಕ್ಷರೇ ಹಗರಣ ನಡೆದಿರುವುದನ್ನು ಒಪ್ಪಿಕೊಂಡಿದ್ದಾರೆ. ಜತೆಗೆ ರಾಜ್ಯ ಸರ್ಕಾರ ಹಗರಣದ ತನಿಖೆಗೆ ಐಎಎಸ್ ಅಧಿಕಾರಿಗಳ ತಂಡ ನೇಮಿಸಿದ್ದು, ಜಿಲ್ಲಾಧಿಕಾರಿ, ಮುಡಾ ಆಯುಕ್ತರನ್ನು ವರ್ಗಾವಣೆ ಮಾಡಿರುವುದನ್ನು ನೋಡಿದರೆ ಹಗರಣ ನಡೆದಿರುವುದು ಸ್ಪಷ್ಟವಾಗುತ್ತದೆ. ಹಗರಣದ ಕುರಿತು ನಗರಾಭಿವೃದ್ಧಿ ಸಚಿವರ ಹೇಳಿಕೆ ಶಾಸಕಾಂಗ, ಕಾರ್ಯಾಂಗ ಆಡಳಿತ ವ್ಯವಸ್ಥೆ ಹದಗೆಟ್ಟಿರುವುದು ಸತ್ಯ ಎಂಬುದು ತಿಳಿಯುತ್ತದೆ ಎಂದು ಬೇಸರ ಹೊರಹಾಕಿದರು.

ಜನಪ್ರತಿನಿಧಿಗಳು ಮುಗಿಬಿದ್ದು ದಿನಕ್ಕೊಂದು ಹೇಳಿಕೆ ನೀಡುತ್ತಿದ್ದು, ಪ್ರಕರಣ ಮುಚ್ಚಿ ಹಾಕಲು ಯತ್ನಿಸುತ್ತಿದ್ದಾರೆ. ಹೀಗಾಗಿ ಉಚ್ಚ ನ್ಯಾಯಾಲಯ ಸ್ವಯಂ ಪ್ರೇರಿತವಾಗಿ ದೂರು ದಾಖಲಿಸಿಕೊಂಡು ತನಿಖೆ ನಡೆಸುವ ಮೂಲಕ ತಪ್ಪಿತಸ್ಥರಿಗೆ ಶಿಕ್ಷೆಯಾಗುವಂತೆ ಮಾಡಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಮೈಸೂರು ಮಹಾನಗರಪಾಲಿಕೆ ಮಾಜಿ ಸದಸ್ಯ ಪ್ರಶಾಂತ್‌ಗೌಡ, ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಎ.ರವಿ, ವಕೀಲ ಗೋಪಿನಾಥ್, ಮುಖಂಡರಾದ ಎನ್.ಆರ್.ರಾಮಪ್ರಸಾದ್, ಅನೋಜ್ ಸರಸ್ವತ್, ಗುರುಪ್ರಸಾದ್, ಆದಿತ್ಯ, ಗುರುರಾಜಶೆಟ್ಟಿ, ನಿತಿನ್, ಪ್ರಶಾಂತ್, ಸಂತೋಷ್ ಸೇರಿದಂತೆ ಇನ್ನಿತರರಿದ್ದರು.

ಅರ್ಜಿ ಆಹ್ವಾನ

ಮೈಸೂರು, ಜು.11– 2024–25ನೇ ಶೈಕ್ಷಣಿಕ ಸಾಲಿಗೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಧೀನದ ಮೆಟ್ರಿಕ್ ನಂತರದ ಬಾಲಕ, ಬಾಲಕಿಯರ ವಿದ್ಯಾರ್ಥಿನಿಲಯಗಳಿಗೆ (ಪಿ.ಯು.ಸಿ ಮತ್ತು ಪಿ.ಯು.ಸಿ ಸಮಾನಾಂತರ ಕೋರ್ಸಿನ ವಿದ್ಯಾರ್ಥಿಗಳಿಗೆ ಮಾತ್ರ) ಪ್ರವೇಶಾತಿಗೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ಅರ್ಹ ಅಭ್ಯರ್ಥಿಗಳು ಅರ್ಜಿಯನ್ನು http://shp.karnataka.gov.in ಮೂಲಕ ಆಗಸ್ಟ್ 5ರೊಳಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ https://dom.karnataka.gov.in/ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿಗಳ ದೂ.ಸಂ:0821–2422088 ಸಂಪರ್ಕಿಸಬಹುದು. ಮೈಸೂರು ಜಿಲ್ಲಾ ಮಾಹಿತಿ ಕೇಂದ್ರ: 8951087207, ಹುಣಸೂರು: 9620750935, ಕೆ.ಆರ್.ನಗರ: 9986346893, ಪಿರಿಯಾಪಟ್ಟಣ: 6362661474, ಹೆಚ್.ಡಿ.ಕೋಟೆ ದೂ.ಸಂ: 9663157476, ಟಿ.ನರಸೀಪುರ: 8277775750 ಹಾಗೂ ನಂಜನಗೂಡು :9743567567 ಸಂಪರ್ಕಿಸಬಹುದು

ಸಿಎಂ ಪತ್ನಿಗೆ ಬದಲಿ ನಿವೇಶನ ವಿರುದ್ಧ ಷಡ್ಯಂತರ
ನಾಳೆ ಮೈಸೂರಲ್ಲಿ ದುಂಡು ಮೇಜಿನ ಸಭೆ



ಕೆ.ಎಸ್.ಶಿವರಾಮು

ಮೈಸೂರು,ಜು.11(ಜಿಎ)–ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರಿಗೆ ಮುಡಾದವರು ಬದಲಿ ನಿವೇಶನ ನೀಡಿದ ವಿಚಾರದಲ್ಲಿ ಷಡ್ಯಂತ್ರ ನಡೆಸುತ್ತಿರುವುದನ್ನು ಖಂಡಿಸಿ ಹಾಗೂ ಸಾಮಾಜಿಕ ಕಳಕಳಿ ಹೊಂದಿರುವ ಹಿಂದುಳಿದ ವರ್ಗದ ನಾಯಕನನ್ನು ಬೆಂಬಲಿಸಿ ಜು.13ರಂದು ಬೆಳಗ್ಗೆ 11ಕ್ಕೆ ನಗರದ ಗುರು ರೆಸಿಡೆನ್ಸಿ ಹೋಟೆಲ್‌ನಲ್ಲಿ ದುಂಡು ಮೇಜಿನ ಸಭೆ ಹಮ್ಮಿಕೊಳ್ಳಲಾಗಿದೆ ಎಂದು ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಡಾದಲ್ಲಿ ನಡೆದಿರುವ ಅಕ್ರಮಗಳ ಕುರಿತು ಬಹಳಷ್ಟು ನಾಯಕರು ಈಗ ದೊಡ್ಡ ದನಿಯಲ್ಲಿ ಮಾತನಾಡುತ್ತಿದ್ದಾರೆ. 2021ರಲ್ಲೇ ನಾವು ಹೋರಾಟ ಮಾಡಿ, ಮುಖ್ಯಮಂತ್ರಿಯಾಗಿದ್ದ ಬಿ.ಎಸ್. ಯಡಿಯೂರಪ್ಪ ಅವರಿಗೆ ದಾಖಲೆ ಸಮೇತ ದೂರು ನೀಡಿದ್ದೆವು. ಆದರೆ, ಕ್ರಮ ಕೈಗೊಳ್ಳಲಿಲ್ಲ. ಇಲ್ಲಿ ಮಹಾನ್ ಭ್ರಷ್ಟಾಚಾರ ಆಗಿದ್ದರೆ ಅದರ ಪಿತಾಮಹ ಬಿ.ವೈ.ವಿಜಯೇಂದ್ರ, ಅವರ ಗ್ಯಾಂಗ್ ಸೇರಿ ಪ್ರಾಧಿಕಾರವನ್ನು ದುಃಸ್ಥಿತಿಗೆ ತಂದಿಟ್ಟಿದೆ ಎಂದು ದೂರಿದರು.

ಮುಡಾ ಆಯುಕ್ತ ಸ್ಥಾನಕ್ಕೆ ಡಿ.ಬಿ. ನಟೇಶ್ ಅವರನ್ನು ನೇಮಕ ಮಾಡಿದ್ದೇ ಬಿಜೆಪಿ ಸರ್ಕಾರ. ದಾಖಲೆಗಳ ಸಹಿತ ಸರ್ಕಾರಕ್ಕೆ ದೂರು ಸಲ್ಲಿಸಿ, ಸಿಬಿಐ ತನಿಖೆಗೂ ಆಗ್ರಹಿಸಿದ್ದೆವು. ಸಾಹಿತಿಗಳು ಹಾಗೂ ಚಿಂತಕರು ಬೆಂಬಲ ಕೊಟ್ಟಿದ್ದರು. ಆಗೇಕೆ ವಿಜಯೇಂದ್ರ ಮಾತನಾಡಿರಲಿಲ್ಲ. ಆಗ ನನಗೆ ಕೊಲೆ ಬೆದರಿಕೆಯೂ ಬಂದಿತ್ತು. ಯಡಿಯೂರಪ್ಪ ಸರ್ಕಾರ ಇದ್ದಾಗಲೇ ಮುಡಾದಲ್ಲಿ ಬಹಳಷ್ಟು ಭ್ರಷ್ಟಾಚಾರ ನಡೆದಿದೆ ಎಂದು ಆರೋಪಿಸಿದರು.

ಬಿಜೆಪಿಯವರು, ನಾವು ದಾಖಲೆ ಕೊಟ್ಟಾಗ ಸುಮ್ಮನಿದ್ದು, ಈಗ ಸಿಬಿಐಗೆ ವಹಿಸುವಂತೆ ಕೇಳಲು ನೈತಿಕತೆ ಇದೆಯೇ? ವಿಜಯೇಂದ್ರ ಬಹಿರಂಗ ಚರ್ಚೆಗೆ ಬರಲಿ ಎಂದು ಸವಾಲೆಸೆದರು. ನಟೇಶ್ ಆಯುಕ್ತರಾಗಿ ಬಂದ ನಂತರದಿಂದ ಇಲ್ಲಿಯವರೆಗೆ ಆಗಿರುವ ಹಗರಣ ಅಕ್ರಮಗಳೆಲ್ಲವನ್ನೂ ತನಿಖೆ ನಡೆಸಬೇಕು. ಎಲ್ಲ ಬದಲಿ ನಿವೇಶನಗಳನ್ನೂ ವಾಪಸ್ ಪಡೆದುಕೊಂಡು ಬಡವರಿಗೆ ಹಂಚಿಕೆ ಮಾಡಬೇಕು. ಹಗರಣಕ್ಕೆ ಸಂಬಂಧಿಸಿದಂತೆ ನನ್ನ ಬಳಿ ಇರುವ ದಾಖಲೆಗಳನ್ನು ಸರ್ಕಾರಕ್ಕೆ ನೀಡಲಿದ್ದೇನೆ ಎಂದರು.

ಸುದ್ದಿಗೋಷ್ಠಿಯಲ್ಲಿ ವಿವಿಧ ಸಮಾಜಗಳ ಮುಖಂಡರಾದ ಯೋಗೇಶ್ ಉಪ್ಪಾರ, ರವಿನಂದನ್, ಮೊಗಣ್ಣಾಚಾರ್, ರಾಜೇಶ್, ಲೋಕೇಶ್, ಹೆಚ್.ಎಸ್.ಪ್ರಕಾಶ್ ಇದ್ದರು.

ಫಲಾನುಭವಿಗಳಿಗೆ ಹೊಲಿಗೆ ಯಂತ್ರ ವಿತರಣೆ




ಮೈಸೂರು ಪಾಲಿಕೆ ವಲಯ ಕಚೇರಿ 1ರ ವ್ಯಾಪ್ತಿಯಲ್ಲಿ ಬರುವ ವಾರ್ಡ್ ನಂ.49 50, 51ರ ಫಲಾನುಭವಿಗಳಿಗೆ ಶಾಸಕ ಟಿ.ಎಸ್.ಶ್ರೀವತ್ಸ ಹೊಲಿಗೆ ಯಂತ್ರಗಳನ್ನು ವಿತರಿಸಿದರು. ಈ ಸಂದರ್ಭದಲ್ಲಿ ವಲಯ ಕಚೇರಿ ಅಧಿಕಾರಿಗಳಾದ ಮಂಜುನಾಥ್ ರೆಡ್ಡಿ, ಸುಶ್ರುತ್, ಬಿಜೆಪಿ ಮುಖಂಡರಾದ ಎನ್.ಪ್ರದೀಪ್‌ಕುಮಾರ್ ಉಪಸ್ಥಿತರಿದ್ದರು.

25ನೇ ವಿಶ್ವ ಮಾಸ್ಟರ್ಸ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ಗೆ ಯೋಗೇಂದ್ರ



ಮೈಸೂರು,ಜು.11–ಆಗಸ್ಟ್ 13ರಿಂದ 25ರವರೆಗೆ ಸ್ವೀಡನ್‌ನ ಗೋತನ್ ಬರ್ಗ್‌ನಲ್ಲಿ ನಡೆಯುವ 25ನೇ ವಿಶ್ವ ಮಾಸ್ಟರ್ಸ್ ಅಥ್ಲೆಟಿಕ್ಸ್ ಚಾಂಪಿಯನ್ ಶಿಪ್‌ಗೆ ಅಂತರರಾಷ್ಟ್ರೀಯ ಅಥ್ಲೆಟ್ ಹಾಗೂ ಮೈಸೂರು ಅಥ್ಲೆಟಿಕ್ಸ್ ಕ್ಲಬ್ ಕಾರ್ಯದರ್ಶಿ ಮಾದಪ್ಪ ಯೋಗೇಂದ್ರ ಆಯ್ಕೆಯಾಗಿದ್ದಾರೆ. ಇವರು 2000 ಅಡೆತಡೆ(ಸ್ಟೀಪಲ್ ಚೇಸ್ 60+) ಓಟದಲ್ಲಿ ಪಾಲ್ಗೊಳ್ಳಲಿದ್ದಾರೆ. ಇತ್ತೀಚೆಗೆ ಪುಣೆಯಲ್ಲಿ ನಡೆದ 44ನೇ ರಾಷ್ಟ್ರೀಯ ಮಾಸ್ಟರ್ ಅಥ್ಲೆಟ್ಸ್ ಚಾಂಪಿಯನ್‌ಶಿಪ್ ಕ್ರೀಡಾಕೂಟದಲ್ಲಿ 200 ಮೀಟರ್ ಸ್ಟೀಪಲ್ ಚೇಸ್‌ನಲ್ಲಿ ಚಿನ್ನದ ಪದಕ ಪಡೆದಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

12.07.2024 ಶುಕ್ರವಾರ, ಮಳೆ ನಕ್ಷತ್ರ : ಪುನರ್ವಸು 6.07.2024 ರಿಂದ 19.07.2024
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲ ಪಕ್ಷ,
ತಿಥಿ: ಷಷ್ಠಿ, ನಕ್ಷತ್ರ: ಉತ್ತರಾ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಆಲ್ಕೋಹಾಲ್‌ನಿಂದ ಉಂಟಾಗುವ ಯಕೃತ್ತಿನ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ಜೆಎಸ್‌ಎಸ್ ಮಹಾ ವಿದ್ಯಾಪೀಠ, ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್:** ಗುಜರಾತ್ ಕರಕುಶಲ ಉತ್ಸವ–2024, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10ರಿಂದ.

■ **ಸಹಾರ ಮಹಿಳಾ ಸ್ವ ಸಹಾಯ ಸಂಘ, ಸಹಾರ ಹ್ಯಾಂಡಿಕ್ರಾಫ್ಟ್, ಹ್ಯಾಂಡ್‌ಲೂಮ್ ಅಸೋಸಿಯೇಷನ್:** ಸಹಾರ ಆರ್ಟ್ ಅಂಡ್ ಕ್ರಾಫ್ಟ್ ಶಾಪಿಂಗ್ ಫೆಸ್ಟಿವಲ್–2024 ಪ್ರದರ್ಶನ ಮತ್ತು ಮಾರಾಟ, ಸ್ಥಳ: ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನ, ಹಳೇ ಜಿಲ್ಲಾಧಿಕಾರಿ ಕಚೇರಿ ಹಿಂಭಾಗ, ಬೆಳಗ್ಗೆ 10 ಗಂಟೆಯಿಂದ.

■ **ಜೆಎಸ್‌ಎಸ್ ವೈದ್ಯಕೀಯ ಕಾಲೇಜು ಕಿವಿ, ಮೂಗು, ಗಂಟಲು ವಿಭಾಗ :** ಲ್ಯಾರಿಂಗಾಲಜಿ ಸಮ್ಮೇಳನ, ಸ್ಥಳ: ಜೆಎಸ್‌ಎಸ್ ಆಸ್ಪತ್ರೆ ರಾಜೇಂದ್ರ ಶತಮಾನೋತ್ಸವ ಸಭಾಂಗಣ, ಬೆಳಗ್ಗೆ 10ಕ್ಕೆ

■ **ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ :** ಫೌಂಡೇಷನ್ ಮತ್ತು ಬಿವಿ.ಎ. ವಿದ್ಯಾರ್ಥಿಗಳಿಂದ ಮಂಡಲ ಚಿತ್ರಕಲಾ ಪ್ರದರ್ಶನ, ಸ್ಥಳ: ಶ್ರೀಕಲಾನಿಕೇತನ ಸ್ಕೂಲ್ ಆಫ್ ಆರ್ಟ್, ವಿಜಯನಗರ, ಬೆಳಗ್ಗೆ 10 ರಿಂದ.

■ **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್ :** ಅಕ್ಯೂಪ್ರೆಶರ್, ಸುಜೋಕ್, ಅಕ್ಯು ಡಿಜಿಟಲ್ ಫಿಶೀಯೋಥೆರಪಿ ಚಿಕಿತ್ಸಾ ಶಿಬಿರ, ಸ್ಥಳ: ಶ್ರೀ ಸಂಕಷ್ಟಹರ ಗಣಪತಿ ಸೇವಾ ಸಮಿತಿ ಆವರಣ, ಶ್ರೀರಾಂಪುರ 2ನೇ ಹಂತ, ಬೆಳಗ್ಗೆ 10.30 ರಿಂದ.

■ **ದಿ ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರಿಂಗ್:** ಪದವೀಧರರ ದಿನಾಚರಣೆ, ಮುಖ್ಯ ಅತಿಥಿಗಳು: ಎಐಸಿಟಿಇ, ನವದೆಹಲಿ ಅಧ್ಯಕ್ಷ ಪ್ರೊ.ಸೀತಾರಾಮ್, ಅಧ್ಯಕ್ಷತೆ: ಎನ್‌ಐಇ ಅಧ್ಯಕ್ಷ ಡಾ.ಎಂ.ಎಸ್.ರಂಗನಾಥ್, ಸ್ಥಳ: ಎನ್‌ಐಇ ಡೈಮಂಡ್ ಜ್ಯೂಬಿಲಿ ಇಂಡೋರ್ ಸ್ಪೋರ್ಟ್ಸ್ ಕಾಂಪ್ಲೆಕ್ಸ್, ಬೆಳಗ್ಗೆ 10.30 ರಿಂದ.

■ **ಭುವನೇಶ್ವರಿ ಸೇವಾ ಟ್ರಸ್ಟ್:** ಕನ್ನಡ ಕುಲ ಪುರೋಹಿತ ಆಲೂರು ವೆಂಕಟರಾವ್ ಅವರ 144ನೇ ಜನ್ಮ ದಿನಾಚರಣೆ, ಮುಖ್ಯ ಅತಿಥಿಗಳು: ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಮಾಜಿ ಅಧ್ಯಕ್ಷ ಡಾ.ವೈ.ಡಿ. ರಾಜಣ್ಣ, ಚಂದ್ರಶೇಖರ್, ಮೈಸೂರು ನಗರ–ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಹಿರಿಯ ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ, ಸಾಹಿತಿಗಳಾದ ಲೀಲಾ ಪ್ರಕಾಶ್, ಪುಷ್ಪ ಅಯ್ಯಂಗಾರ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಕಾಂಗ್ರೆಸ್ ಮುಖಂಡ ಎನ್.ಎಂ.ನವೀನ್ ಕುಮಾರ್, ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್, ಸ್ಥಳ: ಚಾಮುಂಡಿಪುರಂ ವೃತ್ತದಲ್ಲಿರುವ ತಗಡೂರು ರಾಮಚಂದ್ರರಾವ್ ಉದ್ಯಾನವನ, ಬೆಳಗ್ಗೆ 11ಕ್ಕೆ.

■ **ಮರಿಮಲ್ಲಪ್ಪ ಪ್ರೌಢಶಾಲೆ :** ಭಾಷಾ ಸಮ್ಮಿಲನ ಕಾರ್ಯಕ್ರಮ, ಅಧ್ಯಕ್ಷತೆ: ಮರಿಮಲ್ಲಪ್ಪ ಪ್ರೌಢಶಾಲೆ ಶೈಕ್ಷಣಿಕ ಅಧಿಕಾರಿ ಶ್ರೀಮತಿ ಮಂಗಳ ಮುದ್ದುಮಾದಪ್ಪ, ಮುಖ್ಯ ಅತಿಥಿಗಳು: ಇಂಜಿನಿಯರ್ ಮಂಜುನಾಥ್ ಕುಣಿಗಲ್, ಉಪಸ್ಥಿತರು : ಮುಖ್ಯೋಪಾಧ್ಯಾಯಿನಿ ಶ್ರೀಮತಿ ಎಸ್.ಮಮತ, ಸಹ ಮುಖ್ಯೋಪಾಧ್ಯಾಯ ಹೆಚ್.ಎಸ್. ಮಹೇಶ್, ಸ್ಥಳ: ಗ್ಯಾಲರಿ ಹಾಲ್, ಮಧ್ಯಾಹ್ನ 2.30ಕ್ಕೆ.

■ **ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ :** ಶ್ರೀ ಗಿರಿಜಾ ಕಲ್ಯಾಣ ಮಹೋತ್ಸವ, ಷಷ್ಠಿ ಶುಕ್ರವಾರ ಹಗಲು ರಾತ್ರಿ ಔಪಾಸನೆ, ಉಯ್ಯಾಲೋತ್ಸವ, ರಾತ್ರಿ 7ಕ್ಕೆ ಹೊರೆಯಲ್ಲಿ ಪಾಕಿನಿ ಉತ್ಸವ, ಸ್ಥಳ: ಕೋಟೆ ತ್ರಿನೇಶ್ವರ ದೇವಸ್ಥಾನ, ಅರಮನೆ ಆವರಣ.

■ **ನೂಪುರ ಕಲಾವಿದರು ಸಾಂಸ್ಕೃತಿಕ ಟ್ರಸ್ಟ್, ಕನ್ನಡ–ಸಂಸ್ಕೃತಿ ಇಲಾಖೆ:** ಮೈಸೂರು ನೃತ್ಯ ಗುರುಪರಂಪರಾ ಉತ್ಸವದ ಸಮಾರೋಪ ಸಮಾರಂಭ, ಅಧ್ಯಕ್ಷತೆ: ನೃತ್ಯಾಲಯ ಟ್ರಸ್ಟ್ ನಿರ್ದೇಶಕ ಡಾ.ತುಳಸೀ ರಾಮಚಂದ್ರ, ಮುಖ್ಯ ಅತಿಥಿಗಳು: ಕನ್ನಡ–ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ನಾಟ್ಯಾಚಾರ್ಯ ಎಂ.ವಿಷ್ಣುದಾಸ್ ಸಂಸ್ಮರಣೆ ಅಂಗವಾಗಿ ನಾಟ್ಯಾಚಾರ್ಯ ಪ್ರೊ.ಕೆ.ರಾಮಮೂರ್ತಿರಾವ್ ಶಿಷ್ಯ ವೃಂದದವರಿಂದ ನೃತ್ಯ ನಮನ, ನಟುವಾಂಗ ಮತ್ತು ಗಾಯನ–ವಿದ್ವಾನ್ ಕೆ.ರಾಮಮೂರ್ತಿರಾವ್, ಮೃದಂಗ –ವಿದ್ವಾನ್ ಎಂ.ಆರ್. ಹನುಮಂತರಾಜು, ವಯೋಲಿನ್–ವಿದ್ವಾನ್ ಎಚ್.ಎಸ್. ತಾಂಡವಮೂರ್ತಿ, ಸ್ಥಳ: ಸಂಗೀತ ಕಲಾನಿಧಿ ಮೈಸೂರು ವಾಸುದೇವಾಚಾರ್ಯ ಭವನ, ಚಾಮುಂಡಿಪುರಂ, ಸಂಜೆ 6ಕ್ಕೆ.

■ **ಸುರಭಿ ಗಾನ ಕಲಾಮಂದಿರ ಚಾರಿಟಬಲ್ ಟ್ರಸ್ಟ್:** ಅರಳು ಪ್ರತಿಭೆ, ಪ್ರತಿಭಾಂಕುರ–ನೂತನ ಸಂಗೀತ ಮಾಲಿಕೆ–ದ್ವಾದಶ ಕುಸುಮ, ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದುಷಿ ಧಾತ್ರಿ ಕುಮಾರ್ –ಗಾಯನ, ವಿದುಷಿ ತನ್ಮಯಿ ಉಪ್ಪಂಗಳ, ಪುತ್ತೂರು–ವಯೋಲಿನ್, ವಿದ್ವಾನ್ ವಿ. ಭಾರ್ಗವ್, ಮೈಸೂರು–ಮೃದಂಗ, ವಿದ್ವಾನ್ ಎಸ್. ಮಂಜುನಾಥ್, ಮೈಸೂರು–ಘಟಂ, ಸ್ಥಳ: ಗಾನಭಾರತಿ (ವೀಣೆ ಶೇಷಣ್ಣ ಭವನ), ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.

■ **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್:** ಶ್ರೀ ಮಹಾವಾರಾಹಿ ಗುಪ್ತ (ಆಷಾಢ) ನವರಾತ್ರಿ ಮಹೋತ್ಸವ, ಬೆಳಗ್ಗೆ 8.30 ರಿಂದ ಪುಣ್ಯಾಹ, ನಾಂದಿ, ಗಣಪತಿ ಪೂಜಾ, ಮಹಾಸಂಕಲ್ಪ, ಕಲಶ ಸ್ಥಾಪನಾ, ಸಪ್ತಶತಿ ಪಾರಾಯಣ, ಶ್ರೀ ಚಕ್ರಾರ್ಚನೆ, ನವಾವರಣ ಪೂಜಾ, ಸಂಜೆ 5.30ರಿಂದ ಶ್ರೀ ಮಹಾವಾರಾಹಿ ಸಹಸ್ರನಾಮ ಹೋಮ, ಶ್ರೀ ಮಹಾಗಣಪತಿ, ಶ್ರೀ ಶ್ವೇತಾರ್ಕಗಣಪತಿ, ಶ್ರೀ ಬಾಲಗಣಪತಿ ಹೋಮ, ಪೂರ್ಣಾಹುತಿ, ಕುಂಕುಮಾರ್ಚನೆ, ಬಲಿಹರಣ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಫೌಂಡೇಷನ್ ಆವರಣ.

■ **ಶೃಂಗೇರಿ ಶ್ರೀ ಶಂಕರ ಮಠ ಅಭಿನವ ಶಂಕರಾಲಯ:** ಆಷಾಢ ಶುಕ್ರವಾರಗಳ ವಿಶೇಷ ಮಹೋತ್ಸವ, ಶ್ರೀ ಶಾರದಾ ಪರಮೇಶ್ವರಿಯವರ ಸನ್ನಿಧಿಯಲ್ಲಿ ಮಹಾಸಂಕಲ್ಪ, ಅಭಿಷೇಕಗಳು, ಹೋಮ, ಮಹಾಪೂಜೆಗಳು, ಬೆಳಗ್ಗೆ 8ಕ್ಕೆ ಮಹಾಸಂಕಲ್ಪ, ಅಭಿಷೇಕ, ಬೆಳಗ್ಗೆ 11.30ಕ್ಕೆ ಹೋಮ ಪೂರ್ಣಾಹುತಿ, ಶ್ರೀ ಕುಬೇರಲಕ್ಷ್ಮಿ ಹೋಮ, ಮಧ್ಯಾಹ್ನ 12.30ಕ್ಕೆ ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸಂಜೆ 6.30ಕ್ಕೆ ಶ್ರೀ ಶಾರದಾ ಪರಮೇಶ್ವರಿ ಅಮ್ಮನವರಿಗೆ ಪುರಾಣೋಕ್ತ ವಿಶೇಷ ಅಲಂಕಾರಗಳು, ವಿದುಷಿ ಕೀರ್ತನ ಮತ್ತು ಪ್ರಾರ್ಥನಾ ವೃಂದದವರಿಂದ ಶಾಸ್ತ್ರೀಯ ಸಂಗೀತ ಗಾಯನ, ಸ್ಥಳ: ಶ್ರೀಶಂಕರ ಮಠ ಅಭಿನವ ಶಂಕರಾಲಯ, ಫೋರ್ಟ್ ಮೊಹಲ್ಲಾ.

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ಚಿ. ಎಸ್.ಕೆ. ಹೃಶಿಕೇಶ್ ಭಾರದ್ವಾಜ್ ಅವರಿಂದ ಗಾಯನ, ಕು. ಪೃಥ್ವಿ ಭಾಸ್ಕರ್–ಪಿಟೀಲು, ವಿದ್ವಾನ್ ಬಿ.ಜೆ. ಶ್ರೀನಿವಾಸ್–ಮೃದಂಗ, ಚಿ. ಧೀಮಂತ ಭಟ್ಟ–ಘಟಂ, ಸ್ಥಳ: ಜಯನಗರ ಶ್ರೀರಾಮಮಂದಿರ, ಸಂಜೆ 6 ರಿಂದ.

■ **ಕಲಾಸುರುಚಿ ರಂಗಮನೆ :** ಇಂದ್ರ ಕೀಲಕ ಊರ್ವಶಿ ಶಾಪ ಕುರಿತು ಯಕ್ಷಗಾನ ತಾಳ ಮದ್ದಳೆ, ಸ್ಥಳ: ಸುರುಚಿ ರಂಗಮನೆ, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 6.30ಕ್ಕೆ.

ನಂಜನಗೂಡಿನಲ್ಲಿಂದು

■ **ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯ :** ಶ್ರೀ ಗಿರಿಜಾ ಕಲ್ಯಾಣ, ವರಪೂಜಾ ಮಹೋತ್ಸವ, ಬೆಳಗ್ಗೆ 10.30 ರಿಂದ ಎಂ. ಮಹದೇವಸ್ವಾಮಿ ಮತ್ತು ತಂಡದಿಂದ ಸುಗಮ ಸಂಗೀತ, ಬೆಳಗ್ಗೆ 11.30 ರಿಂದ ಬಿ.ಎಸ್. ಗಂಗಾಧರಚಾರ್ ಮತ್ತು ತಂಡದಿಂದ ಹರಿಕಥೆ, ಸಂಜೆ 4.30 ರಿಂದ ಏಚಗಳ್ಳಿ ಜಿ. ಶಿವಣ್ಣ ಅವರಿಂದ ತಬಲವಾದನ, ಸಂಜೆ 5.30 ರಿಂದ ಶ್ರೀಮತಿ ಅನುಷಾ ವಿವೇಕ್ ಮತ್ತು ವೃಂದದವರಿಂದ ಶಾಸ್ತ್ರೀಯ ಸಂಗೀತ, ಸಂಜೆ 6.30 ರಿಂದ ಶ್ರೀಮತಿ ಆರ್. ಶ್ರೀವಿದ್ಯಾ, ಶ್ರೀವಿದ್ಯಾ ಸಂಗೀತ ಮತ್ತು ನೃತ್ಯಶಾಲೆಯವರಿಂದ ವೀಣಾವಾದನ, ರಾತ್ರಿ 7.30 ರಿಂದ ಮೈಸೂರು ಎಂ. ನಾಗರಾಜು ಮತ್ತು ಡಾ. ಎಂ. ಮಂಜುನಾಥ್ ತಂಡದಿಂದ ದ್ವಂದ್ವ ವಯೋಲಿನ್ ವಾದನ, ಸ್ಥಳ: ಶ್ರೀಕಂಠೇಶ್ವರ ದೇವಾಲಯ.

ಬೆಟ್ಟದಪುರದಲ್ಲಿಂದು

■ **ಅಮೋಘವರ್ಷ ಅಮೃತ ವರ್ಷಿಣಿ ಸೇವಾ ಪ್ರತಿಷ್ಠಾನ :** 6ನೇ ವರ್ಷದ ಪುಣ್ಯಸ್ಮರಣೆ, ಪ್ರತಿಭಾ ಪುರಸ್ಕಾರ, ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ: ಪಿರಿಯಾಪಟ್ಟಣ ತಹಸೀಲ್ದಾರ್ ಕುಂಞ ಅಹಮದ್, ಅಧ್ಯಕ್ಷತೆ: ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪ್ರಶಸ್ತಿ ಪ್ರದಾನ: ಸುನೀಲ್‌ಕುಮಾರ್, ಕ್ಷೇತ್ರ ಶಿಕ್ಷಣಾಧಿಕಾರಿ ಬಸವರಾಜು, ಡಾ.ವೈ.ಡಿ.ರಾಜಣ್ಣ, ಸ್ಥಳ: ಸರ್ಕಾರಿ ಪದವಿಪೂರ್ವ ಕಾಲೇಜು, ಬೆಳಗ್ಗೆ 10ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಬಣ್ಣದ ಬಾನಾಡಿಗಳು–ಬಾನುಲಿ ಸರಣಿ, ರಚನೆ: ಡಾ.ಎಸ್.ವಿ. ನರಸಿಂಹನ್, ಪ್ರಸ್ತುತಿ: ಜಿ.ಶಾಂತಕುಮಾರ್, 6.40 ಮತ್ತು ಸಂಜೆ 5.30 ಕರಾಮುವಿವಿ ಮುಕ್ತವಾಣಿ–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಭಾಗವಹಿಸುತ್ತಾರೆ: ಪ್ರೊ.ಶರಣಪ್ಪ ವಿ.ಹಲಸೆ, ಕುಲಪತಿಗಳು, ಪ್ರಾಯೋಜಕರು: ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯ, ಮೈಸೂರು. ಪ್ರಸ್ತುತಿ: ಎನ್.ಕೇಶವಮೂರ್ತಿ, 6.50 ರೈತರಿಗೆ ಸಲಹೆ, 7.15 KABHI-ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಕರ್ನಾಟಕ ಮೆದುಳು ಆರೋಗ್ಯ ಪ್ರಾಧಿಕಾರ, ಬೆಂಗಳೂರು, 9.00 ನಮ್ಮ ಆರೋಗ್ಯ: ಸೋಶಿಯಲ್ ರೋಲ್ ಮಾಡೆಲಿಂಗ್ ಕುರಿತು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಮನೋವೈದ್ಯಕೀಯ ವಿಭಾಗದ ಪ್ರೊಫೆಸರ್ ಹಾಗೂ ಮುಖ್ಯಸ್ಥ ಡಾ.ಬಿ.ಎನ್.ರವೀಶ್ ಅವರೊಂದಿಗೆ ಮಾತುಕತೆ. ಫಂಗಲ್ ಇನ್‌ಫೆಕ್ಷನ್ ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ಮೈಸೂರಿನ ಜೆಎಸ್‌ಎಸ್ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯ ಮೈಕ್ರೊಬಯಾಲಜಿ ವಿಭಾಗದ ಪ್ರೊಫೆಸರ್ ಡಾ.ಎಂ.ಎನ್.ಸುಮನಾ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 9.30 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಸ್ಮಿತಾ ಶ್ರೀಕಿರಣ್–ಕೊಳಲು ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, "ಸಂಗೀತ ಸಂಭ್ರಮ" ನಾದಲಯ ಸಂಗಮ, ಪ್ರಸ್ತುತಿ: ಹೆಚ್.ಎಲ್.ಶಿವಶಂಕರಸ್ವಾಮಿ, 12.30 ದೇವರನಾಮ, 12.45 ಕಾದಂಬರಿ ವಿಹಾರ –ಅ.ನ.ಕೃ ಅವರ "ಉದಯರಾಗ" ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ: ಉಮೇಶ್ ಎಸ್.ಎಸ್, 1.20 ಭಾವಗೀತೆಗಳು–ವಿದ್ಯಾಶ್ರೀ ಸಾಲಿಮಠ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಡಾ.ವಿ.ದೊರೆಸ್ವಾಮಿ ಐಯ್ಯಂಗಾರ್–ವೀಣಾ ವಾದನ, 4.00 ಮಹಿಳಾರಂಗ–ಜೀವನ್ಮುಖಿ, ವಿಷಯ–ಅಡುಗೆ ಮತ್ತು ಕ್ಲೌಡ್ ಕಿಚನ್, ಭಾಗವಹಿಸುವವರು: ಪಾಕಪ್ರವೀಣೆ: ಲತಾ ಶೇಖರ್, ಪ್ರಸ್ತುತಿ: ಸಹನಾ ಮತ್ತು ಕೀರ್ತನಾ, 4.30 ವೃತ್ತಿ ಮಾರ್ಗದರ್ಶನ: 'ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವಿಜ್ಞಾನ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು' ಕುರಿತು ಮೈಸೂರಿನ ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲರು ಹಾಗೂ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾದ ಡಾ.ಗಜಾನನ ಹೆಗಡೆ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 5.45 ಮನೋಚಿಂತನ, 6.50 ಕೃಷಿರಂಗ–ವ್ಯವಸಾಯ ಹಾಗೂ ಸಮಾಜ ಸೇವೆಯಲ್ಲಿನ ತಮ್ಮ ಅನುಭವ ಹಂಚಿಕೊಳ್ಳುತ್ತಾರೆ ಹುಲ್ಲಹಳ್ಳಿಯ ಸರೋಜಾ. ಸಂದರ್ಶಕರು: ಎನ್.ಕೇಶವಮೂರ್ತಿ, 7.45 ಚಿತ್ರಗೀತೆಗಳು, 8.00 ಕನ್ನಡ ಭಾರತೀ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ: ಮಹಾರಾಜಪುರಂ ವಿಶ್ವನಾಥ್ ಐಯ್ಯರ್, 10.00 ತತ್ವ ಸಂಚಾರ: ಜನಪದ ಗಾಯಕರ ತತ್ವಗಾಯನ, ಪ್ರಸ್ತುತಿ–ಡಾ.ಮೈಸೂರು ಉಮೇಶ್, 10.30 ಸವಿನೆನಪು

ಮುಡಾ, ವಾಲ್ಮೀಕಿ ಹಗರಣದ ನೈತಿಕ ಹೊಣೆ ಹೊತ್ತು ಸಿದ್ದರಾಮಯ್ಯ ರಾಜೀನಾಮೆ ನೀಡಲಿ

ತನಿಖಾ ವರದಿಯಲ್ಲಿ ದೋಷಮುಕ್ತರಾದರೆ ಮತ್ತೆ ಮುಖ್ಯಮಂತ್ರಿಯಾಗಲಿ; ಶಾಸಕ ಜಿ.ಟಿ.ದೇವೇಗೌಡರ ಆಗ್ರಹ



ಶಾಸಕ ಜಿ.ಟಿ.ದೇವೇಗೌಡರು

● ಟೆಲಿಫೋನ್ ಕದ್ದಾಲಿಕೆಯಲ್ಲಿ ರಾಮಕೃಷ್ಣ ಹೆಗಡೆ; ಕ್ಲಾಸಿಕ್ ಕಂಪ್ಯೂಟರ್ ಹಗರಣದಲ್ಲಿ ಬಂಗಾರಪ್ಪ ರಾಜೀನಾಮೆ ನೀಡಲಿಲ್ಲವೆ? ● ಹಾಗೆಯೇ ಸಮಾಜವಾದಿ ಸಿದ್ದರಾಮಯ್ಯ ಕೂಡ ರಾಜೀನಾಮೆ ನೀಡಲಿ ● ವಾಲ್ಮೀಕಿ ನಿಗಮದ ಹಣ ಪಡೆಯಲು ಬ್ಯಾಂಕ್ ಅಕೌಂಟ್ ಹೇಗೆ ತೆರೆದರು ● ಸಿದ್ದರಾಮಯ್ಯರಿಗೆ ಗೊತ್ತಿಲ್ಲದೆ ಅಕೌಂಟ್ ತೆರೆಯಲು ಸಾಧ್ಯವೆ? ನೀವೆ ಹೇಳಿ!

ಮೈಸೂರು, ಜು.11(ಬಿಎಲ್‌ಯು)–ವಾಲ್ಮೀಕಿ ನಿಗಮದ ಹಣ ಅಕ್ರಮ ವರ್ಗಾವಣೆ ಹಾಗೂ ಮುಡಾದಲ್ಲಿ ಪತ್ನಿ ಹೆಸರಿನಲ್ಲಿ ಬದಲಿ ನಿವೇಶನ ಪಡೆದಿರುವ ಹಗರಣದಿಂದ ಮುಕ್ತರಾಗುವ ತನಕ ನೈತಿಕ ಹೊಣೆ ಹೊತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡಬೇಕು ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಆಗ್ರಹಿಸಿದ್ದಾರೆ. ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಟೆಲಿಫೋನ್ ಕದ್ದಾಲಿಕೆ ಪ್ರಕರಣದಲ್ಲಿ ರಾಮಕೃಷ್ಣ ಹೆಗಡೆ ರಾಜೀನಾಮೆ ನೀಡಿದ್ದರು, ಕ್ಲಾಸಿಕ್ ಕಂಪ್ಯೂಟರ್ ಹಗರಣದಲ್ಲಿ ಬಂಗಾರಪ್ಪ ರಾಜೀನಾಮೆ ನೀಡಿದ್ದರು. ಚಿಕ್ಕ ಚಿಕ್ಕ ಕಾರಣಕ್ಕೆ ನೈತಿಕ ಹೊಣೆ ಹೊತ್ತು ಅಂದಿನ ಮುಖ್ಯಮಂತ್ರಿಗಳು ರಾಜೀನಾಮೆ ನೀಡಿದ್ದರು. ಅಂತೆಯೇ ಈಗ ಭಾರಿ ಹಗರಣದ ಆರೋಪ ಹೊತ್ತಿರುವ ಕಾರಣ ಸಿದ್ದರಾಮಯ್ಯ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು.

ಸಿದ್ದರಾಮಯ್ಯ ಸಮಾಜವಾದಿ ಹಿನ್ನೆಲೆಯಿಂದ ಬಂದವರು. ಗಂಭೀರ ಆರೋಪಕ್ಕೆ ಗುರಿಯಾಗಿರುವ ಕಾರಣ ನೈತಿಕ ಹೊಣೆ ಹೊತ್ತು ಮೊದಲು ರಾಜೀನಾಮೆ ನೀಡಲಿ. ತನಿಖಾ ವರದಿಯಲ್ಲಿ ದೋಷಮುಕ್ತರಾದರೆ ಮತ್ತೆ ಮುಖ್ಯಮಂತ್ರಿ ಸ್ಥಾನ ಅಲಂಕರಿಸಲಿ ಎಂದು ಸಲಹೆ ನೀಡಿದರು. ವಾಲ್ಮೀಕಿ ನಿಗಮದ ಹಗರಣದಲ್ಲಿ 187 ಕೋಟಿ ರೂಪಾಯಿ ಅವ್ಯವಹಾರವಾಗಿದೆ. 94 ಕೋಟಿ ರೂಪಾಯಿ ಪಡೆಯಲು ಹಲವು ಬ್ಯಾಂಕ್ ಅಕೌಂಟ್ ತೆರೆಯಲಾಗಿದೆ. ಹಣಕಾಸು ಖಾತೆ ಹೊಣೆ ಹೊತ್ತಿರುವ ಸಿದ್ದರಾಮಯ್ಯರಿಗೆ ಗೊತ್ತಿಲ್ಲದೆ ಹೈದರಾಬಾದ್‌ನಲ್ಲಿ ಬ್ಯಾಂಕ್ ಅಕೌಂಟ್ ತೆರೆಯಲು ಸಾಧ್ಯವೆ? ಎಂದು ಜಿ.ಟಿ.ದೇವೇಗೌಡರು ಪ್ರಶ್ನಿಸಿದರು.

ಇನ್ನು ಭೂಮಿ ಕಳೆದುಕೊಂಡ ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರಿಗೆ ಸಮನಾಂತರ ಬಡಾವಣೆಯಲ್ಲಿ ನಿವೇಶನ ನೀಡಬೇಕಿತ್ತು. ಅಲ್ಲಿ ಇಲ್ಲದಿದ್ದರೆ ಪಕ್ಕದಲ್ಲಿರುವ ಬೇರೆ ಬಡಾವಣೆಯಲ್ಲಿ ನಿವೇಶನ ನೀಡಬೇಕಿತ್ತು. ಇಲ್ಲೂ ಕೂಡ ನಿಯಮಗಳನ್ನು ಗಾಳಿಗೆ ತೂರಲಾಗಿದೆ ಎಂಬ ಆರೋಪವಿದೆ. ಇದರ ಹೊಣೆಯನ್ನು ಕೂಡ ಸಿದ್ದರಾಮಯ್ಯ ಹೊರಬೇಕು. ಈ ಪ್ರಕರಣದ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು ಎಂದು ಜಿ.ಟಿ.ದೇವೇಗೌಡರು ಒತ್ತಾಯಿಸಿದರು.

ನನ್ನ ವಿರುದ್ಧ ಆಧಾರ ರಹಿತ ಆರೋಪ ಮಾಡಿದರೆ ಹುಷಾರ್...!

ನಿಷ್ಠಾವಂತ ಹಾಗೂ ಪ್ರಾಮಾಣಿಕನಾಗಿರುವ ತಮ್ಮ ವಿರುದ್ಧ ಆಧಾರರಹಿತ ಆರೋಪ ಮಾಡಿದರೆ ಕಾನೂನು ಕ್ರಮ ಕೈಗೊಂಡು ಜೈಲಿಗೆ ಕಳುಹಿಸುತ್ತೇನೆ ಎಂದು ಶಾಸಕ ಜಿ.ಟಿ.ದೇವೇಗೌಡರು ಎಚ್ಚರಿಸಿದ್ದಾರೆ. ಮುಡಾದಲ್ಲಿ ನಾನು 100 ನಿವೇಶನ ಪಡೆದಿದ್ದೇನೆ ಎಂದು ಕೆಲವರು ಆರೋಪಿಸಿದ್ದಾರೆ. ನಾನು ಜಮ್ಮು ಮತ್ತು ಕಾಶ್ಮೀರಕ್ಕೆ ಶಾಸಕರೊಡನೆ ಅಧ್ಯಯನ ಪ್ರವಾಸ ಹೋದ ವೇಳೆ ಮೈಸೂರಿನ ನಾಯಕರೊಬ್ಬರು ಮಾಡಿರುವ ಆರೋಪದ ಬಗ್ಗೆ ಇತರೆ ಶಾಸಕರು ಪ್ರಶ್ನಿಸಿದರು.

ನಾನು 100 ನಿವೇಶನ ಪಡೆದಿರುವುದನ್ನು ಸಾಬೀತು ಮಾಡಿದರೆ ಅದನ್ನು ವಾಪಸು ನೀಡುತ್ತೇನೆ. ಜೊತೆಗೆ ಕಾನೂನಿಗೆ ತಲೆಬಾಗುತ್ತೇನೆ ಎಂದು ಸವಾಲು ಹಾಕಿದರು.

ನಾನು ಸಾಮಾನ್ಯ ರೈತ ಕುಟುಂಬದಿಂದ ಬಂದವನು. ತುಳಸಿದಾಸಪ್ಪ, ಪುಟ್ಟಸ್ವಾಮಿ, ಹೆಚ್.ಎಲ್.ತಿಮ್ಮೇಗೌಡ, ಕೆಂಪಿರೇಗೌಡ, ರಾಜಶೇಖರ ಮೂರ್ತಿ ಅವರ ಅವಧಿಯಲ್ಲಿ ರಾಜಕಾರಣಕ್ಕೆ ಬಂದು, ಮಹನೀಯರ ಆದರ್ಶವನ್ನು ಮೈಗೂಡಿಸಿಕೊಂಡಿದ್ದೇನೆ. ಈಗಿನ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಚುನಾವಣಾ ವೆಚ್ಚಕ್ಕೆ 23 ಸಾವಿರ ರೂಪಾಯಿ ಕೊಟ್ಟಿದ್ದೇನೆ. ಹೆಚ್.ಡಿ.ದೇವೇಗೌಡರು, ಹೆಚ್.ಡಿ.ಕುಮಾರಸ್ವಾಮಿ, ಬಿ.ಎಸ್.ಯಡಿಯೂರಪ್ಪ, ಸಿದ್ದರಾಮಯ್ಯ ಜೊತೆ ರಾಜಕಾರಣ ಮಾಡಿದ್ದೇನೆ. ಆದರೆ ಎಂದೂ ಕೂಡ ಅನ್ಯಾಯದ ಹಾದಿ ಹಿಡಿಯಲಿಲ್ಲ ಎಂದು ಜಿ.ಟಿ.ದೇವೇಗೌಡರು ಸ್ಪಷ್ಟಪಡಿಸಿದರು. ನಾನು ಕೆಹೆಚ್‌ಬಿ ಅಧ್ಯಕ್ಷನಾಗಿದ್ದಾಗ ಯಲಚಹಳ್ಳಿಯ ನಿಸರ್ಗ ಬಡಾವಣೆ, ಕೆಂಚಲಗೂಡು ಬಡಾವಣೆಯಲ್ಲಿ ಅವ್ಯವಹಾರವಾಗಿದೆ ಎಂಬ ಆರೋಪದ ಮೇಲೆ ಎಸಿಬಿ ತನಿಖೆ ಮಾಡಿಸಿದರು. ಆದರೆ ಯಾವುದೇ ಅವ್ಯವಹಾರ ನಡೆದಿಲ್ಲ ಎಂದು ಸಾಬೀತಾಯಿತು ಎಂದರು.

ಸುದೀರ್ಘ ಅವಧಿಯ ರಾಜಕಾರಣದಲ್ಲಿ ನಾನು ಎಲ್ಲೂ ಭಾರಿ ಆಸ್ತಿ ಮಾಡಿಲ್ಲ. ನನ್ನ ಅಥವಾ ನನ್ನ ಕುಟುಂಬದ ಹೆಸರಿನಲ್ಲಿ ಕಮರ್ಷಿಯಲ್ ಕಾಂಪ್ಲೆಕ್ಸ್ ಇಲ್ಲ, ಹೋಟೆಲ್ ಇಲ್ಲ, ಪೆಟ್ರೋಲ್ ಬಂಕ್ ಇಲ್ಲ. ಇದೆಲ್ಲಾ ನನ್ನ ಬಳಿ ಇದೆ ಎಂದು ಸಾಬೀತು ಮಾಡಿದರೆ, ಅವರಿಗೆ ಉಚಿತವಾಗಿ ಬರೆದುಕೊಡುವೆ ಎಂದು ಮತ್ತೊಮ್ಮೆ ಸವಾಲು ಹಾಕಿದರು.

ನಿಷ್ಠಾವಂತನಾಗಿ ರಾಜಕಾರಣ ಮಾಡುತ್ತಿರುವ ನನ್ನ ವಿರುದ್ಧ ಇನ್ನು ಮುಂದೆ ಯಾರಾದರೂ ಆಧಾರರಹಿತ ಆರೋಪ ಮಾಡಿದರೆ ಲೀಗಲ್ ನೋಟಿಸ್ ಕೊಡುತ್ತೇನೆ. ಎಫ್‌ಐಆರ್ ದಾಖಲಿಸಿ ಕಾನೂನು ಕ್ರಮದಂತೆ ಜೈಲಿಗೆ ಕಳುಹಿಸುತ್ತೇನೆ. ಆದ ಕಾರಣ ನನ್ನ ಬಗ್ಗೆ ಇನ್ನು ಮುಂದೆ ಹೇಳಿಕೆ ನೀಡುವಾಗ ಎಚ್ಚರಿಕೆಯಿಂದ ಮಾತನಾಡಬೇಕು ಎಂದು ಜಿ.ಟಿ.ದೇವೇಗೌಡ ಎಚ್ಚರಿಸಿದರು. ಇವತ್ತು ಒಂದು ಹೇಳಿಕೆ ಕೊಟ್ಟು, ನಾಳೆ ಮತ್ತೊಂದು ರೀತಿ ಹೇಳಿಕೆ ಕೊಡುವ ಜಾಯಮಾನ ನನ್ನದಲ್ಲ ಎಂದು ತಮ್ಮ ವಿರುದ್ಧ ಆರೋಪ ಮಾಡಿರುವ ರಾಜಕಾರಣಿಗೆ ತಿರುಗೇಟು ನೀಡಿದರು.

ಕಾಂಗ್ರೆಸ್ ಸರ್ಕಾರದಲ್ಲಿ 50:50 ಅನುಪಾತದ ಹೆಚ್ಚು ನಿವೇಶನ ಹಂಚಿಕೆ

ಈಗಿನ ಕಾಂಗ್ರೆಸ್ ಸರ್ಕಾರದ ಕಳೆದ ಮೂರು ತಿಂಗಳ ಅವಧಿಯಲ್ಲಿ 50:50 ಅನುಪಾತದ ನಿವೇಶನಗಳು ಹೆಚ್ಚಿನ ಪ್ರಮಾಣದಲ್ಲಿ ಹಂಚಿಕೆಯಾಗಿವೆ ಎಂದು ಶಾಸಕ ಜಿ.ಟಿ.ದೇವೇಗೌಡರು ಆರೋಪಿಸಿದರು.

ಈ ಹಿಂದೆ ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರಿಗೆ ಸೇರಿದಂತೆ 50:50 ಅನುಪಾತದಲ್ಲಿ ಬೆರಳೆಣಿಕೆಯಷ್ಟು ನಿವೇಶನ ಹಂಚಿಕೆಯಾಗಿತ್ತು. ಆದರೆ ಈಗ, ಅದು ಕಳೆದ ಮೂರು ತಿಂಗಳ ಅವಧಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನಿವೇಶನ ಹಂಚಿಕೆಯಾಗಿದೆ ಎಂದು ಆಪಾದಿಸಿದರು.

ಮುಡಾ ಸಭೆಯ ನಿರ್ಣಯವಿಲ್ಲದೆ 50:50 ಅನುಪಾತದ ನಿವೇಶನ ಹಂಚಿಕೆ ಮಾಡದಂತೆ ನಾನು ಸೇರಿದಂತೆ ಈಗಿನ ಮುಡಾ ಅಧ್ಯಕ್ಷ ಮರಿಗೌಡ ಆಯುಕ್ತರಿಗೆ ಪತ್ರ ಬರೆದಿದ್ದೆವು. ಆದರೆ ನಮ್ಮ ಪತ್ರದ ನಂತರವೂ ನಿವೇಶನ ಹಂಚಿಕೆಯಾಗಿದೆ. ಇಷ್ಟಾದರೂ ಮುಡಾದ ಅಂದಿನ ಆಯುಕ್ತ ದಿನೇಶ್‌ಕುಮಾರ್ ವರ್ಗಾವಣೆ ಆಗಿದ್ದರೂ ಸರ್ಕಾರ ಮತ್ತೆ ಮತ್ತೆ ಅದೇ ಸ್ಥಾನಕ್ಕೆ ವರ್ಗಾವಣೆ ಮಾಡಿತು. ಮುಡಾದವರು 100 ಎಕರೆ ಭೂಮಿ ಸ್ವಾಧೀನಪಡಿಸಿಕೊಂಡು ಬಡಾವಣೆಗೆ ನಕ್ಷೆ ತಯಾರಿಸುತ್ತಾರೆ. ಆದರೆ ಭೂ ಸ್ವಾಧೀನ ಮಾಡಿಕೊಳ್ಳದೆ ಹೆಚ್ಚುವರಿಯಾಗಿ 25 ಎಕರೆಯಲ್ಲಿ ಬಡಾವಣೆ ನಿರ್ಮಾಣ ಮಾಡಿ ಅಧಿಕಾರಿಗಳು ತಪ್ಪೆಸಗಿದ್ದಾರೆ. ಅಧಿಕಾರಿಗಳ ವೈಫಲ್ಯತೆ ಇದರಲ್ಲಿ ಸ್ಪಷ್ಟವಾಗಿದೆ. ಅಧಿಕಾರಿಗಳ ಇಂತಹ ವೈಫಲ್ಯತೆ ಹಾಗೂ ಹಗರಣದ ಬಗ್ಗೆ 2023ರಲ್ಲಿ ತಾಂತ್ರಿಕ ಸಮಿತಿ ವರದಿ ನೀಡಿದ್ದರೂ ಅಧಿಕಾರಿಗಳ ವಿರುದ್ಧ ಕ್ರಮ ಏಕೆ ಕೈಗೊಳ್ಳಲಿಲ್ಲ ಎಂದು ಪ್ರಶ್ನಿಸಿದ ಜಿ.ಟಿ.ದೇವೇಗೌಡ, ಅಂದೇ ಕ್ರಮ ಕೈಗೊಂಡಿದ್ದರೆ ಇಂದು ಇಷ್ಟೊಂದು ದೊಡ್ಡ ಪ್ರಮಾಣದ ಹಗರಣ ನಡೆಯುತ್ತಿರಲಿಲ್ಲ ಎಂದು ಅಭಿಪ್ರಾಯಪಟ್ಟರು.

ಶಾಸಕರಾದ ನಾವು ಮುಡಾ ಸದಸ್ಯರು ಎಂಬುವುದು ಸತ್ಯ. ಆದರೆ ಪ್ರತಿಯೊಂದು ಸಭೆಯಲ್ಲಿ ಬರುವ ಎಲ್ಲಾ ಕಡತಗಳನ್ನು ಪರಿಶೀಲನೆ ಮಾಡಲು ನಮಗೆ ಸಾಧ್ಯವೆ? ಎಂದು ಪತ್ರಕರ್ತರನ್ನೇ ಪ್ರಶ್ನಿಸಿದರು.

ಅಧಿಕಾರಿಗಳು ಪರಿಶೀಲನೆ ನಡೆಸಿದ ನಂತರ ಆ ವಿಚಾರ ಮುಡಾ ಸಭೆ ಮುಂದೆ ಬರುತ್ತದೆ. ಆಗ ಅದು ಸರಿ ಇದೆಯೇ ಅಥವಾ ಇಲ್ಲವೆ ಎಂದು ಚರ್ಚಿಸಿ, ಸರಿ ಇರುವುದಕ್ಕೆ ನಾವು ಒಪ್ಪಿಗೆ ಕೊಡುತ್ತೇವೆ ಎಂದರು. ಆದರೆ ತರುವಾಯ ಮುಡಾ ಆಯುಕ್ತರು, ಕಾರ್ಯದರ್ಶಿ, ಟೌನ್ ಪ್ಲಾನಿಂಗ್ ಸದಸ್ಯರು ಸಹಿ ಮಾಡುತ್ತಾರೆ. ಅಲ್ಲಿ ಏನಾದರೂ ಪ್ರಮಾದವಾಗಿದ್ದರೆ ಅದಕ್ಕೆ ನಾವು ಹೇಗೆ ಹೊಣೆ ಆಗುತ್ತೇವೆ ಎಂದು ಪುನಃ ಪ್ರಶ್ನಿಸಿದರು.

ಹಾಲಿ ನ್ಯಾಯಾಧೀಶರಿಂದ ತನಿಖೆ ನಡೆಸಲಿ

ಮುಡಾ ಹಗರಣದ ಬಗ್ಗೆ ಹಾಲಿ ನ್ಯಾಯಾಧೀಶರಿಂದ ತನಿಖೆ ನಡೆಸಬೇಕು ಎಂದು ಶಾಸಕ ಜಿ.ಟಿ.ದೇವೇಗೌಡ ಆಗ್ರಹಿಸಿದರು. ಸಿಬಿಐ ತನಿಖೆಗೆ ಕಾಂಗ್ರೆಸ್‌ನವರು ವಿರೋಧ ಮಾಡುತ್ತಿದ್ದಾರೆ. ಇದು ಬೇಡವೆಂದರೆ ಹಾಲಿ ನ್ಯಾಯಾಧೀಶರಿಂದ ತನಿಖೆ ನಡೆಸಲಿ ಎಂದು ಒತ್ತಾಯಿಸಿದರು.

ತನಿಖೆ ಕೈಗೆತ್ತಿಕೊಳ್ಳುವ ಹಾಲಿ ನ್ಯಾಯಾಧೀಶರು, ಅಕ್ರಮ ನಿವೇಶನದ ಬಗ್ಗೆ ದಾಖಲಾತಿ ಸಲ್ಲಿಸುವಂತೆ ಆಹ್ವಾನಿಸಿದರೆ ನಗರದ 10 ಸಾವಿರಕ್ಕೂ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗುತ್ತವೆ ಎಂದರು. ಪರಿಹಾರ ಕೊಟ್ಟ ಜಮೀನಿಗೆ ಮತ್ತೊಮ್ಮೆ ಪರಿಹಾರ ನೀಡಿರುವುದು, 50:50 ಅನುಪಾತದ ನಿವೇಶನ ಹಂಚಿಕೆ ಹಗರಣ ಸೇರಿದಂತೆ ಯಾವುದೇ ಅವ್ಯವಹಾರ ನಡೆದಿದ್ದರೆ ಸಂಬಂಧಿಸಿದ ಅಧಿಕಾರಿಗಳನ್ನು ಜೈಲಿಗೆ ಕಳುಹಿಸಬೇಕು ಎಂದು ಜಿ.ಟಿ.ದೇವೇಗೌಡರು ಆಗ್ರಹಿಸಿದರು.

ನಮ್ಮ ಹೋರಾಟ ಹೇಗಿರುತ್ತೆ ಅಂತ ಅಧಿವೇಶನದಲ್ಲಿ ತೋರಿಸುತ್ತೇವೆ...

ಮುಡಾ ಹಗರಣ ಕುರಿತಂತೆ ವಿಧಾನ ಮಂಡಲದ ಅಧಿವೇಶನದಲ್ಲಿ ನಮ್ಮ ಹೋರಾಟ ಹೇಗಿರುತ್ತದೆ ಎಂದು ಅಲ್ಲಿ ತೋರಿಸುತ್ತೇವೆ ಎಂದು ಶಾಸಕ ಜಿ.ಟಿ.ದೇವೇಗೌಡರು ಖಡಕ್ ಆಗಿ ನುಡಿದರು. ಜುಲೈ 15 ರಿಂದ ಅಧಿವೇಶನ ಆರಂಭವಾಗಲಿದ್ದು, ಅಲ್ಲಿ ನಮ್ಮ ಹೋರಾಟ ಮುಂದುವರೆಯಲಿದೆ. ಆದರೆ ನಾಳೆ ಬಿಜೆಪಿ ನಡೆಸುವ ಪ್ರತಿಭಟನೆಗೆ ನಮಗೆ ಇನ್ನು ಆಹ್ವಾನಿಸಿಲ್ಲ ಎಂದು ಹೇಳಿದರು. ಮುಡಾ ಹಗರಣದಲ್ಲಿ ನಾನಾಗಲೀ, ಸಿ.ಎನ್.ಮಂಜೇಗೌಡ ಆಗಲೀ, ಯಾರೇ ತಪ್ಪು ಮಾಡಿದರೂ ಅದು ತಪ್ಪು ಎಂದು ಸ್ಪಷ್ಟಪಡಿಸಿದರು. ಬಿಡಿಎ ಮಾದರಿಯಲ್ಲಿ ಮುಡಾದಲ್ಲಿ ಕೂಡ ಜನಪ್ರತಿನಿಧಿಗಳ ಸದಸ್ಯತ್ವ ರದ್ದು ಬಗ್ಗೆ ಸರ್ಕಾರ ನಿರ್ಧಾರ ಮಾಡಿದರೆ ನಮ್ಮದೇನು ಅಭ್ಯಂತರವಿಲ್ಲ ಎಂದು ಜಿ.ಟಿ.ದೇವೇಗೌಡರು ತಿಳಿಸಿದರು.

ಬೇಕಿದ್ದರೆ 62 ಕೋಟಿ ಕೊಡಲಿ; ನಮ್ಮ ನಿವೇಶನ ವಾಪಸ್ ಪಡೆಯಲಿ!

ಮುಡಾ ಗಬ್ಬೆದ್ದಿದೆ, ಕ್ಲೀನ್ ಮಾಡುತ್ತೇನೆ: ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶ್ವಾಸ



ಮೈಸೂರು, ಜು.11(ಬಿಎಲ್‌ಯು)–ಮುಡಾ ಗಬ್ಬೆದ್ದು ಹೋಗಿದೆ, ಅದನ್ನು ಕ್ಲೀನ್ ಮಾಡುವ ಕೆಲಸ ಮಾಡುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ. ಮೈಸೂರಿನ ರಾಮಕೃಷ್ಣನಗರದ ತಮ್ಮ ನಿವಾಸದಲ್ಲಿ ಪತ್ರಕರ್ತರ ಜೊತೆ ಮಾತನಾಡಿದ ಅವರು, ಮುಡಾ ಹಗರಣದ ಬಗ್ಗೆ ಇಬ್ಬರು ಐಎಎಸ್ ಅಧಿಕಾರಿಗಳ ನೇತೃತ್ವದಲ್ಲಿ ತನಿಖೆ ನಡೆಯುತ್ತಿದ್ದು, ವರದಿ ಬಂದ ನಂತರ ಕ್ರಮ ಕೈಗೊಳ್ಳುತ್ತೇನೆ ಎಂದರು.

ನಮ್ಮ ಕಾಲದಲ್ಲೂ ತಪ್ಪಾಗಿದೆ ನಿಜ. ಆದರೆ ಬಿಜೆಪಿ ಸರ್ಕಾರದ ಅವಧಿಯಲ್ಲಿ ಹೆಚ್ಚು ತಪ್ಪಾಗಿದೆ. ಒಟ್ಟಾರೆ ಎಲ್ಲವನ್ನು ಸರಿಪಡಿಸುತ್ತೇನೆ. ಈ ಮೂಲಕ ಗಬ್ಬೆದ್ದಿರುವ ಮುಡಾವನ್ನು ಕ್ಲೀನ್ ಮಾಡುತ್ತೇನೆ ಎಂದರು. ನನ್ನ ಪತ್ನಿಗೆ ನಿವೇಶನ ನೀಡುವುದನ್ನು ಅಕ್ರಮ ಎಂದು ಹೇಳಲು ಸಾಧ್ಯವಿಲ್ಲ. ಅದು ಅಕ್ರಮವೇ ಅಲ್ಲ. ನನ್ನ ಪತ್ನಿಗೆ ನಿವೇಶನ ನೀಡಿರುವ ವಿಚಾರವೇ ಬೇರೆ, ಮುಡಾದಲ್ಲಿ ನಡೆದಿರುವ ಪ್ರಕರಣಗಳೇ ಬೇರೆ ಎಂದು ಸಿದ್ದರಾಮಯ್ಯ ಸ್ಪಷ್ಟಪಡಿಸಿದರು. ನನ್ನ ಪತ್ನಿಗೆ ಬಿಜೆಪಿ ಸರ್ಕಾರದ ಅವಧಿಯಲ್ಲಿ ನಿವೇಶನ ನೀಡಲಾಗಿದೆ. ಅವರು ನನ್ನ ಕೇಳಿ ನಿವೇಶನ ನೀಡಿದ್ದಾರಾ, ಆ ದಿನ ನಾನು ವಿರೋಧ ಪಕ್ಷದ ನಾಯಕನಾಗಿದ್ದೇನೆ. ಮುಡಾದವರು ತಪ್ಪು ಮಾಡಿ ನನ್ನ ಪತ್ನಿಗೆ ನಿವೇಶನ ನೀಡಿದ್ದಾರೆ. ಭೂಮಿ ಕಳೆದುಕೊಂಡ ನಾವು ಪರಿಹಾರ ಪಡೆದುಕೊಳ್ಳಬೇಕೆ, ಬೇಡವೆ ನೀವೇ ಹೇಳಿ ಎಂದು ಮಾಧ್ಯಮ ದವರನ್ನೆ ಪ್ರಶ್ನಿಸಿದರು. ಲೆಕ್ಕಾಚಾರದ ಪ್ರಕಾರ 62 ಕೋಟಿ ರೂಪಾಯಿ ಪಾವತಿಸಲಿ. ತರುವಾಯ ನಮಗೆ ಕೊಟ್ಟಿರುವ ನಿವೇಶನ ವಾಪಸು ಪಡೆಯಲಿ. ಇದಕ್ಕೆ ನಮ್ಮ ಅಭ್ಯಂತರವಿಲ್ಲ. ಒಟ್ಟಾರೆ ನನ್ನ ಪತ್ನಿಗೆ ನಿವೇಶನ ನೀಡುವುದರಲ್ಲಿ ಯಾವುದೇ ಅಕ್ರಮ ಆಗಿಲ್ಲ ಎಂದು ಸ್ಪಷ್ಟನೆ ನೀಡಿದರು.

ವಾಲ್ಮೀಕಿ ಹಗರಣದ 187 ಕೋಟಿ ವರ್ಗಾವಣೆಗೆ ನಾನು ಸಹಿ ಹಾಕಿಲ್ಲ: ವಾಲ್ಮೀಕಿ ನಿಗಮ ಹಗರಣದಲ್ಲಿ 187 ಕೋಟಿ ರೂ. ಖಜಾನೆಯಿಂದ ಅಕ್ರಮವಾಗಿ ವರ್ಗಾವಣೆ ಆಗಿರುವ ದಾಖಲೆಗೆ ನಾನು ಸಹಿ ಹಾಕಿಲ್ಲ ಎಂದು ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ವಾಲ್ಮೀಕಿ ಹಗರಣ ಹಾಗೂ ಮುಡಾ ಹಗರಣದ ಹಿನ್ನೆಲೆಯಲ್ಲಿ ನನ್ನ ರಾಜೀನಾಮೆಗೆ ಆಗ್ರಹಿಸುವ ಬಿಜೆಪಿ ಹಾಗೂ ಜೆಡಿಎಸ್ ನಾಯಕರು, ಬ್ಯಾಂಕ್‌ಗಳಲ್ಲಿ ಆಗಿರುವ ಅವ್ಯಹಾರದ ಹಿನ್ನೆಲೆಯಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಂದ ರಾಜೀನಾಮೆ ಕೇಳಲಿ ಎಂದು ಸವಾಲು ಹಾಕಿದರು.

ವಾಲ್ಮೀಕಿ ಹಗರಣದಲ್ಲಿ ಖಜಾನೆಯಿಂದ 187 ಕೋಟಿ ರೂಪಾಯಿ ವರ್ಗಾವಣೆ ಆಗಿರುವ ಬಗ್ಗೆ ಇನ್ನು ಅಧಿಕೃತವಾದ ಯಾವುದೇ ವರದಿ ಬಂದಿಲ್ಲ ಎಂದರು. ಎಲ್ಲಾ ವಿಚಾರಗಳು ನನ್ನ ಗಮನಕ್ಕೆ ಬರುವುದಿಲ್ಲ. ಈ ಹಗರಣದ ಬಗ್ಗೆ ಮೂರು ಹಂತದಲ್ಲಿ ತನಿಖೆ ನಡೆಯುತ್ತಿದೆ. ತನಿಖಾ ವರದಿ ಬರಲಿ, ನಂತರ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುತ್ತೇನೆ. ಆದರೆ ಎಲ್ಲವೂ ಈಗ ತನಿಖಾ ಹಂತದಲ್ಲಿರುವ ಕಾರಣ ಈಗಲೇ ಏನನ್ನು ಹೇಳುವುದಿಲ್ಲ ಎಂದು ಸಿದ್ದರಾಮಯ್ಯ ತಿಳಿಸಿದರು.

ಬಿಜೆಪಿಯವರ ನಾನು ಹೇಗೆ ಎದುರಿಸುತ್ತೇನೆ ನೋಡ್ತಾ ಇರಿ...

ಮುಡಾ ಹಗರಣ ಸಂಬಂಧ ಬಿಜೆಪಿಯವರು ರಾಜಕೀಯ ಮಾಡಿದರೆ ನಾನು ಕೂಡ ರಾಜಕೀಯವಾಗಿ ಎದುರಿಸುತ್ತೇನೆ ನೋಡ್ತಾ ಇರಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಬಿಜೆಪಿಯವರು ಮೈಸೂರಿನಲ್ಲಿ ನಾಳೆ ಪ್ರತಿಭಟನೆ ನಡೆಸುತ್ತಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಸಿದ್ದರಾಮಯ್ಯ, ಬಿಜೆಪಿಯವರು ರಾಜಕೀಯ ಕಾರಣಕ್ಕೆ ಪ್ರತಿಭಟನೆ ಮಾಡುತ್ತಿದ್ದಾರೆ. ಅವರ ರಾಜಕೀಯ ಹೋರಾಟಕ್ಕೆ ನಾನು ಕೂಡ ರಾಜಕೀಯವಾಗಿಯೇ ಉತ್ತರ ಕೊಡುತ್ತೇನೆ ಎಂದರು. ಆರ್‌ಟಿಐ ಕಾರ್ಯಕರ್ತ ಟಿ.ಜೆ. ಅಬ್ರಹಾಂ ಚುನಾವಣಾ ಆಯೋಗಕ್ಕೆ ದೂರು ನೀಡಿರುವುದಕ್ಕೆ ಕೂಡ ಪ್ರತಿಕ್ರಿಯೆ ನೀಡಿದ ಸಿದ್ದರಾಮಯ್ಯ, ಚುನಾವಣಾ ಆಯೋಗ ನೋಟಿಸ್ ನೀಡಲಿ, ನಾನು ಅದಕ್ಕೆ ಉತ್ತರ ನೀಡುತ್ತೇನೆ ಎಂದರು.

ಗೌರವಾನ್ವಿತ ಆರನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಲಯ ಮತ್ತು ಜೆ.ಎಂ.ಎಫ್.ಸಿ ಮೈಸೂರು

ಅಸಲು ದಾವಾ ಸಂಖ್ಯೆ: 440/2018

ವಾದಿ: ಶ್ರೀ.ಕೃಷ್ಣರಾಜು ವಿರುದ್ಧ

ಪ್ರತಿವಾದಿ: ಶ್ರೀನಿವಾಸರಾಜು' ಮೃತ ವಾರಸುದಾರರು ಪ್ರತಿನಿಧಿಸುತ್ತಾರೆ.

ಜಾರಿಯಾಗಬೇಕಾದವರು : 1) (a) ಶ್ರೀಮತಿ.ನಾಗರತ್ನ ಕೋಂ. ಶ್ರೀನಿವಾಸರಾಜು b) ಗಿರೀಶ್ ಬಿನ್ ಶ್ರೀನಿವಾಸರಾಜು, c) ಪೃಥ್ವಿ ಬಿನ್ ಶ್ರೀನಿವಾಸರಾಜು d) ರೋಹಿಣಿ ಬಿನ್ ಶ್ರೀನಿವಾಸರಾಜು ಎಲ್ಲರ ವಾಸ :- ಮನೆ ನಂ.1678/2, ಹೊಸಕೇರಿ, 1ನೇ ಕ್ರಾಸ್, ಸೀತರಾಮ್ ರಾವ್ ರಸ್ತೆ, ಕೆ.ಆರ್ ಮೊಹಲ್ಲಾ, ಮೈಸೂರು-570004.

ಸಾರ್ವಜನಿಕ ಪ್ರಕಟಣೆ

ಈ ಮೇಲ್ಕಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಪ್ರಕಟಣೆ ಮೂಲಕ ತಿಳಿಯಪಡಿಸುವುದೇನೆಂದರೆ, ವಾದಿಯು ಪ್ರತಿವಾದಿಗಳ ವಿರುದ್ಧ ಘೋಷಣಾತ್ಮಕ ಮತ್ತು ಶಾಶ್ವತ ನಿರ್ಬಂಧಕಾಜ್ಞೆಯ ಆದೇಶವನ್ನು ಕೋರಿ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿರುತ್ತಾರೆ. ಆದರೆ, ಈ ದಾವೆಗೆ ಪ್ರತಿವಾದಿಯ ವಾರಸುದಾರರಿಗೆ ಘನ ನ್ಯಾಯಾಲಯದಿಂದ ಸಮನ್ಸ್ ನೀಡಿದ್ದರೂ ಸದರಿಯವರು ಕೋರ್ಟ್ ಸಮನ್ಸ್‌ನ್ನು ಪಡೆದುಕೊಂಡಿರುವುದಿಲ್ಲ. ಆದ್ದರಿಂದ ಈ ಪತ್ರಿಕಾ ಪ್ರಕಟಣೆಯನ್ನು ನೀಡಿದ್ದೇವೆ. ಹಾಗಾಗಿ ನೀವು ಘನ ನ್ಯಾಯಾಲಯದ ಮುಂದೆ ದಿನಾಂಕ: 30-07-2024 ರಂದು ಬೆಳಗ್ಗೆ 11 ಗಂಟೆಗೆ ಘನ ನ್ಯಾಯಾಲಯದಲ್ಲಿ ನೀವು ಖುದ್ದಾಗಿಯಾಗಲೀ ಅಥವಾ ನಿಮ್ಮ ಪರ ವಕೀಲರ ಮೂಲಕವಾಗಲೀ ಈ ಘನ ನ್ಯಾಯಾಲಯದ ಮುಂದೆ ಹಾಜರಾಗಿ ನಿಮ್ಮ ಅಹವಾಲುನ್ನು ಸಲ್ಲಿಸುವುದು. ಇದಕ್ಕೆ ತಪ್ಪಿದಲ್ಲಿ ನಿಮ್ಮ ಗೈರು ಹಾಜರಾತಿಯನ್ನು ಪರಿಗಣಿಸಿ ಮೇಲ್ಕಂಡ ಅರ್ಜಿಯನ್ನು ಘನ ನ್ಯಾಯಾಲಯವು ಏಕಪಕ್ಷೀಯ ಎಂದು ಪರಿಗಣಿಸಿ ಮುಂದಿನ ಕ್ರಮಕ್ಕಾಗಿ ತೀರ್ಮಾನ ಮಾಡಲಾಗುವುದು ಎಂದು ತಿಳಿಯಪಡಿಸಲಾಗುತ್ತದೆ.

ಐಟಂ ನಂ.ಎ:- ಮೈಸೂರು ಸಿಟಿ, ಕೆ.ಆರ್ ಮೊಹಲ್ಲಾ ಹೊಸಕೇರಿ, ಸೀತಾರಾಮ ರಸ್ತೆ, ಮನೆ ನಂ.1678/1 ರಲ್ಲಿ ವಿಸ್ತೀರ್ಣ ಪೂರ್ವ-ಪಶ್ಚಿಮ 47 ಅಡಿಗಳು ದಕ್ಷಿಣೋತ್ತರ 15 $^1/_2$ ಅಡಿಗಳಲ್ಲಿ ಹಿಂಭಾಗ ಪೂರ್ವ- ಪಶ್ಚಿಮ 5 ಅಡಿಗಳು ದಕ್ಷಿಣೋತ್ತರ 9 $^1/_2$ ಅಡಿ ಗಳಲ್ಲಿ ಸ್ವತ್ತಿಗೆ ಚೆಕ್ಕುಬಂದಿ:- ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ವಾರಣಾಸಿರವರ ಮನೆ, ಉತ್ತರಕ್ಕೆ: ಸಿ ಷೆಡ್ಯೂಲ್ ಸ್ವತ್ತು & ಬಿ ಷೆಡ್ಯೂಲ್ ಸ್ವತ್ತು, ದಕ್ಷಿಣಕ್ಕೆ: ಜಯದೇವರವರ ಮನೆ

ಐಟಂ ನಂ.ಬಿ:- ಮೈಸೂರು ಸಿಟಿ, ಕೆ.ಆರ್ ಮೊಹಲ್ಲಾ ಹೊಸಕೇರಿ, ಸೀತಾರಾಮ ರಸ್ತೆ, ಮನೆ ನಂ.1678/2 & 3 ರಲ್ಲಿ ವಿಸ್ತೀರ್ಣ ಪೂರ್ವ-ಪಶ್ಚಿಮ 41 ಅಡಿಗಳು ದಕ್ಷಿಣೋತ್ತರ 9 1/2 ಅಡಿಗಳ ಸ್ವತ್ತಿಗೆ ಚೆಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ವಾದಿಯ ಹಿಸ್ಸೆಯ ಎ ಷೆಡ್ಯೂಲ್ ಸ್ವತ್ತು, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಸಿ ಷೆಡ್ಯೂಲ್ ಸ್ವತ್ತು & ಎ ಷೆಡ್ಯೂಲ್ ಸ್ವತ್ತು.

ಐಟಂ ನಂ.ಸಿ:- ಮೈಸೂರು ಸಿಟಿ, ಕೆ.ಆರ್ ಮೊಹಲ್ಲಾ ಹೊಸಕೇರಿ, ಸೀತಾರಾಮ ರಸ್ತೆಯಲ್ಲಿರುವ ಎ & ಬಿ ಷೆಡ್ಯೂಲ್ ನಡುವೆ ಇರುವ ಸಾಮಾನ್ಯ ಗೋಡೆ ಪೂರ್ವ-ಪಶ್ಚಿಮ 41 ಅಡಿಗಳು ದಕ್ಷಿಣೋತ್ತರ 9 $^1/_2$ ಅಡಿಗಳಲ್ಲಿ ಹಿಂಭಾಗ ಅಗಲ 1 $^1/_2$ ಅಡಿಗಳು ಉದ್ದ 14 ಅಡಿಗಳಲ್ಲಿ ಸ್ವತ್ತಿಗೆ ಚೆಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ವಾದಿಯ ಹಿಸ್ಸೆಯ ಎ ಷೆಡ್ಯೂಲ್ ಸ್ವತ್ತು, ಉತ್ತರಕ್ಕೆ: ಬಿ ಷೆಡ್ಯೂಲ್ ಸ್ವತ್ತು, ದಕ್ಷಿಣಕ್ಕೆ: ಎ ಷೆಡ್ಯೂಲ್ ಸ್ವತ್ತು.

ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಈ ದಿನ 29-06-2024 ರಂದು ನೀಡಲಾಗಿದೆ

ನ್ಯಾಯಾಲಯದ ಅಪ್ಪಣೆ ಮೇರೆಗೆ
ಸಹಿ/- ಗೌರವಾನ್ವಿತ ಆರನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ವಾದಿಯ ಪರ ವಕೀಲರು
ಸಹಿ/- ಕೆ.ಸಂಜಯ್, ವಕೀಲರು
ನಂ.57/1, 3ನೇ ಕ್ರಾಸ್, 2ನೇ ಮೇನ್, ಜಯನಗರ, ಮೈಸೂರು-570014.

ಪಟ್ಟಣ ಪಂಚಾಯಿತಿ ಕಾರ್ಯಾಲಯ, ಅರಕಲಗೂಡು, ಹಾಸನ ಜಿಲ್ಲೆ-573102

ಫೋ.ನಂ.220350 E-mail: **ka.arkalgudu.tp@gmail.com**

ನಂ:ಅ.ಪ.ಪಂ/ಕಿ.ಅ/ಟೆಂಡರ್/ಎಂ.ಆರ್.ಎಫ್ /01/2024-25 ದಿನಾಂಕ: 10.07.2024

ಮರು ಟೆಂಡರ್ ಪ್ರಕಟಣೆ

(ಇ-ಪ್ರೊಕ್ಯೂರಮೆಂಟ್ ಮೂಲಕ ಮಾತ್ರ) ಅರಕಲಗೂಡು ಪಟ್ಟಣ ವ್ಯಾಪ್ತಿಯಲ್ಲಿ ಸ್ವಚ್ಛಭಾರತ್ ಯೋಜನೆ 2.0, ಸ್ವಚ್ಛಭಾರತ್ ಯೋಜನೆ 1.0 ಉಳಿಕೆ ಮೊತ್ತ ಮತ್ತು 15 ನೇ ಹಣಕಾಸು ಎಂ.ಪಿ.ಸಿ ಅನುದಾನ ದಡಿಯಲ್ಲಿ ಕೆಲಸಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣ ಪಾರದರ್ಶಕತೆ ಅಧ್ಯಾದೇಶ 2000 ರಂತೆ ಹಾಗೂ STANDARD TENDER DOCUMENT ಸರ್ಕಾರದ ಅದೇಶ ಸಂಖ್ಯೆ: ಎಫ್.ಡಿ/06/ಪಿಸಿಎಲ್/2006, ಬೆಂಗಳೂರು ರಂತೆ ದ್ವಿಲಕೋಟೆ ಪದ್ಧತಿಯಲ್ಲಿ ಇ-ಪ್ರೊಕ್ಯೂರ್ ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ http://kppp.karnataka.gov.in ನ್ನು ಅಥವಾ ಕಚೇರಿಯ ಅಭಿಯಂತರರ ಶಾಖೆಯನ್ನು ಸಂಪರ್ಕಿಸಬಹುದಾಗಿದೆ. 1.ಖಾಲಿ ಟೆಂಡರ್ ಪಾರಂಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಪ್ರಕಾರ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್-ಬಿಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ದಿನಾಂಕ:: 19-07-2024 ರಂದು ಸಂಜೆ 5.30 ಗಂಟೆ 2.ಟೆಂಡರ್ ತೆರೆಯುವ ದಿನಾಂಕ:22-07-2024 ರ ಬೆಳಗ್ಗೆ 11.00 ಗಂಟೆ ಕ್ರ.ಸಂ.1)ವಿವರ: DMA/2023-24/OW/WORK- INDENT16011/CALL-2 ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ): 36.00

ಸಹಿ/-ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ಅರಕಲಗೂಡು

ವಾಸಾಸಂಇ/ಹಿಸನಿ/ಹಾಸನ/176/ಕೆಎಸ್‌ಎಂಸಿಎ/2024-25

ಅರಣ್ಯ ಇಲಾಖೆ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಸಾಮಾಜಿಕ ಅರಣ್ಯ ಉಪವಿಭಾಗ, ಮೈಸೂರು

ಅರಣ್ಯ ಭವನ, ಅಶೋಕಪುರಂ, ಮೈಸೂರು –570008

ಕಛೇರಿ& ಫ್ಯಾಕ್ಸ್ ಸಂಖ್ಯೆ–0821–2484606

ಇ–ಮೇಲ್: **dcfsfmys@yahoo.com**

ಸಂಖ್ಯೆ–ಎ3/ನರೇಗಾ/ಇ–ಟೆಂಡರ್/ಸಿಆರ್:12/2024–25 ದಿ: 09.07.2024

ಇ–ಟೆಂಡರ್ ಪ್ರಕಟಣೆ

(ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೇ ನೆಡುತೋಪು ಬೆಳೆಸುವ ಅರಣ್ಯೀಕರಣ ಕಾಮಗಾರಿಗಳ ಸಂಬಂಧ ಮೊದಲನೇ ಕರೆಯಲ್ಲಿ ಮೈಸೂರು ಸಾಮಾಜಿಕ ಅರಣ್ಯ ವಿಭಾಗ ವ್ಯಾಪ್ತಿಯ ಎಲ್ಲಾ ವಲಯಗಳಿಗೆ 2024–25ನೇ ಸಾಲಿಗೆ ನರೇಗಾ (MGNREGA) ಯೋಜನೆಯಡಿ ಅಕ್ಟೋಬರ್ –2024ರ ಅವಧಿಯಲ್ಲಿ ಬೆಳೆಸುವ ರಸ್ತೆಬದಿ ಮತ್ತು ಬ್ಲಾಕ್ ನೆಡುತೋಪುಗಳ ಗಿಡಗಳಿಗೆ ಬೇಕಾದ ಆಧಾರದ ಕಡ್ಡಿ (Stakes) ಗಳನ್ನು ಸರಬರಾಜು ಮಾಡಲು ಇಚ್ಛೆಯುಳ್ಳ ಉತ್ಪಾದಕರ ಸಂಭಾವ್ಯ ಪಟ್ಟಿಯನ್ನು ತಯಾರಿಸಲು ಉದ್ದೇಶಿಸಿರುವುದರಿಂದ ಕಡ್ಡಿಗಳನ್ನು ನೆಡು ತೋಪಿನ ಸ್ಥಳಕ್ಕೆ ಸರಬರಾಜು ಮಾಡಿ ಅನುಭವವುಳ್ಳ ಬಿಡ್ಡುದಾರರಿಗೆ ಈ ಪ್ರಕಟಣೆಯ ಕಡೆಗೆ ಈ ಮೂಲಕ ಗಮನ ಸೆಳೆಯಲಾಗಿದೆ. ಟೆಂಡರ್‌ನಲ್ಲಿ ಭಾಗವಹಿಸುವ ಬಿಡ್ಡುದಾರರು ಮೈಸೂರು ಜಿಲ್ಲಾ ಪಂಚಾಯತ್‌ನಲ್ಲಿ ನರೇಗಾಯೋಜನೆಯ ವೆಂಡರ್ ಆಗಿ ನೊಂದಾಯಿತನಾಗಿರುವ ಬಿಡ್ಡುದಾರನಿಂದ ಟೆಂಡರ್ ಆಹ್ವಾನಿಸಲಾಗಿದೆ. ಅರ್ಜಿದಾರರು ಟೆಂಡರ್ ಫಾರಂನ್ನು ಇ-ಆಡಳಿತ ಇಲಾಖೆಯ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ವೆಬ್‌ಸೈಟ್ https://kppp.karnataka.gov.in ಇಂದ ಉಚಿತವಾಗಿ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಇ.ಎಂ.ಡಿ.ಮೊತ್ತ ರೂ.71,500.00 ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ: 15.07.2024 & 5.30 pm. ತಾಂತ್ರಿಕ & ಆರ್ಥಿಕ ಬಿಡ್ ತೆರೆಯುವ ದಿನಾಂಕ 18.07.2024 & 19.07.2024 4.00 pm. ಎರಡನೇ ಕರೆಯ (Autorecall) ಕಡೆಯ ದಿನಾಂಕ & ಸಮಯ 22.07.2024 & 4.00 pm. ಎರಡನೇ ಕರೆಯ (Autorecall) ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ 23.07.2024 & 4.00 pm

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ಉಪವಿಭಾಗ, ಮೈಸೂರು

DIPR/DDMYS-241/KSMCA-172/2024-25

ನಕ್ಕರೆ ಅದೇ ಸ್ವರ್ಗ

ಟೀಚರ್ : ಗಾಳಿಪಟ ಎಷ್ಟೇ ದೂರಕ್ಕೆ ಹೋದ್ರು, ದಾರ ನಮ್ಮ ಕೈಯಲ್ಲೇ ಇರುತ್ತೆ. ಇದಕ್ಕೆ ಒಂದು ಉದಾಹರಣೆ ಕೊಡು?

ವಿದ್ಯಾರ್ಥಿ : ಮೆಸೇಜ್ ಎಷ್ಟೇ ದೂರ ಹೋದ್ರು ಮೊಬೈಲ್ ನಮ್ಮ ಕೈಯಲ್ಲೇ ಇರುತ್ತೆ!

ಮೈಸೂರು ಮಿತ್ರ

ಶುಕ್ರವಾರ, 12 ಜುಲೈ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ನಾವು ತೋರಿದ ಪ್ರೀತಿಯನ್ನು ಜನರು ಮರೆತರೂ ಪ್ರಾಣಿಗಳು ಮರೆಯುವುದಿಲ್ಲ. – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಉಗಮವಾಗದಿರಲಿ ಹಿಂಸೆ, ಹೆಚ್ಚಿಗೆಯಾಗದಿರಲಿ ಆಸೆ.

ನಿಮ್ಮ ಪತ್ರಗಳು

ಮುಡಾದಲ್ಲಿ ಹಗರಣ ಮಾಮೂಲಿ!

ಮಾನ್ಯರೆ,

ಜು. 8ರ ಸೋಮವಾರದ 'ಮೈಸೂರು ಮಿತ್ರ' ಪತ್ರಿಕೆಯ ಮುಖಪುಟದಲ್ಲಿ ಪ್ರಕಟವಾದ ಶಾಸಕ ಎಸ್.ಟಿ. ಸೋಮಶೇಖರ್ ಅವರು ಮುಡಾ ಹಗರಣದ ಬಗ್ಗೆ 'ಮುಡಾದಲ್ಲಿ ಹಗರಣ ಮಾಮೂಲಿ' ಎಂದು ಬೇಸರ ವ್ಯಕ್ತಪಡಿಸಿದ ಬಾಲಿಶ ಹೇಳಿಕೆಯನ್ನು ಓದಿದ ಮೈಸೂರಿನ ಎಲ್ಲಾ ನಾಗರಿಕರು ತಲೆತಗ್ಗಿಸುವಂತಾಗಿದೆ. ಕಾರಣ, ಶಾಸಕರು ತಾವು ಮೈಸೂರಿನ ಉಸ್ತುವಾರಿ ಸಚಿವರಾಗಿದ್ದಾಗಲೇ ಇದು ಗೊತ್ತಿದ್ದು, ಅಂದಿನ ಆಯುಕ್ತರನ್ನು ಬದಲಾಯಿಸಲು ಯತ್ನಿಸಿ ವಿಫಲನಾದೆ ಎಂದು ಹೇಳಿಕೊಂಡಿರುವುದು ಇನ್ನಷ್ಟು ಹಾಸ್ಯಾಸ್ಪದ ಸಂಗತಿಯಾಗಿದೆ. ಇಡೀ ಮುಡಾ ಹಗರಣವು ಬೇಲಿಯೇ ಎದ್ದು ಹೊಲ ಮೇಯಿತೆಂಬ ನಾಣ್ಣುಡಿಯನ್ನು ಪುಷ್ಟೀಕರಿಸಿದಂತಿದೆ. ಇದಕ್ಕೆ ಪೂರಕವಾಗಿ ದಿನಾಂಕ: 07–07–2024ರ ಭಾನುವಾರದ 'ಮೈಸೂರು ಮಿತ್ರ'ದ ಮುಖಪುಟದಲ್ಲೇ ಪ್ರಕಟವಾದ ಡ್ರಗ್ಸ್ ಮಾರುವವರು, ರೌಡಿಗಳು, ರಿಯಲ್ ಎಸ್ಟೇಟ್ ದಂಧೆಕೋರರ ಬಗ್ಗೆ ಪೊಲೀಸರಿಗೆ ಮಾಹಿತಿ ಇದ್ದರೂ ಸಹ ಏಕೆ ಕ್ರಮ ಕೈಗೊಳ್ಳುತ್ತಿಲ್ಲ? ಹಾಗೂ ರೌಡಿಗಳಿಗೆ ನಿಮ್ಮನ್ನು ಕಂಡರೆ ಭಯವಿಲ್ಲ ಎನ್ನುವುದಾದರೆ ಜನ ಯಾರಿಂದ ರಕ್ಷಣೆ ಪಡೆಯಬೇಕು ಎಂಬುದಾಗಿ ಮುಖ್ಯಮಂತ್ರಿಗಳೇ ಹಿರಿಯ ಪೊಲೀಸ್ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿರುವುದು ಇಂದಿನ ಮುಡಾ ಹಗರಣದ ಎಸ್.ಟಿ. ಸೋಮಶೇಖರ್ ಹೇಳಿಕೆಗೆ ಕಾಕತಾಳೀಯವಾಗಿದೆ.

ಅಂದಿನ ಉಸ್ತುವಾರಿ ಸಚಿವರಾಗಿದ್ದ ಎಸ್.ಟಿ. ಸೋಮಶೇಖರ್ ಅವರು ಅಂದೇ ಈ ಎಲ್ಲಾ ಹಗರಣಗಳಿಗೆ ಬ್ರೇಕ್ ಹಾಕಿದ್ದರೆ ಅಂದು ಅತ್ಯಂತ ಯಶಸ್ವಿಯಾಗಿ ನೆರವೇರಿಸಿದ ಮೈಸೂರು ದಸರಾ ಪ್ರಶಂಸೆಗೆ ಪಾತ್ರರಾಗಿದ್ದ ಇವರಿಗೆ ಮತ್ತೊಂದು ಕಿರೀಟವು ಇವರ ಮುಡಿಗೇರುತ್ತಿತ್ತು. ಆದರೆ, ಇದೆಲ್ಲಾ ಬಿಟ್ಟು ತಾವು ದೋಷಪೂರಿತರಲ್ಲ ಎಂಬುದಾಗಿ ಸಾಬೀತುಪಡಿಸಿಕೊಳ್ಳುತ್ತಿರುವುದು ಆಕ್ಷೇಪಾರ್ಹ. ಕಾರಣ, IGNORANCE OF LAW IS NO EXCUSE ಆದರೆ, ಈಗಾಗಿರುವ ಎಲ್ಲಾ ಹಗರಣಗಳಲ್ಲಿ ಸಿಲುಕಿಕೊಂಡಿರುವ ರಾಜಕಾರಣಿಗಳು ನಮ್ಮನ್ನಾಳುವ ಸಾರ್ವಭೌಮರುಗಳೇ ಹೊರತು ಮತ್ಯಾರೂ ಅಲ್ಲ. ಇದರಲ್ಲಿ ಪಕ್ಷಭೇದ ಮರೆತು ಎಲ್ಲಾ ರಾಜಕೀಯ ಪಕ್ಷಗಳ ರಾಜಕಾರಣಿಗಳು ಶಾಮೀಲಾಗಿದ್ದಾರೆ ಹಾಗೂ ಇವರೆಲ್ಲರನ್ನು ಜನಸೇವಕರೆಂದು ಹೇಳಲು ನಾಚಿಕೆಯಾಗುತ್ತದೆ. ಹೀಗಿದ್ದರೂ ಪ್ರಕರಣವನ್ನು ಮುಚ್ಚಿ ಹಾಕಲು ಒಬ್ಬರಿಗೊಬ್ಬರು ಬ್ಯಾಟಿಂಗ್ ಪ್ರದರ್ಶಿಸುತ್ತಿರುವುದು ವಿಪರ್ಯಾಸವೇ ಸರಿ. ಒಟ್ಟಿನಲ್ಲಿ ಮುಡಾದಲ್ಲಿ ಕಾನೂನುಬಾಹಿರವಾಗಿ ನಿವೇಶನ ಹಂಚಿಕೆ ಮಾಡಿ ಸರ್ಕಾರಕ್ಕೆ ಸಾವಿರಾರು ಕೋಟಿ ರೂಪಾಯಿ ನಷ್ಟವುಂಟು ಮಾಡಿರುವ ಕುರಿತಂತೆ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸುವಂತೆ ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ಆಗ್ರಹಿಸಿರುವ ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ ಈ ಸಂದರ್ಭದಲ್ಲಿ ಅಭಿನಂದನಾರ್ಹರು.

ಇದೆಲ್ಲಕ್ಕಿಂತ ಮುಖ್ಯವಾಗಿ ಮೈಸೂರು ನಗರದಲ್ಲಿ ನಿವೇಶನವನ್ನರಸಿ ಕಳೆದ 10–15 ವರ್ಷಗಳಿಂದ ಅರ್ಜಿಯನ್ನು ಹಾಕಿ ಬಕಪಕ್ಷಿಯಂತೆ ಕಾದು ಕುಳಿತಿರುವ ನಾಗರಿಕರುಗಳಿಗೆ ಇಂದಿನ ಈ ಪರಿಸ್ಥಿತಿ ತ್ರಿಶಂಕು ಪರಿಸ್ಥಿತಿಯಂತಾಗಿದೆ.

–ಎಸ್. ಹರೀಶ್ ಕಶ್ಯಪ್, ವಿದ್ಯಾರಣ್ಯಪುರಂ, ಮೈಸೂರು

ಶಾರದಾದೇವಿನಗರ ವೃತ್ತಕ್ಕೆ ಸಿಗ್ನಲ್ ಲೈಟ್ ಅಳವಡಿಸಿ



ಮಾನ್ಯರೆ,

ಮೈಸೂರಿನ ಶಾರದಾದೇವಿ ನಗರದ ವೃತ್ತಕ್ಕೆ ನ್ಯೂ ಕಾಂತರಾಜ್ ಅರಸ್ ರಸ್ತೆ, ಸಿಎಫ್‌ಟಿಆರ್‌ಐ. ಲೇಔಟ್, ಟಿ.ಕೆ. ಲೇಔಟ್, ರಾಮಕೃಷ್ಣನಗರ ಸರ್ಕಲ್, ರಿಂಗ್ ರೋಡ್ ಮತ್ತು ಶಾರದಾದೇವಿನಗರದ ಮುಖ್ಯರಸ್ತೆಯು ಸೇರಿದಂತೆ ಒಟ್ಟು ಆರು ಕಡೆಗಳಿಂದ ಸಂಪರ್ಕವಿರುವುದರಿಂದ ಈ ವೃತ್ತವನ್ನು ಮೈಸೂರಿನ ಎರಡನೇ ಆರ್‌ಗೇಟ್ ಎಂದೇ ಜನ ಕರೆಯುತ್ತಾರೆ. ಈ ವೃತ್ತದಲ್ಲಿ ಅತೀ ಹೆಚ್ಚು ವಾಹನ ಸಂಚಾರವಿದ್ದು, ಸಿಗ್ನಲ್ ಲೈಟ್ ಇಲ್ಲದ ಕಾರಣ ಪದೇ ಪದೇ ಅಪಘಾತಗಳು ಸಂಭವಿಸುತ್ತಲೇ ಇವೆ. ಕೂಡಲೇ ಈ ವೃತ್ತಕ್ಕೆ ಸಿಗ್ನಲ್ ಲೈಟ್ ಅಳವಡಿಸಿ ಅಪಘಾತಗಳನ್ನು ತಪ್ಪಿಸುವಂತೆ ಈ ಮೂಲಕ ಮನವಿ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಮಾಲ್ಗುಡಿ ಎಕ್ಸ್‌ಪ್ರೆಸ್ ರೈಲು ಪ್ರಯಾಣ ರದ್ದಾದರೆ ಪ್ರಯಾಣಿಕರಿಗೆ ಅನಾನುಕೂಲವಲ್ಲವೇ?



ಮಾನ್ಯರೇ,

ಮೈಸೂರು ನಗರ ರೈಲ್ವೆ ನಿಲ್ದಾಣದಿಂದ ಪ್ರತಿದಿನ ಬೆಳಿಗ್ಗೆ 8.20ಕ್ಕೆ ಮೈಸೂರಿಂದ ಬೆಂಗಳೂರಿಗೆ ಹೊರಡುವ ಮಾಲ್ಗುಡಿ ಎಕ್ಸ್‌ಪ್ರೆಸ್ ಜು.10 ರಂದು ಬುಧವಾರ ಚೆನ್ನೈನಿಂದ ತಡವಾಗಿ ಮೈಸೂರಿಗೆ ಬಂದ ಕಾರಣ ಆ ದಿನ ರೈಲಿನ ಮುಂದಿನ ಪ್ರಯಾಣ ರದ್ದುಗೊಳಿಸಲಾಯಿತು. ಈ ರೈಲು ಕಾಯುತ್ತಿದ್ದ ಸಾಕಷ್ಟು ಪ್ರಯಾಣಿಕರು ನಿರಾಸೆಯಿಂದ ಮನೆಗಳಿಗೆ ಮರಳಿದರು. ಇದು ಬಿಟ್ಟರೆ ಬೆಳಗ್ಗೆ 9.10ಕ್ಕೆ ಬೆಂಗಳೂರಿಗೆ ಪ್ಯಾಸೆಂಜರ್ ರೈಲು ಇದ್ದು, ಇದು ಮಧ್ಯಾಹ್ನ 1 ಗಂಟೆ ಸುಮಾರಿಗೆ ಬೆಂಗಳೂರು ತಲುಪುತ್ತದೆ. ಅದು ಬಿಟ್ಟರೆ ಬೆಳಗ್ಗೆ 11.30ಕ್ಕೆ ಒಡೆಯರ್ ಎಕ್ಸ್‌ಪ್ರೆಸ್ ಇದೆ. ಕೆಲವು ಪ್ರಯಾಣಿಕರು ತುರ್ತಾಗಿ ಬೆಂಗಳೂರಿಗೆ ಹೋಗಬೇಕಾಗಿರುತ್ತದೆ. ರೈಲು ಏನಾದರೂ ಹೀಗೆ ತಡವಾಗಿ ಬಂದರೆ ರದ್ದುಗೊಳಿಸುವ ಬದಲು ಅಧಿಕಾರಿಗಳು ಪರ್ಯಾಯ ವ್ಯವಸ್ಥೆ ಕಲ್ಪಿಸಿದರೆ ಪ್ರಯಾಣಿಕರಿಗೆ ಅನುಕೂಲವಾಗುತ್ತದೆ. ರೈಲ್ವೆ ಅಧಿಕಾರಿಗಳು ಈ ನಿಟ್ಟಿನಲ್ಲಿ ಚಿಂತಿಸಿ, ಸೂಕ್ತ ನಿರ್ಧಾರ ಕೈಗೊಳ್ಳಲು ಮನವಿ.

– ಜಿ.ಪಿ.ಹರೀಶ್, ವಿ.ವಿ.ಮೊಹಲ್ಲಾ, ಮೈಸೂರು.



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ: 94815 33167

ಬಹುಮುಖಿ

ಕನ್ನಡ ಕುಲ ಪುರೋಹಿತ ಆಲೂರು ವೆಂಕಟರಾಯರು

ಜುಲೈ 12, ಆಲೂರು ವೆಂಕಟರಾಯರ ಜನ್ಮದಿನ ತನ್ನಿಮಿತ್ತ ಈ ಲೇಖನ.


ಅದು ಹತ್ತೊಂಬತ್ತನೆಯ ಶತಮಾನದ ಅಂತಿಮ ವರ್ಷಗಳ ಕಾಲ. ಕನ್ನಡ ನಾಡಿನಲ್ಲೇ ಕನ್ನಡಿಗರು ಪರಕೀಯರಂತೆ ಪಡಬಾರದ ಪಾಡು ಪಡುತ್ತಾ ಬದುಕುತ್ತಿದ್ದ ಹೀನಸ್ಥಿತಿ. ಕನ್ನಡಿಗರು ತಲೆತಗ್ಗಿಸಿಕೊಂಡು ಓಡಾಡುತ್ತಿದ್ದ ಕಾಲವದು. ಕೆಚ್ಚಿನಿಂದ ನಾವು ಕನ್ನಡಿಗರೆಂದು ಎದೆತಟ್ಟಿ ಹೇಳಿಕೊಳ್ಳುವ ಧೈರ್ಯ ಆಗ ಬಹಳ ಮಂದಿಗಿರಲಿಲ್ಲ. ಅಭಿಮಾನ ಶೂನ್ಯತೆಯಲ್ಲಿ ಕನ್ನಡಿಗರು ಬದುಕುತ್ತಿದ್ದ ದುರ್ದಿನಗಳವು. ದೌರ್ಭಾಗ್ಯ ಎಂದರೆ ಕನ್ನಡ ನಾಡಿನ ಗಂಡು ಮೆಟ್ಟಿದ ನೆಲ ಧಾರವಾಡದಲ್ಲೂ ಆಗ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗೇನೂ ಇರಲಿಲ್ಲ. ಎಲ್ಲೆಲ್ಲೂ ಮರಾಠಿಗರ ದರ್ಪ–ದರ್ಬಾರ್! ಎಲ್ಲದರಲ್ಲೂ ಅವರದೇ ಮೇಲುಗೈ. ಒಂದು ರೀತಿ ಕನ್ನಡಿಗರ ಮೇಲೆ ಮರಾಠಿಗರ ಸವಾರಿಯೇ ನಡೆಯುತ್ತಿತ್ತು. ಉತ್ತರ ಕರ್ನಾಟಕವನ್ನು ಆಗ 'ದಕ್ಷಿಣ ಮರಾಠದೇಶ' ಎಂದು ಕರೆಯುತ್ತಿದ್ದರು.

ಒಮ್ಮೆ ಧಾರವಾಡದಲ್ಲಿ ಸಾರ್ವಜನಿಕ ಗಣೇಶೋತ್ಸವದಲ್ಲಿ ಮರಾಠಿ ಹಾಡುಗಳ ಸಮ್ಮೇಳನವೇ ನಡೆಯುತ್ತಿತ್ತು. ಅಲ್ಲಿ ಒಂದು ಹಾಡು ಕೂಡ ಕನ್ನಡದ್ದಾಗಿರಲಿಲ್ಲ. ಎಲ್ಲವೂ ಮರಾಠಿಮಯವಾಗಿತ್ತು. ಅಲ್ಲಿ ಕುಳಿತಿದ್ದ ಕನ್ನಡದ ಕೆಚ್ಚಿನ ಬಾಲಕನೊಬ್ಬ ಇದನ್ನು ಪ್ರತಿಭಟಿಸುವಂತೆ ಅಲ್ಲಿಂದ ಮೇಲೆದ್ದು ಹೊರಟ. ಅವನ ಸ್ನೇಹಿತರೂ ಅವನನ್ನು ಹಿಂಬಾಲಿಸಿದರು. ಗಣೇಶೋತ್ಸವದಲ್ಲಿ ಕನ್ನಡ ಗೀತೆಗಳನ್ನೇ ಏಕೆ ಹಾಡಬಾರದೆಂದು ಒಂದು ಕ್ಷಣ ಆ ಬಾಲಕ ಯೋಚಿಸಿದ. ಆದರೆ, ಕನ್ನಡ ಗೀತೆಗಳಿಗೂ ಬರವಿದ್ದ ಆ ಕಾಲದಲ್ಲಿ ಅವು ಸಿಗುವುದಾದರೂ ಎಲ್ಲಿ? ಬಾಲಕ ಯೋಚಿಸುತ್ತಾ ಸುಮ್ಮನೆ ಕೂರಲಿಲ್ಲ. ಕೂಡಲೇ ಲಕ್ಷ್ಮಣ ಘಟಿಕಾರ ಎಂಬ ತನ್ನ ಗೆಳೆಯನೊಬ್ಬನಿಂದ ಹದಿನೈದು ಕನ್ನಡ ಗೀತೆಗಳನ್ನು ಬರೆಸಿದ. ವೆಂಕಟ ಎಂಬ ಮತ್ತೊಬ್ಬ ಗೆಳೆಯ 'ಗಜಾನನಸ್ತವನ' ಎಂಬ ಹೆಸರಿನಲ್ಲಿ ಅವುಗಳನ್ನು ಪ್ರಕಟಿಸಿಯೂ ಬಿಟ್ಟ. ಮರಾಠಿಗರ ದೌರ್ಜನ್ಯಕ್ಕೆ ಸೆಡ್ಡು ಹೊಡೆಯುವಂತೆ ಆ ಬಾಲಕ ತನ್ನ ಗೆಳೆಯರ ಗುಂಪನ್ನು ಕಟ್ಟಿಕೊಂಡು ಗಣೇಶೋತ್ಸವದಲ್ಲಿ ಭರ್ಜರಿಯಾಗಿ ಕನ್ನಡಗೀತೆಗಳ ಕಾರ್ಯಕ್ರಮವನ್ನು ನಡೆಸಿಯೇ ಬಿಟ್ಟ.

ಹೀಗೆ ಸ್ವಾಭಿಮಾನದಿಂದ ಪ್ರಚಂಡ ಕನ್ನಡಾಭಿಮಾನವನ್ನು ಪ್ರದರ್ಶಿಸಿದ ಆ ಧೀರಬಾಲಕನೇ ಕರ್ನಾಟಕ ಕುಲ ಪುರೋಹಿತ ಆಲೂರು ವೆಂಕಟರಾಯರು. ಆಗ ಬಾಲಕ ವೆಂಕಟರಾಯರ ವಯಸ್ಸು ಹತ್ತೋ, ಹನ್ನೊಂದೋ ಇರಬೇಕು. ಇನ್ನೂ ಆರನೆಯ ತರಗತಿಯ ವಿದ್ಯಾರ್ಥಿ ಆಗಿದ್ದರಷ್ಟೆ, ಆಗಲೇ ಅವರಲ್ಲಿ ಕನ್ನಡ ಪ್ರೇಮ ಧಮನಿ ಧಮನಿಗಳಲ್ಲೂ ತುಂಬಿ ತುಳುಕುತ್ತಿತ್ತು. ಇದರ ಪರಿಣಾಮ ಕನ್ನಡ ಗೀತೆಗಳನ್ನು ಪ್ರಕಟಿಸಿ ಗಣೇಶೋತ್ಸವ ದಲ್ಲಿ ಹಾಡಿಸಿ ಮರಾಠಿಗರಿಗೆ ಅವರು ಬಾಲ್ಯದಲ್ಲೇ ಸವಾಲಾಗಿ ನಿಂತರು. ಆದರೆ ಆಗ ಅವರು ಪ್ರಕಟಿಸಿದ್ದ ಕನ್ನಡ ಗೀತೆಗಳ 'ಗಜಾನನಸ್ತವನ' ಕೃತಿ ಪೊಲೀಸರ ಕೆಂಗಣ್ಣಿಗೆ ಬಿದ್ದು ದೇಶದ್ರೋಹ ಕೆಲಸ ಮಾಡುತ್ತಿದ್ದಾರೆಂದು ಉಯಿಲೆಬ್ಬಿಸಿ ಕೃತಿಯ ಪ್ರತಿಗಳನ್ನು ಮುಟ್ಟುಗೋಲು ಹಾಕಿಕೊಂಡದ್ದೂ ಉಂಟು. ಆದರೆ ಆಲೂರರು ಇದಕ್ಕೆ ಅಂಜದೆ, ಅಳುಕದೆ ಬಾಲ್ಯದಿಂದಲೂ ಕನ್ನಡಪರ ಶಕ್ತಿಯಾಗಿ ವಿಜೃಂಭಿಸುತ್ತಾ ಬೆಳೆದರು. ಅಂದು ಮರಾಠಿಗರ ವಿರುದ್ಧ ಬಾಲಕ ಆಲೂರರು ತೋರಿದ ಕನ್ನಡತನದ ಧೀರತನಕ್ಕೆ ಇಡೀ ಕನ್ನಡ ನಾಡೇ ಒಂದು ಕ್ಷಣ ಬೆಕ್ಕಸಬೆರಗಾಗಿತ್ತು. ವೀರ ಕನ್ನಡಿಗ ಇವನೆಂದು ಆಲೂರರನ್ನು ಮುಕ್ತಕಂಠದಿಂದ ಪ್ರಶಂಸಿಸಿತ್ತು.

ಮೀಸೆ ಮೂಡುವ ಮುನ್ನವೇ ಸ್ವಾಭಿಮಾನದ ಮಹಾ ಕನ್ನಡ ಶಿಖರವಾಗಿ ನಿಂತು ಕನ್ನಡದ ಖಡ್ಗವನ್ನು ಝಳಪಿಸಿದ ಇಂಥ ಕನ್ನಡದ ಸಿಂಹ ಆಲೂರು ವೆಂಕಟರಾಯರು ಜನಿಸಿದ್ದು ಬಿಜಾಪುರದಲ್ಲಿ. ಅದು ಆಷಾಢ ಶುದ್ಧ ಪಂಚಮಿ 1880 ಜುಲೈ 12. ತಂದೆ ಭೀಮರಾಯ, ತಾಯಿ ಭಾಗೀರಥಿಬಾಯಿ. ಇವರು ಮೂಲತಃ ಗದಗ ಜಿಲ್ಲೆಯ ರೋಣ ತಾಲೂಕಿನ ಹೊಳೆ ಆಲೂರಿನವರು. ಧಾರವಾಡಕ್ಕೆ ಬಂದು ನೆಲೆಸಿದ್ದರು. ಆಲೂರು ವೆಂಕಟರಾಯರ ತಂದೆ ಭೀಮರಾಯರು ಸರ್ಕಾರಿ ನೌಕರಿಯಲ್ಲಿದ್ದು ಧಾರವಾಡದ ಸುತ್ತಮುತ್ತಲಿನ ಸ್ಥಳಗಳಲ್ಲಿ ಸೇವೆ ಸಲ್ಲಿಸುತ್ತಿದ್ದರು. ಆಲೂರು ಎಂಬುದು ಮುಂದೆ ಅವರ ಮನೆತನದ ಹೆಸರಾಗಿ ಉಳಿಯಿತು.

ಹುಟ್ಟುತ್ತಲೇ ಕನ್ನಡ ದೀಕ್ಷೆ ತೊಟ್ಟು ಬಂದವರಂತಿದ್ದ ಆಲೂರು ವೆಂಕಟರಾಯರು ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ನವಲಗುಂದ, ಗದಗ, ಹಾನಗಲ್‌ನಲ್ಲಿ ಕಲಿತು 1897ರಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಯನ್ನು ಧಾರವಾಡದಲ್ಲಿ ಮುಗಿಸಿದರು. ಅನಾರೋಗ್ಯದ ಕಾರಣ ಆಗ ಕಾಲೇಜಿಗೆ ಸೇರಲು ಅವರಿಗೆ ಆಗಲಿಲ್ಲ. ಆದರೆ ಆಲೂರರು ಮನೆಯಲ್ಲೇ ತಂದೆ ಭೀಮರಾಯರು ಸಂಗ್ರಹಿಸಿಟ್ಟಿದ್ದ ಬಹಳಷ್ಟು ಪುಸ್ತಕಗಳನ್ನು ಜ್ಞಾನದ ಹಸಿವಿನಿಂದ ಓದಿ ಮಸ್ತಕಕ್ಕೆ ತುಂಬಿಕೊಂಡರು. ಆಗ ಸಾಹಿತ್ಯ ರಚನೆ ಮಾಡಬೇಕೆಂಬ ಉತ್ಸಾಹ–ತುಡಿತ ಅವರಲ್ಲಿ ಉಂಟಾಯಿತು. ಆ ಸಮಯದಲ್ಲಿ ಪ್ರೊ. ಭಾನು ಅವರ ಮರಾಠಿಯ 'ನೀತಿ ಮೀಮಾಂಸೆ'ಯನ್ನು ಕನ್ನಡಕ್ಕೆ ಭಾಷಾಂತರಿಸಿದರು. ಆಗ ಓದಿನ ಜೊತೆಗೆ ಅಲ್ಲಿದ್ದ ವಿದ್ಯಾರ್ಥಿಗಳನ್ನೆಲ್ಲಾ ಒಗ್ಗೂಡಿಸಿ ಕನ್ನಡ ಚಟುವಟಿಕೆಗಳಲ್ಲಿ ತೊಡಗಿ ವಿದ್ಯಾರ್ಥಿ ದಿಸೆಯಲ್ಲೇ ಕನ್ನಡ ಕೈಂಕರ್ಯವನ್ನು ಮಾಡುವತ್ತ ಮುನ್ನುಗ್ಗಿದ್ದರು. ಎಲ್ಲಾ ವಿಷಯಗಳಲ್ಲೂ ಆಸಕ್ತಿ ಹೊಂದಿದ್ದ ಪಾದರಸದಂತಹ ವ್ಯಕ್ತಿತ್ವದ ಆಲೂರರು ಆಗಲೇ 'ವೇಣಿ ಸಂಹಾರ' ಎಂಬ ಸಂಸ್ಕೃತ ನಾಟಕವನ್ನು ಸ್ನೇಹಿತರೊಡಗೂಡಿ ಪ್ರದರ್ಶಿಸಿ ಎಲ್ಲರನ್ನೂ ಅಚ್ಚರಿಗೊಳಿಸಿದ್ದರು.



ಆಲೂರು ವೆಂಕಟರಾಯರು

> **ಹೋರಾಟ, ಭಾಷಣ, ಉಪನ್ಯಾಸ, ಪತ್ರಿಕೆಗಳಲ್ಲಿ ಲೇಖನ, ಸಾಂದರ್ಭಿಕ ಬರಹ, ಜೀವನೋಪಾಯಕ್ಕಾಗಿ ಪುಸ್ತಕಗಳ ರಚನೆ ಮತ್ತು ಪ್ರಕಟಣೆ. ತನ್ಮೂಲಕ ಕನ್ನಡ ಜನಜಾಗೃತಿ, ಹೀಗೆ ಸಾಗಿದ ಆಲೂರರು ಕೆಲಕಾಲ ಧಾರವಾಡದ ಕರ್ನಾಟಕ ವಿದ್ಯಾಲಯದಲ್ಲಿ ಗೌರವ ಮುಖ್ಯೋಪಾಧ್ಯಾಯರೂ ಆಗಿದ್ದರು. ಅವರು ಏನೇ ಆಗಿದ್ದರೂ ಎದೆಯೊಳಗೆ ಕನ್ನಡವೇ ಮಾರ್ದನಿಸುತ್ತಿತ್ತು. ನಿಂತಲ್ಲಿ, ಕುಳಿತಲ್ಲಿ, ನಡೆದಲ್ಲಿ, ಅಷ್ಟೇ ಏಕೆ ನಿದ್ರಾವಸ್ಥೆಯಲ್ಲೂ ಸಹ 'ಕನ್ನಡ ಕನ್ನಡ ಕನ್ನಡ' ಎಂದೇ ಧ್ಯಾನಿಸುತ್ತಿದ್ದರು.**

ಮನೆಯವರ ಒತ್ತಾಯಕ್ಕೆ ಮಣಿದು ತಮ್ಮ 16ನೇ ವಯಸ್ಸಿನಲ್ಲೇ ಲಕ್ಷ್ಮಿಬಾಯಿ ಅವರೊಡನೆ ಆಲೂರು ವೆಂಕಟರಾಯರು ವಿವಾಹವಾಗಿದ್ದರು. ಆದರೆ ವಿಧಿಯು ಲಕ್ಷ್ಮಿಬಾಯಿ ಅವರನ್ನು ಹೆಚ್ಚು ಕಾಲ ಇವರೊಡನೆ ಸಾಂಸಾರಿಕ ಜೀವನ ನಡೆಸಲು ಬಿಡದೆ ಮರಣದ ಮನೆಗೆ ಕರೆದೊಯ್ದಿತ್ತು ಅನಂತರ ಆಲೂರರು ಬದುಕಿನ ಬಂಡಿದೂಡಲು ಮತ್ತೊಂದು ಮದುವೆಯನ್ನೂ ಆದರು.

ಕನ್ನಡದ ಕೆಚ್ಚನ್ನು ಹೆಚ್ಚಿಸಿ, ಕನ್ನಡದ ಹುಚ್ಚನ್ನು, ಎಲ್ಲರಿಗೂ ಹಿಡಿಸುತ್ತಲೇ 1903ರಲ್ಲಿ ಬಿ.ಎ. ಪದವಿ ಪಡೆದುಕೊಂಡು ಫರ್ಗ್ಯೂಸನ್ ಕಾಲೇಜಿನಿಂದ ಆಲೂರರು ಹೊರಬಂದರು. ನಂತರ ಮುಂಬೈನಲ್ಲಿ ಕಾನೂನು ಅಭ್ಯಾಸ ಮಾಡಿ ಕಾನೂನು ಪದವಿ ಗಳಿಸಿ ವಕೀಲರಾಗಿ 1905ರಲ್ಲಿ ಅವರು ಧಾರವಾಡಕ್ಕೆ ಬಂದು ವಕೀಲಿ ವೃತ್ತಿ ಕೈಗೊಂಡರು. ಆದರೆ ಹೆಚ್ಚು ಕಾಲ ಅವರು ಲಾಯರ್‌ಗಿರಿ ಮಾಡಲಿಲ್ಲ. ಆ ಕಾಲಕ್ಕೆ ವಕೀಲಿ ವೃತ್ತಿ ಎಂಬುದು ಹಣದ ಹೊಳೆಯನ್ನೇ ಹರಿಸುವ ಲಾಭದಾಯಕ ಕೆಲಸವಾಗಿತ್ತು. ಆದರೂ ಅದನ್ನು ಬಿಟ್ಟು ಅಂದಿನ ಕನ್ನಡದ ದುಃಸ್ಥಿತಿ ಕಂಡು ಕ್ಷಣ ಕ್ಷಣವೂ ತುಡಿಯುತ್ತಿದ್ದ ಆಲೂರರಿಗೆ ಇದು ಬೇಕಾಗಿರಲಿಲ್ಲ. ಹಾಗಾಗಿ ಕಪ್ಪು ಕೋಟನ್ನು ಕಳಚಿಟ್ಟರು. ಕನ್ನಡವ ರಕ್ಷಿಸಲು ಕನ್ನಡವನ್ನೇ ಮೈ–ಮನಕ್ಕೆಲ್ಲಾ ತೊಟ್ಟುಕೊಂಡರು. ಕನ್ನಡ ಭಾಷೆಗೆ, ಕನ್ನಡ ನಾಡಿಗೆ, ಒಟ್ಟಾರೆ ಕನ್ನಡದ ಸರ್ವತೋಮುಖ ಏಳಿಗೆಗೆ ದುಡಿಯುವ ಸಂಕಲ್ಪ ಮಾಡಿದರು. ಒಂದು ರೀತಿ ಶಪಥವನ್ನೂ ಗೈದರು. ಕರ್ನಾಟಕದ ಏಕೀಕರಣದ ಕನಸು ಕಂಡರು. ಕನ್ನಡ ಕುಲ ಪುರೋಹಿತರಾಗಿ ಕನ್ನಡಮ್ಮನನ್ನು ಪೂಜಿಸುತ್ತಾ ತಮ್ಮಿಡೀ ಬದುಕನ್ನು ಕನ್ನಡಕ್ಕಾಗಿ ಸಮರ್ಪಿಸಿಕೊಂಡರು.

ಈ ನಡುವೆ ತಾಯಿ ಭಾಗೀರಥಿ ಬಾಯಿ ನಿಧನ. ಸರ್ಕಾರಿ ನೌಕರಿಯಲ್ಲಿದ್ದ ತಂದೆ ಭೀಮರಾಯರ ನಿವೃತ್ತಿ, ಎಳೆಯ ಪತ್ನಿ ಲಕ್ಷ್ಮೀಬಾಯಿ ಅಕಾಲಿಕ ನಿಧನ, ಆಲೂರು ವೆಂಕಟರಾಯರನ್ನು ಭವಿಷ್ಯದ ಬಗ್ಗೆ ಚಿಂತೆಗೀಡು ಮಾಡಿತು. ಆತಂಕ ಕಾಡಿತು. ಹೊಟ್ಟೆಪಾಡಿನ ಜೀವನವೂ ನಡೆಯಬೇಕಲ್ಲ? ಜೊತೆಗೆ ಬಗಲಿಗೆ ಬಿದ್ದ ಎರಡನೆಯ ಹೆಂಡತಿ ಬೇರೆ. ಏನು ಮಾಡುವುದೆಂದು ಅವರು ಯೋಚಿಸುತ್ತಿರುವಾಗಲೇ ನನ್ನನ್ನು ಅವಲಂಬಿಸದೆ ಏನು ಬೇಕಾದರೂ ಮಾಡು ಎಂದರು ತಂದೆ. ಏನಾದರೂ ಸರಿಯೇ, ಮೊದಲು ನಾಡು–ನುಡಿಯ ಕರ್ತವ್ಯವೆಂದೂ, ಆಮೇಲೆ ಸ್ವಂತದ ಬದುಕೆಂದೂ ಮನದಲ್ಲೇ ದೃಢನಿರ್ಧಾರ ಮಾಡಿಕೊಂಡ ಆಲೂರರು ಅದರಂತೆಯೇ ನಾಡಿಗಾಗಿ ದುಡಿಯಲು ದಿಟ್ಟ ಹೆಜ್ಜೆ ಇಟ್ಟರು!

ಹೋರಾಟ, ಭಾಷಣ, ಉಪನ್ಯಾಸ, ಪತ್ರಿಕೆಗಳಲ್ಲಿ ಲೇಖನ, ಸಾಂದರ್ಭಿಕ ಬರಹ, ಜೀವನೋಪಾಯಕ್ಕಾಗಿ ಪುಸ್ತಕಗಳ ರಚನೆ ಮತ್ತು ಪ್ರಕಟಣೆ. ತನ್ಮೂಲಕ ಕನ್ನಡ ಜನಜಾಗೃತಿ, ಹೀಗೆ ಸಾಗಿದ ಆಲೂರರು ಕೆಲಕಾಲ ಧಾರವಾಡದ ಕರ್ನಾಟಕ ವಿದ್ಯಾಲಯದಲ್ಲಿ ಗೌರವ ಮುಖ್ಯೋಪಾಧ್ಯಾಯರೂ ಆಗಿದ್ದರು. ಅವರು ಏನೇ ಆಗಿದ್ದರೂ ಎದೆಯೊಳಗೆ ಕನ್ನಡವೇ ಮಾರ್ದನಿಸುತ್ತಿತ್ತು. ನಿಂತಲ್ಲಿ, ಕುಳಿತಲ್ಲಿ, ನಡೆದಲ್ಲಿ, ಅಷ್ಟೇ ಏಕೆ ನಿದ್ರಾವಸ್ಥೆಯಲ್ಲೂ ಸಹ 'ಕನ್ನಡ ಕನ್ನಡ ಕನ್ನಡ' ಎಂದೇ ಧ್ಯಾನಿಸುತ್ತಿದ್ದರು.

ಆಗತಾನೆ ಲಾರ್ಡ್ ಕರ್ಜನ್‌ನಿಂದ ಬಂಗಾಳ ವಿಭಜನೆಯಾಗಿತ್ತು ಆದರೆ ಇದನ್ನು ಒಪ್ಪದ ಬಂಗಾಳದ ಜನತೆ ದೇಶಾದ್ಯಂತ ಬೀದಿಗಿಳಿದು ಉಗ್ರ ವಿರೋಧ ವ್ಯಕ್ತಪಡಿಸುತ್ತಿದ್ದರು. ಈ ಘಟನೆ ಆಲೂರರ ಮೇಲೆ ಹೆಚ್ಚು ಪರಿಣಾಮ ಬೀರಿತ್ತು. ಬಂಗಾಳದ ಪ್ರಜೆಗಳು ಬಂಗಾಳವು ವಿಭಜನೆಯಾಗಿ ಇಬ್ಭಾಗವಾದುದನ್ನು ಸಹಿಸದಿರುವಾಗ ಕನ್ನಡ ನಾಡು ಐದು ಭಾಗವಾಗಿ ಹರಿದು ಹಂಚಿ ಹೋಗಿರುವುದನ್ನು ಕನ್ನಡಿಗರಾದ ನಾವು ಸಹಿಸುವುದಾದರೂ ಹೇಗೆ? ಎಂದು ಬಿಸಿರಕ್ತದ ಯುವಕ ಆಲೂರರು ತಮ್ಮಲ್ಲೇ ಪ್ರಶ್ನಿಸಿಕೊಂಡರು. ಅದನ್ನು ಸಮಸ್ತ ಕನ್ನಡಿಗರ ಮುಂದಿಟ್ಟು ನಿದ್ರಾವಸ್ಥೆಯಲ್ಲಿದ್ದ ಕನ್ನಡಿಗರನ್ನು ಎಚ್ಚರಿಸಲು ಮುಂದಾದರು. ಎಚ್ಚರಿಸಿಯೂ ಬಿಟ್ಟರು. ಐದು ಪ್ರಾಂತಗಳಲ್ಲಿ ಹರಿದು ಹಂಚಿ ಹೋಗಿರುವ ಕರ್ನಾಟಕದ ಏಕೀಕರಣವಾಗಲೇಬೇಕು ಎಂಬ ಧ್ಯೇಯದೊಡನೆ ಕನ್ನಡಿಗರಲ್ಲಿ ಕನ್ನಡ ಪ್ರಜ್ಞೆ ಮತ್ತು ಹೋರಾಟದ ಕೆಚ್ಚನ್ನು ತುಂಬುವುದರ ಬಗ್ಗೆ ಆಲೂರರು ಚಿಂತನೆ ನಡೆಸಿ ತಮ್ಮ ವಿಚಾರ ಕ್ರಾಂತಿಯ ಪ್ರಚಾರ ಹಾಗೂ ಪ್ರಸಾರ ಮಾಡಿ ಕನ್ನಡ ಜಾಗೃತಿಯ ಜ್ಯೋತಿ ಹಚ್ಚಿದ್ದರು. ಕನ್ನಡದ ಚೆಂಬೆಳಕಿನ ಕವಿ ಚೆನ್ನವೀರ ಕಣವಿ ಅಮರು ವರ್ಣಿಸುವಂತೆ–

> "ವಿಸ್ಮೃತಿಯ ಧೂಳಿಡಿದು
> ಮೂಲೆಗುಂಪಾಗಿದ್ದ
> ರನ್ನಗನ್ನಡಿಯನೊರಸಿ,
> ಕನ್ನಡಿಗರ ಮುಖಕೆ ಹಿಡಿದು
> ಉಜ್ಜುಗಿಸಿ, ಭಾವೀ ವಿಭವ
> ದರ್ಶನಕೆ,ಗತವೈಭವದ
> ಜ್ಯೋತಿ ಹಿಡಿದವರು
> ಆಲೂರರು ...."

ಆಲೂರರ ಬಗ್ಗೆ ಕವಿ ಕಣವಿ ಅವರ ಈ ವರ್ಣನೆ ಖಂಡಿತಾ ಅತಿಶಯೋಕ್ತಿಯೇನೂ ಅಲ್ಲ. ಅಂಥ ಕನ್ನಡದ ಜ್ಯೋತಿ ಬೆಳಗಿ ಕರ್ನಾಟಕಕ್ಕೆ ಬೆಳಕಿನ ಮಹಾ ಮಾರ್ಗ ತೆರೆದಿಟ್ಟ ಕನ್ನಡದ ಮಹಾನುಭಾವರಿವರು. ಒಂದು ಕಣ್ಣಲ್ಲಿ ಕನ್ನಡಾಭಿಮಾನ ಮತ್ತೊಂದು ಕಣ್ಣಲ್ಲಿ ದೇಶಾಭಿಮಾನ ತುಂಬಿಕೊಂಡಿದ್ದ ಅಪ್ರತಿಮ ಕನ್ನಡ ಪ್ರೇಮಿ, ಅಸಾಧಾರಣ ದೇಶಭಕ್ತ ಆಲೂರರು ಕನ್ನಡ ಚಳವಳಿಯಷ್ಟೇ ದೇಶದ ಸ್ವಾತಂತ್ರ್ಯ ಚಳವಳಿಯಲ್ಲೂ ದುಡಿದ ಸ್ವಾತಂತ್ರ್ಯ ಸೇನಾನಿಯೂ ಹೌದು. ಕರ್ನಾಟಕ ಏಕೀಕರಣದ ಕನಸಿನೊಡನೆ ಕನ್ನಡಪರ ಹೋರಾಟದ ಜೊತೆಗೆ ರಾಷ್ಟ್ರದ ಬಿಡುಗಡೆಗಾಗಿಯೂ ಅವಿರತ ಹೋರಾಟ. ಹೀಗೆ ಎರಡು ದಿಕ್ಕುಗಳಲ್ಲಿ ಆಲೂರರ ದೇಶ ಹಾಗೂ ಕನ್ನಡಾಭಿಮಾನದ ಕೈಂಕರ್ಯ ಅವಿಸ್ಮರಣೀಯ. ಭಾರತ ಸ್ವತಂತ್ರವಾದುದನ್ನೂ, ಕನ್ನಡನಾಡು ಒಂದಾದುದನ್ನೂ ಆಲೂರರು ತಮ್ಮ ಜೀವಿತ ಕಾಲದಲ್ಲೇ ಕಂಡು ಸಂಭ್ರಮಿಸಿದ್ದರು. ಆದರೆ, ಅವರ ಮತ್ತೊಂದು ಮಹಾಕನಸು ಕನ್ನಡ ನಾಡು ಕರ್ನಾಟಕವಾಗಬೇಕೆನ್ನುವುದೂ ನನಸಾಗಿ 1973 ನವೆಂಬರ್ 1ರಂದು ಕರ್ನಾಟಕ ರಾಜ್ಯೋದಯವಾದಾಗ ಇದನ್ನು ನೋಡಲು ಅವರು ಇರಲಿಲ್ಲ. (ನಿಧನ 25.02.1964) ಇದ್ದಿದ್ದರೆ ಇನ್ನೆಷ್ಟು ಸಂತಸಪಡುತ್ತಿದ್ದರೋ ಏನೋ...!

ಮಿಲೇನಿಯಂ ವೃತ್ತದಲ್ಲಿ ಪರಿಣಾಮಕಾರಿ ಸಂಚಾರ ನಿರ್ವಹಣೆ ಕೊರತೆ; ಪ್ರಮುಖ ಸಮಯದಲ್ಲಿ ವಾಹನ ದಟ್ಟಣೆ; ಸಾರ್ವಜನಿಕರು, ಪ್ರವಾಸಿಗರಿಗೆ ಕಿರಿಕಿರಿ





ಮಿಲೇನಿಯಂ ಸರ್ಕಲ್‌ನಲ್ಲಿ ಸಂಚಾರ ನಿರ್ವಹಣೆ ವೈಫಲ್ಯದಿಂದ ವಾಹನ ದಟ್ಟಣೆ ಹೆಚ್ಚಳ. ಮತ್ತೊಂದು ಚಿತ್ರದಲ್ಲಿ ವಾಹನ ಸವಾರರಿಂದ ಅಡ್ಡಾದಿಡ್ಡಿ ವಾಹನ ಚಾಲನೆ.

ಮೈಸೂರು, ಜು.11(ಎಂಕೆ)– ಮೈಸೂರು–ಬೆಂಗಳೂರು ಮುಖ್ಯರಸ್ತೆ, ಎಲ್‌ಐಸಿ ವಿಭಾಗೀಯ ಕಚೇರಿ ಮುಂಭಾಗದ ಮಿಲೇನಿಯಂ ಸರ್ಕಲ್(ಟಿ.ಎನ್.ನರಸಿಂಹ ಮೂರ್ತಿ ವೃತ್ತ)ನಲ್ಲಿ ಸುಗಮ ಹಾಗೂ ಸುರಕ್ಷಿತ ವಾಹನ ಸಂಚಾರಕ್ಕೆ ತುರ್ತು ಕ್ರಮದ ಅಗತ್ಯವಿದೆ.

ಈ ವೃತ್ತ ನೀಲಗಿರಿ ರಸ್ತೆ(ಫೌಂಟೇನ್ ವೃತ್ತ ಹಾಗೂ ಜೆಎಸ್‌ಎಸ್ ಡೆಂಟಲ್ ಕಾಲೇಜು ಕಡೆಗೆ), ಅಶೋಕ ರಸ್ತೆ, ಶಿವಾಜಿ ರಸ್ತೆ, ನೆಲ್ಸನ್ ಮಂಡೇಲಾ ರಸ್ತೆ(ಹೈವೇ ಸರ್ಕಲ್ ಕಡೆಗೆ) ಸೇರಿದಂತೆ ಹಲವು ಪ್ರಮುಖ ರಸ್ತೆಗಳಿಗೆ ಸಂಪರ್ಕ ಕೊಂಡಿಯಾಗಿರುವುದರಿಂದ ಇಲ್ಲಿ ಸಾಮಾನ್ಯವಾಗಿ ಸದಾ ವಾಹನ ದಟ್ಟಣೆ ಸರ್ವೇ ಸಾಮಾನ್ಯ ಆದರೆ ಶಾಲಾ–ಕಾಲೇಜು, ಕಚೇರಿಗಳು ಆರಂಭವಾಗುವ ಹಾಗೂ ಮುಕ್ತಾಯ ವಾಗುವ(ಬೆಳಗ್ಗೆ 8 ರಿಂದ 10 ಗಂಟೆ, ಮಧ್ಯಾಹ್ನ 3 ರಿಂದ ರಾತ್ರಿ 8) ಸಮಯದಲ್ಲಿ ವಿಪರೀತ ವಾಹನ ದಟ್ಟಣೆ. ಇನ್ನು ವಾರಾಂತ್ಯ ದಿನಗಳು, ಬಕ್ರೀದ್, ದಸರಾ ಮಹೋತ್ಸವ ಇನ್ನಿತರ ವಿಶೇಷ ದಿನಗಳಲ್ಲಂತೂ ಈ ವೃತ್ತದಲ್ಲಿ ಸಂಚರಿಸುವುದೇ ದೊಡ್ಡ ಸಾಹಸವಾಗಿ ಪರಿಣಮಿಸುತ್ತದೆ.

ವಿಶಾಲ ವೃತ್ತ ಆದರೆ?: ಈ ಮಿಲೇನಿಯಂ ವೃತ್ತ ವಿಶಾಲವಾಗಿದೆ. ಇತ್ತೀಚೆಗೆ ಸುಭಾಷ್ ನಗರ ಕಡೆಯಿಂದ ಅಬ್ದುಲ್ ಕಲಾಂ ಆಜಾದ್ ರಸ್ತೆಯಲ್ಲಿ ಬರುವ ವಾಹನಗಳು ಕಡ್ಡಾಯವಾಗಿ ಎಡಕ್ಕೆ ತಿರುವು ಪಡೆಯುವಂತೆ ವಿಭಜಕ ಅಳವಡಿಸಲಾಗಿದೆ. ಆದರೂ ನಿರ್ವಹಣೆ ವೈಫಲ್ಯದಿಂದ ಈ ವೃತ್ತದಲ್ಲಿ ಸಂಚಾರ ಅಸ್ತವ್ಯಸ್ತವಾಗಿ ವಾಹನ ಚಾಲಕರು, ಪಾದಚಾರಿಗಳು ಸಮಸ್ಯೆ ಎದುರಿಸುವಂತಾಗಿದೆ.

ನೆಲ್ಸನ್ ಮಂಡೇಲಾ ರಸ್ತೆಯಿಂದ ಫೌಂಟೇನ್ ವೃತ್ತದ ಕಡೆಗೆ ಮತ್ತು ಡೆಂಟಲ್ ಕಾಲೇಜು ಕಡೆಯಿಂದ ನೆಲ್ಸನ್ ಮಂಡೇಲಾ ರಸ್ತೆಗೆ ಹೋಗುವವರು ಈ ಮಿಲೇನಿಯಂ ವೃತ್ತದ ತೀಕ್ಷ್ಣ ತಿರುವಿನಲ್ಲೇ ಸಾಗಬೇಕು. ಈ ವೇಳೆ ಫೌಂಟೇನ್ ವೃತ್ತದಿಂದ ಹಾಗೂ ಅಬ್ದುಲ್ ಕಲಾಂ ರಸ್ತೆಯಿಂದ ಬರುವ ವಾಹನಗಳೂ ನುಸುಳುತ್ತವೆ. ಪರಿಣಾಮ ಯಾವ ಕಡೆಯಿಂದ ವಾಹನಗಳು ಬರುತ್ತವೋ ಎಂಬುದನ್ನು ಊಹಿಸಲಾಗದ ಸ್ಥಿತಿ ನಿರ್ಮಾಣವಾಗುತ್ತದೆ. ಇದೆಲ್ಲದರ ನಡುವೆ ಅಡ್ಡಾದಿಡ್ಡಿ ವಾಹನ ಚಲಾಯಿಸುವವರು ಕಂಟಕ ತಂದೊಡ್ಡುತ್ತಾರೆ. ಪೆಟ್ರೋಲ್ ಬಂಕ್ ಇನ್ನಿತರ ಅಂಗಡಿಗಳಿಗೆ ಹೋಗಲು ಮಿಲೇನಿಯಂ ವೃತ್ತದಲ್ಲಿ ಯದ್ವಾತದ್ವಾ ಅಡ್ಡಾಡುತ್ತಾರೆ. ಇಲ್ಲಿ ಸಂಚಾರ ನಿಯಮಗಳನ್ನು ಉಲ್ಲಂಘಿಸಿ, ಮನಬಂದಂತೆ ವಾಹನ ಓಡಿಸುವವರು ಲೆಕ್ಕವಿಲ್ಲದಷ್ಟಿದ್ದಾರೆ. ಪರಿಣಾಮ ನಿತ್ಯ ಸಣ್ಣ–ಪುಟ್ಟ ಅಪಘಾತಗಳು ಸಂಭವಿಸುತ್ತವೆ. ಇಲ್ಲಿ ಭಾರೀ ವಾಹನಗಳೂ ಹೆಚ್ಚಾಗಿ ಸಂಚರಿಸುವುದರಿಂದ ಗಂಭೀರ ಅಪಘಾತಗಳಾಗುವ ಸಾಧ್ಯತೆಯೂ ಇದೆ.

ಮೂಕ ಪ್ರೇಕ್ಷಕರಷ್ಟೇ: ಹೆದ್ದಾರಿಯಲ್ಲಿರುವ ಈ ಪ್ರಮುಖ ವೃತ್ತದಲ್ಲಿ ಸಂಚಾರ ಪೊಲೀಸ್ ಸಿಬ್ಬಂದಿ ಅಕ್ಷರಶಃ ಮೂಕ ಪ್ರೇಕ್ಷಕ. ಬನ್ನಿಮಂಟಪ ಪಂಜಿನ ಕವಾಯತು ಮೈದಾನದ ಕಾಂಪೌಂಡ್ ಬಳಿ ಅವರು ಸುಮ್ಮನೆ ನಿಂತಿರುತ್ತಾರೆ ಇಲ್ಲವೇ ಕುಳಿತಿರುತ್ತಾರೆ. ಅಪಘಾತ ಸಂಭವಿಸಿದರೆ ಧಾವಿಸುವುದ ಬಿಟ್ಟರೆ ತ್ವರಿತ ರೀತಿ ನಿರಂತರ ನಿರ್ವಹಣೆ ಮಾಡುವುದು ಕಂಡುಬರುತ್ತಿಲ್ಲ. ಓರ್ವ ಸಿಬ್ಬಂದಿಯಿಂದ ಅದು ಸಾಧ್ಯವಾಗುವುದೂ ಇಲ್ಲ. ಅವರೆದುರೇ ತ್ರಿಬಲ್ ರೈಡಿಂಗ್, ಹೆಲ್ಮೆಟ್ ಧರಿಸದವರು ನಿರ್ಭಯವಾಗಿ ಓಡಾಡುತ್ತಾರೆ ಎಂದು ಇಲ್ಲಿನ ಸಂಚಾರ ಅಸ್ತವ್ಯಸ್ತತೆಯಿಂದ ನೊಂದಿರುವ ನಾಗರಿಕರು ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ.

ನುರಿತ ಅಧಿಕಾರಿಗೆ ಜವಾಬ್ದಾರಿ: ಈ ವೃತ್ತದ ಮೂಲಕ ಯಾರಾದರೂ ಗಣ್ಯಾತಿಗಣ್ಯರು ಸಾಗುವಾಗ ಪೊಲೀಸರು ಉತ್ತಮವಾಗಿ ಸಂಚಾರ ವ್ಯವಸ್ಥೆ ನಿರ್ವಹಣೆ ಮಾಡುತ್ತಾರೆ. ಆ ವೇಳೆ ಎಎಸ್‌ಐ ಅಥವಾ ಎಸ್‌ಐಗಳೇ ಸ್ಥಳದಲ್ಲಿದ್ದು ಸಂಚಾರ ನಿರ್ವಹಣೆ ಮೇಲೆ ನಿಗಾ ವಹಿಸುತ್ತಾರೆ. ಎಲ್ಲಾ ದಿನಗಳಲ್ಲೂ ಆ ರೀತಿಯ ಕ್ರಮ ವಹಿಸಿದರೆ ತುಂಬಾ ಅನುಕೂಲ. ಸಂಚಾರ ನಿರ್ವಹಣೆ ಬಗ್ಗೆ ಅರಿವಿರುವ, ದೈಹಿಕವಾಗಿ ಉತ್ತಮ ಸಾಮರ್ಥ್ಯ ಹೊಂದಿರುವ, ಚುರುಕಾಗಿ ಕಾರ್ಯ ನಿರ್ವಹಿಸುವ ಅನುಭವಿ ಸಿಬ್ಬಂದಿಯನ್ನು ಇಲ್ಲಿಗೆ ನಿಯೋಜಿಸುವುದು ಒಳ್ಳೆಯದು. ಜೊತೆಗೆ ಅತೀವ ವಾಹನ ದಟ್ಟಣೆ ಉಂಟಾಗುವ ಸಮಯದಲ್ಲಾದರೂ ಅಧಿಕಾರಿಗಳು ಉಸ್ತುವಾರಿ ನೋಡಿಕೊಳ್ಳಬೇಕು. ಪೊಲೀಸರನ್ನು ಕಂಡರೆ ಸಂಚಾರ ನಿಯಮ ಉಲ್ಲಂಘನೆಗಾದರೂ ಬ್ರೇಕ್ ಬೀಳಬಹುದು. ಅತ್ಯಾಧುನಿಕ ಕ್ಯಾಮರಾಗಳನ್ನು ಅಳವಡಿಸಿ, ಅಡ್ಡಾದಿಡ್ಡಿ ವಾಹನ ಚಾಲಿಸುವವರಿಗೆ ಮುಲಾಜಿಲ್ಲದೆ ಬಿಸಿ ಮುಟ್ಟಿಸಬೇಕು. ಮುಖ್ಯವಾಗಿ ಈ ವೃತ್ತದಲ್ಲಿ ಸುಗಮ ಹಾಗೂ ಸುರಕ್ಷಿತ ಸಂಚಾರ ದೃಷ್ಟಿಯಿಂದ ವೈಜ್ಞಾನಿಕ ನೆಲೆಗಟ್ಟಿನಲ್ಲಿ ಸುಧಾರಣಾ ಕ್ರಮಗಳನ್ನು ಕೈಗೊಳ್ಳಬೇಕು. ಈ ಬಗ್ಗೆ ನಗರ ಪೊಲೀಸ್ ಆಯುಕ್ತರು ಸ್ಥಳ ಪರಿಶೀಲಿಸಿ, ತುರ್ತು ಕ್ರಮ ವಹಿಸಬೇಕು ಎಂದು ವಾಹನ ಚಾಲಕರು ಆಗ್ರಹಿಸಿದ್ದಾರೆ.

ಪರಿಶೀಲಿಸಿ ವೈಜ್ಞಾನಿಕ ಕ್ರಮ

ಮಿಲೇನಿಯಂ ವೃತ್ತದಲ್ಲಿ ವಾಹನ ದಟ್ಟಣೆ ನಿಯಂತ್ರಿಸಲು ಕ್ರಮ ಕೈಗೊಳ್ಳಲಾಗುವುದು. ಈಗಾಗಲೇ ಕ್ಯಾಮರಾಗಳನ್ನು ಅಳವಡಿಸಿದ್ದು, ಸಂಚಾರ ನಿಯಮ ಉಲ್ಲಂಘಿಸುವವರ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತಿದೆ. ಸ್ಥಳ ಪರಿಶೀಲನೆ ನಡೆಸಿ, ವೈಜ್ಞಾನಿಕವಾಗಿ ರೋಡ್ ಹಂಪ್ಸ್ ಅಥವಾ ಬ್ಯಾರಿಕೇಡ್ ಅಳವಡಿಸುವುದು ಹಾಗೂ ಹೆಚ್ಚು ಸಿಬ್ಬಂದಿ ನಿಯೋಜನೆ ಬಗ್ಗೆ ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಿ, ಸೂಕ್ತ ಕ್ರಮ ಕೈಗೊಳ್ಳಲಾಗುವುದು.

- ಪರಶುರಾಮಪ್ಪ, ಎಸಿಪಿ, ಮೈಸೂರು ಸಂಚಾರ ವಿಭಾಗ

ಇಲ್ಲಿಗೂ ಬೇಕು ಮೇಕ್ರಿ ಸರ್ಕಲ್ ಮಾದರಿ

ಮೈಸೂರು–ಬೆಂಗಳೂರು ಮುಖ್ಯ ರಸ್ತೆಯ ಮಿಲೇನಿಯಂ ವೃತ್ತ ತಗ್ಗು ಪ್ರದೇಶದಲ್ಲಿದೆ. ಇಲ್ಲಿ ಸಂಜೆ ವೇಳೆ ವಾಹನ ದಟ್ಟಣೆ ವಿಪರೀತ. ವೃತ್ತ ಬಳಸುವ ಪ್ಯಾರು ಎಂದು ಹಲವರು ಅಡ್ಡಾದಿಡ್ಡಿ ವಾಹನ ಓಡಿಸುತ್ತಾರೆ. ಕೆಲ ವಾಹನಗಳಿಗೆ ನಂಬರ್ ಪ್ಲೇಟ್ ಕೂಡ ಇರುವುದಿಲ್ಲ. ಹಾಗಾಗಿ ಬೆಂಗಳೂರಿನ ಮೇಕ್ರಿ ವೃತ್ತದ ಮಾದರಿಯಲ್ಲಿ ಇಲ್ಲಿಯೂ ಅಂಡರ್ ಪಾಸ್ ಅಥವಾ ಫ್ಲೈ ಓವರ್ ನಿರ್ಮಿಸುವುದು ಅವಶ್ಯವೆನಿಸುತ್ತದೆ. ಸದ್ಯಕ್ಕೆ ಪೊಲೀಸರು ಪರಿಣಾಮಕಾರಿ ಕ್ರಮ ಕೈಗೊಳ್ಳಬೇಕಿದೆ ಎಂದು ರಾಜೀವ್ ನಗರದ ಹಿರಿಯ ಸರ್ಕಾರಿ ವೈದ್ಯಾಧಿಕಾರಿಯೊಬ್ಬರು ಅಭಿಪ್ರಾಯಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮುಡಾ ಹಗರಣ ಸಿಬಿಐಗೆ ವಹಿಸಲು ಆಗ್ರಹಿಸಿ ಮೈಸೂರಿನಲ್ಲಿ ಇಂದು ಬಿಜೆಪಿ ಪ್ರತಿಭಟನೆ

ಮೈಸೂರು, ಜು.11(ಬಿಎಲ್‌ಯು)– ಮುಡಾ ಹಗರಣವನ್ನು ಸಿಬಿಐ ತನಿಖೆಗೆ ವಹಿಸುವಂತೆ ಆಗ್ರಹಿಸಿ ನಾಳೆ (ಜುಲೈ 12) ನಡೆಯುವ ಪ್ರತಿಭಟನೆಯಲ್ಲಿ 10 ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸಲಿದ್ದು, ನಗರದ ದೇವರಾಜ ಅರಸ್ ರಸ್ತೆ, ಸಯ್ಯಾಜಿರಾವ್ ರಸ್ತೆ, ಅಶೋಕ ರಸ್ತೆ ಸೇರಿದಂತೆ ಇತರೆ ವಾಣಿಜ್ಯ ಕೇಂದ್ರಗಳ ವ್ಯಾಪಾರಸ್ಥರು ಎರಡು ಗಂಟೆ ವ್ಯಾಪಾರ ಬಂದ್ ಮಾಡಿ ಪ್ರತಿಭಟನೆಯಲ್ಲಿ ಭಾಗವಹಿಸಬೇಕೆಂದು ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ ಮನವಿ ಮಾಡಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಮಹಾರಾಜ ಕಾಲೇಜು ಮೈದಾನದಲ್ಲಿ ಪ್ರತಿಭಟನಾ ಸಭೆ ನಡೆಯಲಿದ್ದು, ವಿರೋಧ ಪಕ್ಷದ ನಾಯಕ ಆರ್.ಅಶೋಕ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಶಾಸಕ ಸಿ.ಟಿ.ರವಿ ಸೇರಿದಂತೆ ಹಲವರು ಭಾಗವಹಿಸಲಿದ್ದಾರೆ ಎಂದರು. ತರುವಾಯ ಎಲ್ಲರೂ ಮುಡಾ ಕಚೇರಿಯತ್ತ ಹೋಗುತ್ತೇವೆ. ಅಲ್ಲಿ ಅನ್ಯಾಯಕ್ಕೊಳಗಾದ ಜನರು ಮುಡಾಗೆ ಮುತ್ತಿಗೆ ಹಾಕುವ ಸಾಧ್ಯತೆ ಇದೆ. ಆದರೆ ಸರ್ಕಾರ ಪೊಲೀಸರ ಮೂಲಕ ನಮ್ಮ ಪ್ರತಿಭಟನೆ ತಡೆಯುವ ಪ್ರಯತ್ನ ಮಾಡುತ್ತಿದೆ ಎಂದು ಆರೋಪಿಸಿದರು.

ಆದರೆ ಸರ್ಕಾರ ಏನೇ ಪ್ರಯತ್ನ ಮಾಡಿದರೂ ನಾಳೆ ನಾವು ನಡೆಸುವ ಪ್ರತಿಭಟನೆ ಹತ್ತಿಕ್ಕಲು ಸಾಧ್ಯವಿಲ್ಲ ಎಂದು ಎಚ್ಚರಿಸಿದರು. ಮೈಸೂರಿನ ಎಲ್ಲಾ ವರ್ಗದ ಜನರಿಗೆ ಮುಡಾದಿಂದ ಅನ್ಯಾಯವಾಗಿದೆ. ಇದರಿಂದ ಸ್ವಯಂ ಪ್ರೇರಣೆಯಿಂದ ಎಲ್ಲರೂ ಪ್ರತಿಭಟನೆಯಲ್ಲಿ ಭಾಗವಹಿಸಬೇಕು. ಜೊತೆಗೆ ನಗರದ ವ್ಯಾಪಾರಸ್ಥರು ನಾಳೆ ಮಧ್ಯಾಹ್ನ 12 ರಿಂದ 2 ಗಂಟೆ ತನಕ ಅಂಗಡಿಗಳನ್ನು ಬಂದ್ ಮಾಡಿ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಬೇಕು ಎಂದು ನಾಗೇಂದ್ರ ಮನವಿ ಮಾಡಿದರು.

ಶಾಸಕ ಟಿ.ಎಸ್.ಶ್ರೀವತ್ಸ, ಮಾಧ್ಯಮ ವಕ್ತಾರ ಮೋಹನ್, ಮಹೇಶ್ ರಾಜ್ ಅರಸ್, ಹಿಂದುಳಿದ ಮೋರ್ಚಾ ನಗರಾಧ್ಯಕ್ಷ ಜೋಗಿ ಮಂಜು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮುಡಾ ನಿವೇಶನ ಹಂಚಿಕೆ ಹಗರಣ ತನಿಖಾ ತಂಡದಿಂದ 5 ವರ್ಷದ ಸಭಾ ನಡಾವಳಿ ಪರಿಶೀಲನೆ

ಅಧ್ಯಕ್ಷರ ಆಪ್ತ ಶಾಖೆಯಿಂದ 7,000 ಪುಟಗಳ ಜೆರಾಕ್ಸ್ ಪ್ರತಿ ಸಲ್ಲಿಕೆ

ಮೈಸೂರು, ಜು.11 (ಆರ್‌ಕೆ)– ಭೂ ಪರಿಹಾರದ ನೆಪದಲ್ಲಿ ಮಾಲೀಕರಿಗೆ ಅಕ್ರಮವಾಗಿ ಬೆಲೆ ಬಾಳುವ ಅಭಿವೃದ್ಧಿಗೊಂಡ ನಿವೇಶನಗಳನ್ನು ಹಂಚಿಕೆ ಮಾಡಿರುವ ಹಗರಣದ ತನಿಖೆ ನಡೆಸುತ್ತಿರುವ ಅಧಿಕಾರಿಗಳು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಲ್ಲಿ ಕಳೆದ ಐದು ವರ್ಷಗಳ ಅವಧಿಯಲ್ಲಿ ನಡೆದ ಸಭೆಗಳ ನಡಾವಳಿಯನ್ನು ಪರಿಶೀಲಿಸುತ್ತಿದ್ದಾರೆ.

ಪ್ರಾಧಿಕಾರದ ಅಧ್ಯಕ್ಷರ ಆಪ್ತ ಶಾಖೆ ಸಿಬ್ಬಂದಿಗಳಿಂದ 5 ವರ್ಷಗಳ ಅವಧಿಯಲ್ಲಿ ನಡೆದಿರುವ ಸಾಮಾನ್ಯ ಸಭೆಯ ನಡಾವಳಿಗಳು, ಕೈಗೊಂಡ ನಿರ್ಣಯಗಳ ಜೆರಾಕ್ಸ್ ಪ್ರತಿ ನೀಡುವಂತೆ ವೆಂಕಟಾಚಲಪತಿ ನೇತೃತ್ವದ ತನಿಖಾಧಿಕಾರಿಗಳು ಕೇಳಿದ್ದಾರೆ.

ಸಭಾ ನಡಾವಳಿ ಮೂಲ ಕಡತಗಳನ್ನು ಹುಡುಕಿ ಎಲ್ಲಾ ಪುಟಗಳನ್ನು ಜೆರಾಕ್ಸ್ ತೆಗೆದು ಕೊಡಲಾಗುತ್ತಿದ್ದು, 5 ವರ್ಷದ ನಡಾವಳಿಗಳು 7000 ಪುಟಗಳಾಗುತ್ತವೆ. ಸಭೆಯಲ್ಲಿ ಮಂಡಿಸಲಾದ ವಿಷಯಗಳು, ಸದಸ್ಯರ ಅಭಿಪ್ರಾಯ, ಸಲಹೆಗಳು, ವಿರೋಧ, ಕೈಗೊಂಡ ನಿರ್ಣಯ, ಸರ್ಕಾರಕ್ಕೆ ಕಳುಹಿಸಿ ಅನುಮೋದನೆ ಪಡೆಯಲಾಗಿದೆಯೇ, ಸದಸ್ಯರು ಮಾತನಾಡಿದಂತೆ ಯಥಾವತ್ತಾಗಿ ನಡಾವಳಿಯಲ್ಲಿ ನಮೂದಿಸಲಾಗಿದೆಯೇ? ಕೈಗೊಂಡ ನಿರ್ಣಯ ಕಾನೂನು ಬದ್ಧವಾಗಿದೆಯೇ?, ನಿರ್ಣಯದನ್ವಯ ಎಷ್ಟು ಆದೇಶಗಳನ್ನು ಹೊರಡಿಸಲಾಗಿದೆ ಎಂಬುದರ ಬಗ್ಗೆ ತನಿಖಾಧಿಕಾರಿಗಳು ಅವಲೋಕನ ನಡೆಸುತ್ತಿದ್ದಾರೆ.

ಮುಡಾದಲ್ಲಿ ನಡೆಯುತ್ತಿರುವ ತನಿಖಾ ಪ್ರಕ್ರಿಯೆ ಸಂಬಂಧ ಬೆಂಗಳೂರಿನಲ್ಲಿ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿಗಳು ಸಭೆ ನಡೆಸಿ ಅವಲೋಕನ ಮಾಡಿದ್ದು, ನಿಜವಾಗಲೂ ಅಕ್ರಮ ನಡೆದಿರುವ ಬಗ್ಗೆ ಏನಾದರೂ ಸುಳಿವು, ಸಾಕ್ಷ್ಯ ಸಿಗುತ್ತಿದೆಯೇ ಎಂಬುದನ್ನು ಪರಾಮರ್ಶೆ ಮಾಡಿದರು ಎಂದು ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ವಿಶೇಷ ಪೂಜಾ ಉತ್ಸವ



ಚಾಮುಂಡಿಬೆಟ್ಟದಲ್ಲಿ ಭಕ್ತರ ತಂಗುದಾಣಕ್ಕೆ ಅನುಕೂಲವಾಗುವಂತೆ ಪೆಂಡಾಲ್ ಅಳವಡಿಸಿರುವುದು.



ಲಲಿತಮಹಲ್ ಪ್ಯಾಲೇಸ್ ಮೈದಾನದಲ್ಲಿ ಭಕ್ತರ ವಾಹನ ನಿಲುಗಡೆ ಹಾಗೂ ಉಚಿತ ಬಸ್ ಸೌಕರ್ಯಕ್ಕೆ ವ್ಯವಸ್ಥೆ ಮಾಡಿರುವುದು.

ವಾಹನಗಳ ಪ್ರವೇಶ ನಿರ್ಬಂಧಿಸಲಾಗಿದ್ದು, ಭಕ್ತರು ಹಾಗೂ ಪ್ರವಾಸಿಗರು ಲಲಿತಮಹಲ್ ಪ್ಯಾಲೇಸ್ ಮೈದಾನದಲ್ಲಿ ತಮ್ಮ ತಮ್ಮ ವಾಹನ ನಿಲುಗಡೆ ಮಾಡಿ ದೇವಾಲಯದ ವತಿಯಿಂದ ವ್ಯವಸ್ಥೆ ಮಾಡಿರುವ ಉಚಿತ ಬಸ್‌ನಲ್ಲಿ ಬೆಟ್ಟಕ್ಕೆ ಪ್ರಯಾಣಿಸಬಹುದಾಗಿದೆ. ಲಲಿತ ಮಹಲ್ ಮೈದಾನದಲ್ಲಿ ಖಾಸಗಿ ವಾಹನಗಳ ನಿಲುಗಡೆಗೆ ಹಾಗೂ ಉಚಿತ ಪ್ರಯಾಣದ ಬಸ್‌ಗಳ ನಿಲ್ದಾಣಕ್ಕೆ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿದ್ದು, ಪ್ರಯಾಣಿಕರು ಸರದಿ ಸಾಲಿನಲ್ಲಿ ನಿಂತು ಬಸ್ ಹತ್ತುವುದಕ್ಕೆ ನೆರವಾಗಲು ಬ್ಯಾರಿಕೇಡ್ ಅಳವಡಿಸಲಾಗಿದೆ. ಮುಂಜಾನೆ 5 ಗಂಟೆಯಿಂದಲೇ ಬೆಟ್ಟಕ್ಕೆ ಭಕ್ತರನ್ನು ಕರೆದೊಯ್ಯಲು 35 ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ.

ಕುಡಿಯುವ ನೀರು, ಶೌಚಾಲಯ: ಬೆಟ್ಟಕ್ಕೆ ಬರುವ ಭಕ್ತರ ಸಂಖ್ಯೆ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಬೆಟ್ಟ ಹಾಗೂ ವಾಹನ ನಿಲುಗಡೆಗೆ ವ್ಯವಸ್ಥೆ ಮಾಡಿರುವ ಲಲಿತಮಹಲ್ ಮೈದಾನದಲ್ಲಿ ಕುಡಿಯುವ ನೀರು ಹಾಗೂ ಶೌಚಾಲಯದ ವ್ಯವಸ್ಥೆ ಕಲ್ಪಿಸಲಾಗಿದೆ. ದೇವಾಲಯದ ಸುತ್ತ ಅನಗತ್ಯ ಜನಜಂಗುಳಿ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಲಾಗಿದ್ದು, ಭಕ್ತರು ಸರದಿ ಸಾಲು ಬಿಟ್ಟು ದೇವಾಲಯದ ಮುಂಭಾಗದ ಮಹಾದ್ವಾರದ ಬಳಿ ತೆರಳದಂತೆ ಸುತ್ತಲೂ ಬ್ಯಾರಿಕೇಡ್ ಅಳವಡಿಸಲಾಗಿದೆ. ಅಲ್ಲದೆ, ನಾಳೆ ಮುಂಜಾನೆಯೇ ಅಶ್ವಾರೋಹಿ ಪಡೆ ನಿಯೋಜಿಸಲು ನಿರ್ಧರಿಸಲಾಗಿದೆ.

ಪ್ಲಾಸ್ಟಿಕ್ ಬಳಕೆಗೆ ನಿಷೇಧ: ಬೆಟ್ಟಕ್ಕೆ ಬರುವ ಭಕ್ತರು ಪ್ಲಾಸ್ಟಿಕ್ ಕವರ್ ಸೇರಿದಂತೆ ಪರಿಸರಕ್ಕೆ ಹಾನಿಯಾಗುವ ಪ್ಲಾಸ್ಟಿಕ್ ಪದಾರ್ಥಗಳ ತರುವುದು ನಿಷಿದ್ಧ. ಬಸ್ ಹಾಗೂ ಮೆಟ್ಟಿಲುಗಳ ಮೂಲಕ ಬೆಟ್ಟಕ್ಕೆ ಬರುವ ಭಕ್ತರು ಪ್ಲಾಸ್ಟಿಕ್ ಕವರ್ ತಂದರೆ ದಂಡ ವಿಧಿಸಲು ನಿರ್ಧರಿಸಲಾಗಿದೆ.

ನಿತ್ಯವೂ ಒಂದು ಟಿಎಂಸಿ ನೀರು

ಬಿಡುಗಡೆ ಮಾಡಿರುವುದಲ್ಲದೆ, ತಮಿಳುನಾಡಿನ ಮೂರು ಜಲಾಶಯಗಳಲ್ಲಿ 24.705 ಟಿಎಂಸಿ ನೀರಿದೆ. ನೀರು ಬಿಡುಗಡೆಗೆ ಯಾವುದೇ ನಿರ್ಧಾರ ತೆಗೆದುಕೊಳ್ಳುವ ಮೊದಲು ಸಮಿತಿಯು ಜುಲೈ 25, 2024 ರವರೆಗೆ ಕಾಯು ವುದು ಸೂಕ್ತವೆಂದು ಕರ್ನಾಟಕ ಅಭಿಪ್ರಾಯ ವ್ಯಕ್ತಪಡಿಸಿತು. ತದನಂತರ, ರಾಜ್ಯದ ಜಲಾಶಯಗಳಿಂದ ನೀರು ಬಿಡುವ ಬಗ್ಗೆ ಸೂಕ್ತ ನಿರ್ಧಾರಕ್ಕೆ ಬರಲು ನೀರು ನಿರ್ವಹಣಾ ಸಮಿತಿ ವಸ್ತುಸ್ಥಿತಿ ಯನ್ನು ಸಮಂಜಸವಾಗಿ ಪರಿಗಣಿಸ ಬಹುದು ಎಂದು ಹೇಳಿತು.

ಆದರೆ, ತಮಿಳುನಾಡು, ಹಿಂದಿನ ಜಲ ವರ್ಷದಲ್ಲಿ, ಫೆಬ್ರವರಿ 2024 ರಿಂದ ಮೇ 2024 ರ ಅವಧಿಗೆ ಕರ್ನಾಟಕವು ಪರಿಸರದ ಹರಿವನ್ನು ಬಿಡುಗಡೆ ಮಾಡಿರುವುದಿಲ್ಲ. ಪ್ರಸಕ್ತ ಜಲ ವರ್ಷದಲ್ಲಿ ಪರಿಸ್ಥಿತಿ ಸಾಮಾನ್ಯವಾಗಿದ್ದು ಮತ್ತು ಕರ್ನಾಟಕವು ಸಾಮಾನ್ಯ ಒಳಹರಿವನ್ನು ಪಡೆದಿದೆ. ಆದ್ದರಿಂದ ಗೌರವಾನ್ವಿತ ಸುಪ್ರೀಂಕೋರ್ಟ್ ಮಾರ್ಪಡಿಸಿದಂತೆ ಕಾವೇರಿ ನೀರು ಇತ್ಯರ್ಥ ನ್ಯಾಯ ಮಂಡಳಿ (ಸಿಡಬ್ಲ್ಯೂಡಿಟಿ) ಆದೇಶದಂತೆ ಕರ್ನಾಟಕವು ಬಿಳಿಗುಂಡ್ಲುವಿನಲ್ಲಿ ನಿಗದಿತ ಹರಿವನ್ನು ಖಚಿತಪಡಿಸಿಕೊಳ್ಳಬೇಕು ಎಂದು ಮನವಿ ಮಾಡಿತ್ತು.

ನೀರಾವರಿ ಅಧೀಕ್ಷಕ ಇಂಜಿನಿಯರ್ ಮಹೇಶ್ ಮನೆ ಮೇಲೆ ಲೋಕಾಯುಕ್ತ ದಾಳಿ

ಸುಮಾರು 4.5 ಕೋಟಿ ರೂ ಮೌಲ್ಯದ ಚಿನ್ನ, ಬೆಳ್ಳಿ, ಆಭರಣ ಜೊತೆಗೆ ಸಾಕಷ್ಟು ಸ್ಥಿರಾಸ್ತಿ ಪತ್ತೆ

ಮೈಸೂರು, ಜು.11 (ಆರ್‌ಕೆ)–ರಾಜ್ಯದಾದ್ಯಂತ ಆದಾಯಕ್ಕಿಂತ ಅಧಿಕ ಆಸ್ತಿ ಗಳಿಸಿದ್ದಾರೆಂಬ ಕಾರಣಕ್ಕೆ ಹಲವು ಅಧಿಕಾರಿಗಳ ಮನೆ, ಕಚೇರಿಗಳ ಮೇಲೆ ಇಂದು ದಾಳಿ ನಡೆಸಿರುವ ಲೋಕಾಯುಕ್ತ ಅಧಿಕಾರಿಗಳು ಆದಾಯಕ್ಕಿಂತ ಹೆಚ್ಚು ಗಳಿಸಿರುವ ಸ್ಥಿರ, ಚರಾಸ್ತಿಗಳ ಪತ್ತೆ ಮಾಡಿದ್ದಾರೆ.

ಮೈಸೂರಿನ ಕಾವೇರಿ ನೀರಾವರಿ ನಿಗಮ (ಸಿಎನ್‌ಎನ್)ದ ಕಬಿನಿ ಉಪವಿಭಾಗದ ಸೂಪರಿಂಟೆಂಡಿಂಗ್ ಇಂಜಿನಿಯರ್ (ಎಸ್‌ಇ) ಕೆ.ಮಹೇಶ್ ಅವರ ಮೈಸೂರಿನ ಜೆಸಿ ನಗರದ ಮನೆ ಮೇಲೆ ದಾಳಿ ಮಾಡಿರುವ ಲೋಕಾಯುಕ್ತ ಪೊಲೀಸರು, ಭಾರಿ ಪ್ರಮಾಣದ ಆಸ್ತಿ ಪತ್ತೆ ಮಾಡಿದ್ದಾರೆ.

ಬೆಳಗ್ಗೆ 8 ಗಂಟೆಯಿಂದ ಸಂಜೆವರೆಗೂ ನಡೆದ ಪರಿಶೀಲನೆ ವೇಳೆ ಮಹೇಶ್ ಅವರಿಗೆ ಸೇರಿದ 2.75 ಕೋಟಿ ರೂ ಮೌಲ್ಯದ 3 ಮನೆಗಳು, 78 ಲಕ್ಷ ರೂ ಬೆಲೆಯ 3 ನಿವೇಶನ, 22 ಲಕ್ಷ ರೂ. ಬೆಲೆಯ 338 ಗ್ರಾಂ ಚಿನ್ನಾಭರಣ, 5 ಲಕ್ಷ ರೂ ಬೆಲೆಯ 1 ಕಾರು, 2 ಬೈಕ್‌ಗಳು, ತಾಯಿ ಹೆಸರಲ್ಲಿ 41 ಲಕ್ಷ ರೂ ಮೌಲ್ಯದ 11 ಎಕರೆ ಜಮೀನು ಸೇರಿ ಒಟ್ಟು 4.5 ಕೋಟಿ ರೂ ಸ್ಥಿರ ಹಾಗೂ ಚರಾಸ್ತಿಗಳ ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆ. ಜೆಸಿ ನಗರದ ಮನೆ, ಗೋಕುಲಂನ ಕಾವೇರಿ ನೀರಾವರಿ ನಿಗಮದ ಮಹೇಶ್ ಕಚೇರಿ, ನಂಜನಗೂಡಿನ ಕಬಿನಿ ಮತ್ತು ವರುಣ ಜಲಾಶಯ ಉಪ ವಿಭಾಗದ ಕಚೇರಿಗಳ ಮೇಲೆ ಏಕಕಾಲದಲ್ಲಿ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳು ಮಹೇಶ್ ಅವರಿಗೆ ಸಂಬಂಧಿಸಿದ ಆಸ್ತಿ ದಾಖಲೆಗಳನ್ನು ಶೋಧಿಸಿದರು. ಲೋಕಾಯುಕ್ತ ಮೈಸೂರು ಪ್ರಭಾರ ಎಸ್ಪಿ ಸುರೇಶ್ ಬಾಬು ಅವರ ಮಾರ್ಗದರ್ಶನದಲ್ಲಿ ಡಿವೈಎಸ್ಪಿ ಕೃಷ್ಣಯ್ಯ ಅವರ ನೇತೃತ್ವದಲ್ಲಿ ನಡೆದ ದಾಳಿಯಲ್ಲಿ ಇನ್ಸ್‌ಪೆಕ್ಟರ್‌ಗಳಾದ ರವಿಕುಮಾರ್, ಜಯರತ್ನ, ಲೋಕೇಶ್, ಸಿಬ್ಬಂದಿಗಳಾದ ವೀರಭದ್ರಸ್ವಾಮಿ, ಪ್ರಕಾಶ್, ಗೋಪಿ, ತ್ರಿವೇಣಿ, ಮೋಹನಗೌಡ, ಮೋಹನಕುಮಾರ್, ದಿನೇಶ್ ಹಾಗೂ ಇತರರು ಪಾಲ್ಗೊಂಡಿದ್ದರು.



ಕಬಿನಿ ಉಪವಿಭಾಗದ ಸೂಪರಿಂಟೆಂಡಿಂಗ್ ಇಂಜಿನಿಯರ್ ಕೆ.ಮಹೇಶ್ ಮನೆ.

ಹವಾಮಾನ ಬದಲಾವಣೆ ಕುರಿತು ಸಮ್ಮೇಳನ

ಮೈಸೂರು, ಜು. 11– ಮೈಸೂರಿನ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಪರಿಸರ ವಿಜ್ಞಾನ ವಿಭಾಗವು ಜು.25 ಮತ್ತು 26 ರಂದು ಸಮಗ್ರ ವಿಧಾನಗಳ ಮೂಲಕ ಹವಾಮಾನ ಬದಲಾವಣೆ ತಗ್ಗಿಸುವಿಕೆ, ಅಳವಡಿಕೆ ಮತ್ತು ಸ್ಥಿತಿಸ್ಥಾಪಕತ್ವ ಕುರಿತು ಸಮ್ಮೇಳನವನ್ನು ಆಯೋಜಿಸಿದೆ. ಸಮ್ಮೇಳನವು ಜು.25ರಂದು ಬೆಳಗ್ಗೆ 10.30 ಗಂಟೆಗೆ ಮೈಸೂರಿನ ಜೆಎಸ್‌ಎಸ್ ಔಷಧ ವಿಜ್ಞಾನ ಮಹಾ ವಿದ್ಯಾಲಯದ ಶ್ರೀ ರಾಜೇಂದ್ರ ಸಭಾಂಗಣದಲ್ಲಿ ಉದ್ಘಾಟನೆಗೊಳ್ಳಲಿದ್ದು, ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ರಾಷ್ಟ್ರೀಯ ವಿಪತ್ತು ನಿರ್ವಹಣೆ ಸಂಸ್ಥೆ ಕಾರ್ಯನಿರ್ವಾಹಕ ನಿರ್ದೇಶಕ ರಾಜೇಂದ್ರ ರಾಟ್ನೂ ಅತಿಥಿಗಳಾಗಿ ಭಾಗವಹಿಸುವರು. ಜೆಎಸ್‌ಎಸ್ ಅಕಾಡೆಮಿ ಪ್ರಭಾರ ಉಪಕುಲಪತಿ ಡಾ.ಬಸವನಗೌಡಪ್ಪ ಪ್ರಾಸ್ತಾವಿಕ ನುಡಿಗಳನ್ನಾಡುವರು. ಅಕಾಡೆಮಿ ಸಮ ಕುಲಪತಿ ಡಾ. ಬಿ.ಸುರೇಶ್ ಉದ್ಘಾಟನಾ ಭಾಷಣ ಮಾಡಲಿದ್ದಾರೆ. ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ.ಬೆಟಸೂರಮಠ ಅಧ್ಯಕ್ಷತೆ ವಹಿಸುವರು.

ವಾಲ್ಮೀಕಿ ನಿಗಮದ ಹಣ ಅಕ್ರಮ ವರ್ಗಾವಣೆ ತನಿಖೆ

ಕೇಂದ್ರ-ರಾಜ್ಯ ಸರ್ಕಾರದ ನಡುವೆ ಸಂಘರ್ಷ

- ಪ್ರಕರಣದ ತನಿಖೆಗೆ ದಾಖಲೆ ನೀಡಲು ಎಸ್‌ಐಟಿಗೆ ಇಡಿ ಮನವಿ
- ತನಿಖಾ ಹಂತದಲ್ಲಿ ದಾಖಲೆ ನೀಡಲು ಎಸ್‌ಐಟಿ ನಕಾರ
- ಕಚೇರಿ ಮೇಲೆ ದಾಳಿ ಮಾಡಿ ದಾಖಲೆ ವಶಪಡಿಸಿಕೊಳ್ಳಲು ಇಡಿ ಚಿಂತನೆ; ಪೊಲೀಸ್ ಭದ್ರತೆ ತಡೆದ ಎಸ್‌ಐಟಿ

ಬೆಂಗಳೂರು, ಜು.11(ಕೆಎಂಶಿ)– ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ 187 ಕೋಟಿ ರೂ. ಅಕ್ರಮ ವರ್ಗಾವಣೆ ಹಗರಣ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಘರ್ಷಣೆಗೆ ಕಾರಣವಾಗಿದೆ.

ಹಗರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯದ (ಇಡಿ) ಅಧಿಕಾರಿಗಳು ಕಳೆದ ಎರಡು ದಿನದಿಂದ ಪ್ರಕರಣದಲ್ಲಿ ಭಾಗಿಯಾಗಿರುವ ಆರೋಪದ ಹಿನ್ನೆಲೆಯಲ್ಲಿ ಆರೋಪಿಗಳ ಮನೆ ಮತ್ತು ಕಚೇರಿಗಳ ಮೇಲೆ ದಾಳಿ ನಡೆಸಿ ದಾಖಲೆಗಳನ್ನು ವಶಪಡಿಸಿಕೊಂಡು ಕೆಲವರನ್ನು ವಿಚಾರಣೆಗೆ ಒಳಪಡಿಸಿದ್ದಾರೆ.

ಆದರೆ, ನಿಗಮದಲ್ಲಿ ನಡೆದಿರುವ ಹಗರಣಕ್ಕೆ ಸಂಬಂಧಿಸಿದಂತೆ ಎಲ್ಲಾ ಕಡತಗಳು ಎಸ್‌ಐಟಿ ವಶದಲ್ಲಿವೆ.

ಇಡಿ ಅಧಿಕಾರಿಗಳು ನಿನ್ನೆ ನಿಗಮದ ಕಚೇರಿ ಮೇಲಿನ ದಾಳಿ ಸಂದರ್ಭದಲ್ಲಿ ತನಿಖೆಗೆ ನಿಗಮದ ಸಿಬ್ಬಂದಿ ಸಹಕರಿಸದ ಹಿನ್ನೆಲೆಯಲ್ಲಿ ಬಲವಂತವಾಗಿ ಕಪಾಟುಗಳನ್ನು ಒಡೆದು ಕೆಲವು ದಾಖಲೆಗಳನ್ನು ವಶಕ್ಕೆ ಪಡೆದರು. ಆದರೆ, ಈ ದಾಖಲೆಗಳು ಮಹತ್ವದ್ದಲ್ಲವೆಂದು ಅರಿತ ಇಡಿ ಅಧಿಕಾರಿಗಳು, ನಿಗಮದ ಸಿಬ್ಬಂದಿಯನ್ನು ಪ್ರಶ್ನಿಸಿದಾಗ, ಎಲ್ಲಾ ಕಡತಗಳು ಎಸ್‌ಐಟಿ ವಶದಲ್ಲಿವೆ ಎಂಬ ಮಾಹಿತಿ ನೀಡಿದ್ದಾರೆ. ನಂತರ ಇಡಿ ಅಧಿಕಾರಿಗಳು ಎಸ್‌ಐಟಿ ಅಧಿಕಾರಿಗಳನ್ನು ಸಂಪರ್ಕಿಸಿ ದಾಖಲೆಗಳನ್ನು ತಮ್ಮ ವಶಕ್ಕೆ ನೀಡುವಂತೆ ಕೋರಿದ್ದಾರೆ. ಇದಕ್ಕೆ, ನಾವೇ ವಿಚಾರಣೆ ನಡೆಸುತ್ತಿದ್ದು, ನಿಮಗೆ ದಾಖಲೆಗಳನ್ನು ನೀಡಲು ಸಾಧ್ಯವಿಲ್ಲ ಎಂದು ಸಂಸ್ಥೆ ಮುಖ್ಯಸ್ಥರು ಇಡಿ ಅಧಿಕಾರಿಗಳಿಗೆ ಸ್ಪಷ್ಟವಾಗಿ ತಿಳಿಸಿದ್ದಾರೆ. ಎಸ್‌ಐಟಿ ನೀಡಿದ ಮಾಹಿತಿಯನ್ನು ಇಡಿಯವರು ದೆಹಲಿಯ ಹಿರಿಯ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿ, ಸಿಐಡಿ ಆವರಣದಲ್ಲಿರುವ ತನಿಖಾ ಸಂಸ್ಥೆ ಮೇಲೆ ದಾಳಿ ನಡೆಸಿ ದಾಖಲೆಗಳ ವಶಕ್ಕೆ ಕಾರ್ಯತಂತ್ರ ರೂಪಿಸಿದರು. ಇದರ ಮಾಹಿತಿ ತಿಳಿಯುತ್ತಿದ್ದಂತೆ ಸಿಐಡಿ ಹಾಗೂ ಎಸ್‌ಐಟಿ ಅಧಿಕಾರಿಗಳು, ದಾಳಿ ತಡೆಯಲು ತಮ್ಮ ಕಚೇರಿ ಆವರಣಕ್ಕೆ ಕೆಎಸ್‌ಆರ್‌ಪಿ ಪ್ಲಟೂನ್‌ಗಳನ್ನು ಕರೆಸಿ ತಮ್ಮ ಭದ್ರತೆಗೆ ನಿಯೋಜಿಸಿಕೊಂಡರು.

ಮುಂಜಾನೆ 00–30ರವರೆಗೂ ಎಲ್ಲಾ ಅಧಿಕಾರಿಗಳು ಕಚೇರಿಯಲ್ಲೇ ಬೀಡು ಬಿಟ್ಟಿದ್ದರು. ಇಡಿ ಅಧಿಕಾರಿಗಳು ಬರುವುದಿಲ್ಲ ಎಂಬುದು ಮನದಟ್ಟಾದ ನಂತರ ಮನೆಗೆ ತೆರಳಿದರು. ಇಂದೂ ಕೂಡ ಸಿಐಡಿ ಕಚೇರಿಗೆ ಬಿಗಿ ಭದ್ರತೆ ಒದಗಿಸಲಾಗಿದೆ. ಇಡಿ ಅವರು ಯಾವುದೇ ಕ್ಷಣದಲ್ಲಿ ಎಸ್‌ಐಟಿ ತನಿಖಾ ಸಂಸ್ಥೆ ಮೇಲೆ ದಾಳಿ ನಡೆಸುವ ಸಾಧ್ಯತೆ ಇದೆ.

ಕಳೆದ 10 ದಿನಗಳಿಂದ ಹಗರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ನೀಡುವಂತೆ ಇಡಿ ಅಧಿಕಾರಿಗಳು ಮಾಡಿದ ಮನವಿಗೆ ರಾಜ್ಯ ಪೊಲೀಸರು ಸ್ಪಂದಿಸಿಲ್ಲ.

ದಾಖಲೆಗಳು ದೊರೆಯದೆ ಇಡಿ, ವಿಚಾರಣೆಯನ್ನು ಪೂರ್ಣ ಪ್ರಮಾಣದಲ್ಲಿ ನಡೆಸಲೂ ಸಾಧ್ಯವಿಲ್ಲ ಹಾಗೂ ಆರೋಪಿಗಳನ್ನು ವಶಕ್ಕೆ ತೆಗೆದುಕೊಳ್ಳಲೂ ಆಗುತ್ತಿಲ್ಲ. ಈ ಕಾರಣದಿಂದಲೇ ಇಡಿ ಅಧಿಕಾರಿಗಳು ಎಸ್‌ಐಟಿ ಕಚೇರಿ ಮೇಲೆ ದಾಳಿ ನಡೆಸಿ ದಾಖಲೆಗಳನ್ನು ವಶಪಡಿಸಿಕೊಳ್ಳಲು ಮುಂದಾಗಿದ್ದಾರೆ. ದಾಳಿ ಸಂದರ್ಭದಲ್ಲಿ ಪೊಲೀಸ್ ಅಧಿಕಾರಿಗಳು ಅಡ್ಡಿ ಉಂಟು ಮಾಡಿದರೆ, ಅವರ ವಿರುದ್ಧವೇ ಪ್ರಕರಣ ದಾಖಲಿಸುವ ಸಾಧ್ಯತೆ ಇದೆ.

ಈ ಹಿಂದೆ ಪಶ್ಚಿಮ ಬಂಗಾಳ ಹಾಗೂ ಕೇರಳದಲ್ಲೂ ಕೇಂದ್ರ ಮತ್ತು ಸ್ಥಳೀಯ ಪೊಲೀಸ್ ಅಧಿಕಾರಿಗಳ ನಡುವೆ ಇಂತಹದ್ದೇ ಘರ್ಷಣೆ ನಡೆದಿತ್ತು. ಬಿಜೆಪಿಯೇತರ ಆಡಳಿತ ಇರುವ ಕರ್ನಾಟಕದಲ್ಲೂ ಇಂತಹುದೇ ಘರ್ಷಣೆ ಮುಂದುವರೆದಿದೆ.

ರಾಜ್ಯ ಕಾಂಗ್ರೆಸ್ ಸರ್ಕಾರದಿಂದ ದಲಿತರಿಗೆ ಭಾರಿ ಅನ್ಯಾಯ

ಬೆಂಗಳೂರು, ಜು.11(ಕೆಎಂಶಿ)–



ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ದಲಿತರಿಗೆ ಮೀಸಲಿಟ್ಟ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ವರ್ಗಾವಣೆ ಮಾಡುವ ಮೂಲಕ ದಲಿತರಿಗೆ ಅನ್ಯಾಯ ಮಾಡಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಇಂದಿಲ್ಲಿ ಟೀಕಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರ ಒಂದೆಡೆ ಎಸ್‌ಟಿ ಅಭಿವೃದ್ಧಿ ನಿಗಮ, ಎಸ್‌ಸಿಪಿ/ಟಿಎಸ್‌ಪಿಗಳಲ್ಲಿ ದಲಿತರಿಗೆ ಮೀಸಲಿಟ್ಟ ಹಣವನ್ನು ಗ್ಯಾರಂಟಿಗೆ ವರ್ಗಾಯಿಸಿದೆ. ಮತ್ತೊಂದೆಡೆ ವಾಲ್ಮೀಕಿ ನಿಗಮದಲ್ಲಿ ದಲಿತರಿಗೆ ಮೀಸಲಿಟ್ಟ ಹಣವನ್ನು ಲೂಟಿ ಮಾಡಿ ಲೋಕಸಭಾ ಚುನಾವಣೆಯಲ್ಲಿ ದುರ್ಬಳಕೆ ಮಾಡಿಕೊಂಡಿದ್ದು, ಇದರ ವಿರುದ್ಧ ಬಿಜೆಪಿ ಹೋರಾಟ ಮಾಡುತ್ತಿದೆ ಎಂದರು. ದಲಿತರಿಗೆ ಮೀಸಲಿಟ್ಟ 12 ಸಾವಿರ ಕೋಟಿ ಹಣವನ್ನು ಸಿದ್ದರಾಮಯ್ಯ ಸರ್ಕಾರ ಗ್ಯಾರಂಟಿ ಯೋಜನೆಗಳಿಗೆ ವರ್ಗಾವಣೆ ಮಾಡಿಕೊಂಡಿದೆ, ನಂತರವೂ ಇಷ್ಟೇ ಮೊತ್ತ ವರ್ಗಾಯಿಸಿದ್ದಾರೆ. ಒಟ್ಟಾರೆ 24,500 ಕೋಟಿ ರೂ. ಮೊತ್ತ ಗ್ಯಾರಂಟಿಗಳಿಗೆ ಬಳಕೆ ಮಾಡಿಕೊಳ್ಳಲಾಗಿದೆ, ಈ ಕುರಿತು ದೆಹಲಿಯಿಂದ ಬಂದ ಪತ್ರಕ್ಕೆ ಸರಕಾರ ಉತ್ತರ ಕೊಡಬೇಕಿದೆ ಎಂದು ವಿವರಿಸಿದರು. ಹಣವನ್ನು ದಲಿತರಿಗೇ ಬಳಸಿದ್ದೇವೆ ದುರುಪಯೋಗ ಆಗಿಲ್ಲ ಎಂದು ಸರ್ಕಾರ ಹೇಳುತ್ತಿದೆ. ಆದರೆ, ದಲಿತರಿಗೆ ಅನ್ಯಾಯ ಆಗಿದೆ, ಇದು ಅಕ್ಷಮ್ಯ ಅಪರಾಧ. ಸದನದ ಒಳಗೆ ಮತ್ತು ಹೊರಗೆ ಇದರ ವಿರುದ್ಧ ಬಿಜೆಪಿ, ಹೋರಾಟ ಮುಂದುವರೆಸಲಿದೆ ಎಂದರು.

ಜು.21ರಂದು ಗುರುಪೂರ್ಣಿಮಾ



ಮೈಸೂರು,ಜು.11–ಶ್ರೀ ಪ್ರಸನ್ನ ಗಣಪತಿ ಮತ್ತು ಶ್ರೀ ಶಿರಡಿ ಸಾಯಿ ಶಕ್ತಿ ಸನ್ನಿಧಿ ಟ್ರಸ್ಟ್ ವತಿಯಿಂದ ಜು.21ರಂದು ಶ್ರೀ ಶಿರಡಿ ಸಾಯಿಶಕ್ತಿ ಸನ್ನಿಧಿಯಲ್ಲಿ ಗುರುಪೂರ್ಣಿಮಾ ಕಾರ್ಯಕ್ರಮ ನಡೆಯಲಿದೆ. ಅಂದು ಬೆಳಗ್ಗೆ 7 ಗಂಟೆಗೆ ಕಾಕಡಾರತಿ, 7.30ಕ್ಕೆ ಪ್ರತಿಷ್ಠಾಪನಾ ಮೂರ್ತಿಗೆ ವೇದಘೋಷಗಳೊಂದಿಗೆ ಜಲಾಭಿಷೇಕ, ಪುಷ್ಪಾರ್ಚನೆ, 8.30ಕ್ಕೆ ಅಷ್ಟಧಾತು ಮೂರ್ತಿಗೆ ಷೋಡಶೋಪಚಾರ ಪೂಜೆ, ಪ್ರಾಕಾರೋತ್ಸವ, ಕ್ಷೀರಾಭಿಷೇಕ, ಪಂಚಾಮೃತಾಭಿಷೇಕ, ಮಧ್ಯಾಹ್ನ 12ಕ್ಕೆ ನೈವೇದ್ಯಾರತಿ, ಪ್ರಸಾದ ವಿನಿಯೋಗ, ಸಂಜೆ 6ಕ್ಕೆ ಧೂಪಾರತಿ, ಪ್ರಸಾದ ವಿನಿಯೋಗ, ರಾತ್ರಿ 9ಕ್ಕೆ ಶೇಜಾರತಿ ನಡೆಯಲಿದೆ.

ಕಬ್ಬು ಬೆಳೆಗಾರರ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಜು.16ರಂದು ಮೈಸೂರಲ್ಲಿ ಧರಣಿ

ಮೈಸೂರು, ಜು.11(ಜಿಎ)–ಕಬ್ಬು ಬೆಳೆಗಾರರ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಜು.16ರಂದು ಬೆಳಗ್ಗೆ 11ಗಂಟೆಗೆ ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಎದುರು ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘ ಧರಣಿ ನಡೆಸಲಿದೆ ಎಂದು ಅಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಧರಣಿ ಆರಂಭಕ್ಕೂ ಮುನ್ನ ನಜರ್‌ಬಾದ್‌ನ ಮಹದೇಶ್ವರ ದೇವಾಲಯದ ಬಳಿಯಿಂದ ಪ್ರತಿಭಟನಾ ಮೆರವಣಿಗೆ ಆರಂಭಿಸಿ ಡಿಸಿ ಕಚೇರಿಗೆ ಹೊರಡಲಿದೆ. ಅಲ್ಲಿ ಧರಣಿ ನಡೆಸಿ, ಅಂತರ ಜಿಲ್ಲಾ ಕಬ್ಬು ಸಾಗಣೆ ನಿರ್ಬಂಧ ಹೇರಬಾರದು. ಎಫ್‌ಆರ್‌ಪಿ ದರವನ್ನು ಇಳುವರಿ ಪ್ರತಿ ಟನ್ ಕಬ್ಬಿಗೆ 10.5ರ ಬದಲು 8.5ಕ್ಕೆ ನಿಗದಿ ಮಾಡಿಸಬೇಕು. ಬಣ್ಣಾರಿ ಸಕ್ಕರೆ ಕಾರ್ಖಾನೆ ಲಾಭಾಂಶ ಮತ್ತು ಖರ್ಚಿನ ಬ್ಯಾಲೆನ್ಸ್ ಶೀಟ್ ತನಿಖೆ ನಡೆಸುವ ಮೂಲಕ ಸರ್ಕಾರ ರೈತರಿಗೆ ನ್ಯಾಯ ಕೊಡಿಸಬೇಕೆಂದು ಒತ್ತಾಯಿಸಲಾಗುವುದು ಎಂದು ಹೇಳಿದರು.

ಪ್ರಸಕ್ತ ಸಾಲಿಗೆ ರೈತರಿಗೆ 0ಯಾವುದೇ ಷರತ್ತು ವಿಧಿಸದೇ ನೀರು ಬಿಡಬೇಕು ಎಂಬ ಮೊದಲಾದ ಬೇಡಿಕೆ ಈಡೇರಿಕೆಗೆ ಆಗ್ರಹಿಸಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಅಂಕನಹಳ್ಳಿ ತಿಮ್ಮಪ್ಪ, ದೇವೇಂದ್ರಕುಮಾರ್, ಹಾಡ್ಯ ರವಿ, ಬಿದರಹಳ್ಳಿ ಮಾದಪ್ಪ, ಬನ್ನಹಳ್ಳಿಹುಂಡಿ ರಾಜೇಂದ್ರ ಉಪಸ್ಥಿತರಿದ್ದರು.

ಆರ್ಕಿಟೆಕ್ಚರ್ ಕೋರ್ಸ್‌ಗೆ ದ್ವಿತೀಯ ಪಿಯು ಅರ್ಹತಾ ಅಂಕ ಶೇ.45ಕ್ಕೆ ಇಳಿಕೆ

ಜು.13ರೊಳಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಕೆಗೆ ಅವಕಾಶ

ಬೆಂಗಳೂರು, ಜು. 11(ಕೆಎಂಶಿ)– ಆರ್ಕಿಟೆಕ್ಚರ್ ಕೋರ್ಸ್‌ಗೆ ದ್ವಿತೀಯ ಪಿಯುಸಿ ಅರ್ಹತಾ ಅಂಕಗಳನ್ನು ಶೇ.50ರಿಂದ ಶೇ.45ಕ್ಕೆ ಇಳಿಕೆ ಮಾಡಿರುವ ಹಿನ್ನೆಲೆಯಲ್ಲಿ ಕೋರ್ಸ್‌ಗೆ ಸೇರಬಯಸುವ ಅಭ್ಯರ್ಥಿಗಳು ಈ ತಿಂಗಳ 13ರೊಳಗೆ ಯುಜಿಸಿಇಟಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅವಕಾಶ ಕಲ್ಪಿಸಿದೆ. ಕೌನ್ಸಿಲ್ ಆಫ್ ಆರ್ಕಿಟೆಕ್ಚರ್ ಕೋರ್ಸ್‌ಗೆ ಅರ್ಹತಾ ಅಂಕಗಳಲ್ಲಿ ಕಡಿತ ಮಾಡಿದ್ದು, ದ್ವಿತೀಯ ಪಿಯುಸಿಯಲ್ಲಿ ಶೇ.45ರಷ್ಟು ಅಂಕ ಪಡೆದವರು ಅರ್ಜಿ ಸಲ್ಲಿಸಲು ಹೊಸದಾಗಿ ಅವಕಾಶ ಕಲ್ಪಿಸಲಾಗಿದೆ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಪರಿಶಿಷ್ಟ ಸಮುದಾಯಕ್ಕೆ ಮೀಸಲಿಟ್ಟ ಹಣ 'ಗ್ಯಾರಂಟಿ'ಗೆ ಬಳಕೆ; ಡಿಸಿಎಂ ಡಿಕೆಶಿ ಸಮರ್ಥನೆ

ರಾಷ್ಟ್ರೀಯ ಎಸ್‌ಸಿ ಆಯೋಗದ ನೋಟೀಸ್‌ಗೆ ಸಿಡಿಮಿಡಿ

ಬೆಂಗಳೂರು, ಜು.11(ಕೆಎಂಶಿ)– ಎಸ್‌ಸಿಪಿ/ಟಿಎಸ್‌ಪಿ ಅನುದಾನ ಹಣ ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಳ್ಳುತ್ತಿರುವುದರಲ್ಲಿ ಯಾವುದೇ ತಪ್ಪಿಲ್ಲ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ಸಮರ್ಥಿಸಿಕೊಂಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಡೀ ದೇಶದಲ್ಲಿ ಆಂಧ್ರಪ್ರದೇಶದ ನಂತರ ಕರ್ನಾಟಕದಲ್ಲಿ ಪರಿಶಿಷ್ಟರ ಕಲ್ಯಾಣಕ್ಕಾಗಿ ಪ್ರತ್ಯೇಕ ಅನುದಾನ ನೀಡಿ ಬಳಸಲು ಕಾಯ್ದೆ ತಂದಿದ್ದೇವೆ, ರಾಷ್ಟ್ರೀಯ ಆಯೋಗ ನೋಟೀಸ್ ಜಾರಿ ಮಾಡುವುದಿದ್ದರೆ ಕೇಂದ್ರ ಸರ್ಕಾರಕ್ಕೆ ನೀಡಬೇಕು. ಅನುದಾನವನ್ನು ನಮ್ಮ ಸರ್ಕಾರ ಪರಿಶಿಷ್ಟ ಜಾತಿಗೆ ವಿನಿಯೋಗಿಸುತ್ತಿದೆ. ಇದಕ್ಕೆ ನೋಟೀಸ್ ನೀಡಿರುವ ರಾಷ್ಟ್ರೀಯ ಆಯೋಗಕ್ಕೆ ನಾಚಿಕೆಯಾಗಬೇಕು ಎಂದರು.

ಮಹರ್ಷಿ ವಾಲ್ಮೀಕಿ ನಿಗಮದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ವಂಚನೆ ನಡೆದಿರುವುದು ಸತ್ಯ. ಇದರ ಸತ್ಯಾಸತ್ಯತೆ ನಮಗೆ ಗೊತ್ತಿದೆ. ರಾಜ್ಯ ಸರ್ಕಾರ ವಿಶೇಷ ತನಿಖಾ ತಂಡ ರಚಿಸಿ ತನಿಖೆ ನಡೆಸುತ್ತಿದೆ. ಅಕ್ರಮವಾಗಿ ವರ್ಗಾವಣೆಯಾದ ಹಣವನ್ನು ಈಗಾಗಲೇ ವಶಪಡಿಸಿಕೊಳ್ಳಲಾಗುತ್ತಿದೆ.

ಯಾವುದೇ ದೂರು ಇಲ್ಲದೆ ಇಡಿ ದಾಳಿ ನಡೆಸುವ ಅಗತ್ಯವಿರಲಿಲ್ಲ. ಅವರು ಯಾವ ರೀತಿ ತನಿಖೆ ಮಾಡುತ್ತಿದ್ದಾರೆ, ಯಾವ ಪ್ರಕ್ರಿಯೆ ಮೇಲೆ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. ಎಸ್‌ಐಟಿ ತನಿಖೆ ಮುಕ್ತವಾಗಿ ನಡೆಯುತ್ತಿದ್ದು, ತನಿಖೆಗೆ ಅಡಚಣೆಯಾಗಬಾರದು ಎಂಬ ಉದ್ದೇಶಕ್ಕೆ ಮಂತ್ರಿಗಳು ಸ್ವಯಂ ಪ್ರೇರಿತರಾಗಿ ರಾಜೀನಾಮೆ ನೀಡಿದ್ದಾರೆ. ನಾವು ಸಹಾ ಕ್ರಾಸ್ ಚೆಕ್ ಮಾಡಿದ್ದು, ಸಚಿವರು ಯಾವುದೇ ಸಹಿ ಮಾಡಿಲ್ಲ, ಅವರ ಹಸ್ತಕ್ಷೇಪವಿಲ್ಲ. ಕಾನೂನು ಪ್ರಕಾರ ತನಿಖೆ ನಡೆಯುತ್ತಿದ್ದು, ಈ ಮಧ್ಯೆ ಇಡಿ ದಾಳಿ ಮಾಡಿದೆ, ಮುಂದೆ ಏನು ಮಾಡುತ್ತಾರೆ ನೋಡೋಣ, ಅವರ ತನಿಖೆ ಮುಗಿಯಲಿ ನಂತರ ಮಾತನಾಡುತ್ತೇನೆ ಎಂದರು.



ನಿರ್ದಿಷ್ಟ ಮೊತ್ತಕ್ಕಿಂತ ಹೆಚ್ಚಿನ ಪ್ರಮಾಣದ ಅವ್ಯವಹಾರವಾದರೆ ಸಿಬಿಐ ತನಿಖೆ ಮಾಡುವ ಅಧಿಕಾರವಿದೆ. ಎಲ್ಲಾ ತನಿಖೆಗಳ ಮುಕ್ತಾಯದ ನಂತರ ತನಿಖೆಗಳು ಸರಿಯಾಗಿ ನಡೆದಿವೆಯೇ ಎಂಬ ಬಗ್ಗೆ ಇಡಿ ಪರಾಮರ್ಶೆ ಮಾಡಬಹುದಿತ್ತು ಎಂದರು. ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಎಲ್ಲಿ ಎಡವಿದೆ ಎಂಬ ಕುರಿತು ಪರಾಮರ್ಶೆ ನಡೆಸಿ, ಆಗಿರುವ ತಪ್ಪುಗಳನ್ನು ಸರಿಪಡಿಸಿಕೊಂಡು ಮುಂದಿನ ದಿನಗಳಲ್ಲಿ ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿಯನ್ನು ಎದುರಿಸಲು ಸಿದ್ಧತೆ ಮಾಡಿಕೊಳ್ಳಲಾಗುವುದು.

ಲೋಕಸಭಾ ಚುನಾವಣೆಯಲ್ಲಿ 9 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿದೆ, 14 ರಿಂದ 15 ಕ್ಷೇತ್ರಗಳಲ್ಲಿ ಗೆಲ್ಲುವ ನಿರೀಕ್ಷೆ ಇತ್ತು, ಅದು ಸಾಧ್ಯವಾಗಲಿಲ್ಲ, ಎಲ್ಲಿ ಎಡವಿದ್ದೇವೆ ಎಂದು ಎಐಸಿಸಿಯ ಸಮಿತಿ ಸಮ್ಮುಖದಲ್ಲಿ ಪರಾಮರ್ಶೆ ನಡೆಯಲಿದೆ.

ಕರ್ನಾಟಕವಲ್ಲದೇ ದೇಶದೆಲ್ಲೆಡೆ ಪಕ್ಷದ ಫಲಿತಾಂಶ ಪರಾಮರ್ಶೆ ನಡೆಯಲಿದೆ. ಕೆಪಿಸಿಸಿ ಅಧ್ಯಕ್ಷನಾಗಿ ನಾನೂ ನಾಲ್ಕು ವಿಭಾಗಗಳ ವರದಿ ಕಳುಹಿಸಿಕೊಡಲಿದ್ದೇನೆ. ನಾನು ಹಾಗೂ ಮುಖ್ಯಮಂತ್ರಿ ಸೇರಿ ಪಕ್ಷದ ನಾಯಕರ ಜತೆ ಪರಾಮರ್ಶೆ ಮಾಡುತ್ತೇವೆ.

ಲೋಕಸಭೆ ಚುನಾವಣೆಯಲ್ಲಿ ಈ ಬಾರಿ ಉತ್ತಮ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದೆವು. ಆದರೆ, ಮತದಾರರನ್ನು ಯಾವ ವಿಚಾರ ಪರಿವರ್ತನೆ ಮಾಡಿದೆ ಎಂಬುದನ್ನು ಪತ್ತೆ ಹಚ್ಚಬೇಕು. ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿ ಪರಿಣಾಮ ಕಾರಿಯಾಗಲಿದೆ ಎಂದು ನಾವು ಮೊದಲೇ ಅಂದಾಜಿಸಿದ್ದೆವು.

ಮುಂದಿನ ದಿನಗಳಲ್ಲೂ ಅವರು ಒಟ್ಟಾಗಿರುತ್ತಾರೆ ಎಂದು ನಮಗೆ ಗೊತ್ತಿದೆ. ಅವರು ಹಾಗೆಯೇ ಇರಲಿ, ನಾವು ಏನು ಸಿದ್ಧತೆ ಮಾಡಿಕೊಳ್ಳಬೇಕೋ ಮಾಡುತ್ತೇವೆ ಎಂದರು.

ಜನರ ಹಾರೈಕೆಯೇ ನನಗೆ ಶ್ರೀರಕ್ಷೆ: ಎಂಎಲ್‌ಸಿ ಸಿ.ಎನ್.ಮಂಜೇಗೌಡ

ಮೈಸೂರು, ಜು. 11– ನಾನು ಕಳೆದ 30 ವರ್ಷಗಳಿಂದ ಸಾರ್ವಜನಿಕ ಜೀವನದಲ್ಲಿ ತೊಡಗಿಸಿಕೊಂಡು ಬಂದಿದ್ದು, ಜನರ ಹಾರೈಕೆ, ಆಶೀರ್ವಾದವೇ ನನಗೆ ಶ್ರೀರಕ್ಷೆ ಆಗಿರುವುದರಿಂದ ಇಂದು ಎಂಎಲ್‌ಸಿ ಆಗಿದ್ದೇನೆ ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ತಿಳಿಸಿದರು.

ಶ್ರೀರಾಂಪುರದಲ್ಲಿರುವ ಅವರ ನಿವಾಸದಲ್ಲಿ 60ನೇ ಹುಟ್ಟುಹಬ್ಬದ ಅಂಗವಾಗಿ ಅಭಿಮಾನಿಗಳೊಂದಿಗೆ ಕೇಕ್ ಕತ್ತರಿಸಿ, ಕೆ.ಆರ್. ಆಸ್ಪತ್ರೆ ಆವರಣದಲ್ಲಿ ಸಾರ್ವಜನಿಕರಿಗೆ ಊಟ ವಿತರಿಸುವುದರೊಂದಿಗೆ ಹುಟ್ಟುಹಬ್ಬ ಆಚರಿಸಿಕೊಂಡು ಮಾತನಾಡಿದ ಅವರು, ನನಗೆ ಮೈಸೂರು, ಚಾಮರಾಜನಗರ ಎರಡು ಜಿಲ್ಲೆಗಳಿಂದ ಸಾವಿರಾರು ಅಭಿಮಾನಿಗಳು ಶುಭ ಹಾರೈಸಿದ್ದಾರೆ. ತಾಯಿ ಚಾಮುಂಡೇಶ್ವರಿಯ ಆಶೀರ್ವಾದ ಹಾಗೂ ನನ್ನ ತಾಯಿ ನಾಗಮ್ಮರವರ ಆಶೀರ್ವಾದದಿಂದ ಮತ್ತು ಅಭಿಮಾನಿಗಳು, ಸ್ನೇಹಿತರು, ಮತದಾರರು, ಬಂಧುಗಳ ಹಾರೈಕೆಯಿಂದ ಮಾಜಿ ಸೈನಿಕನಾಗಿದ್ದ ನನ್ನನ್ನು ಜನ ವಿಧಾನಪರಿಷತ್ ಸದಸ್ಯನನ್ನಾಗಿ ಮಾಡಿದ್ದಾರೆ. ಆದ್ದರಿಂದ ಅಭಿಮಾನಿಗಳು ಬಂದು ಆಶೀರ್ವದಿಸಿದ್ದಾರೆ. ಕೇಂದ್ರ ಸಚಿವರಾದ ಹೆಚ್.ಡಿ.ಕುಮಾರಸ್ವಾಮಿ, ಸಚಿವರಾದ ಕೆ.ವೆಂಕಟೇಶ್, ಮಾಜಿ ಸಚಿವರಾದ ಸಾ.ರಾ.ಮಹೇಶ್, ಶಾಸಕರಾದ ಜಿ.ಟಿ.ದೇವೇಗೌಡ, ಮುಡಾ ಅಧ್ಯಕ್ಷರಾದ ಕೆ.ಮರೀಗೌಡ, ಸಿ.ಜೆ.ದ್ವಾರಕೀಶ್ ಇನ್ನಿತರರು ಅಭಿನಂದನೆ ಸಲ್ಲಿಸಿದ್ದಾರೆ ಎಂದರು.

ಈ ವೇಳೆ ಭರತ್ ಮಂಜೇಗೌಡ, ಶ್ರೀರಾಂಪುರ ಗ್ರಾಪಂ ಮಾಜಿ ಅಧ್ಯಕ್ಷ ರಮೇಶ್, ಟ್ಯೂಬ್ ಮಹದೇವ್, ದಿನೇಶ್‌ಗೌಡ, ಸುರೇಶ್ ಗೋಲ್ಡ್, ಮಾಜಿ ಸೈನಿಕರ ಸಂಘದ ಅಧ್ಯಕ್ಷ ದಿವಾಕರ್ ಮತ್ತಿತರರು ಹಾಜರಿದ್ದರು.



ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಅವರಿಗೆ ಅಭಿಮಾನಿಗಳು ಹುಟ್ಟುಹಬ್ಬದ ಶುಭಾಶಯ ಕೋರಿದರು.

ಮೈಸೂರು ಮಿತ್ರ

ಕೆ.ಆರ್.ಪೇಟೆ ಶಿಕ್ಷಣ ಇಲಾಖಾ ನೌಕರರ ಪತ್ತಿನ ಸಹಕಾರ ಸಂಘಕ್ಕೆ ನಿರ್ದೇಶಕರ ಆಯ್ಕೆ



ಶಿಕ್ಷಣ ಇಲಾಖೆ ನೌಕರರ ಪತ್ತಿನ ಸಹಕಾರ ಸಂಘಕ್ಕೆ ಆಯ್ಕೆಯಾದ ಪದಾಧಿಕಾರಿಗಳು.

ಕೆ.ಆರ್.ಪೇಟೆ, ಜು.11– ತಾಲೂಕು ಶಿಕ್ಷಣ ಇಲಾಖಾ ನೌಕರರ ಪತ್ತಿನ ಸಹಕಾರ ಸಂಘಕ್ಕೆ ನೂತನ ನಿರ್ದೇಶಕರಾಗಿ ಪದ್ಮೇಶ್ ತಂಡದ ಎಲ್ಲಾ 13 ಮಂದಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನೂತನ ನಿರ್ದೇಶಕರಾದ ಅಗ್ರಹಾರ ಬಾಚಹಳ್ಳಿ ಎ.ಹೆಚ್.ಯೋಗೇಶ್, ಹಳೆಯೂರು ಯೋಗೇಶ್, ಆಲಂಬಾಡಿಕಾವಲು ಕಿದೇವರಾಜು, ದೊರೆಸ್ವಾಮಿ, ಆರ್.ಕೆ ರಮೇಶ್, ಶೀಳನೆರೆ ಎಸ್.ಎಸ್.ಶಿವಕುಮಾರ್, ಸಾಸಲು ಶಿವಕುಮಾರ್, ಮಂಜೇಗೌಡ, ಕೋದಂಡರಾಮು, ಸುಬ್ರಹ್ಮಣ್ಯ, ನಾಗಕುಮಾರ್, ವನಜಾಕ್ಷಿ, ರೇವಮ್ಮ, ಭಾರತೀ ಅವರನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎಸ್. ಸೀತಾರಾಂ ಅವರು ಅಭಿನಂದಿಸಿದರು. ಈ ಸಂದರ್ಭದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಪೂರ್ಣಚಂದ್ರ ತೇಜಸ್ವಿ ತಾಲೂಕು ಪ್ರಾಥಮಿಕ ಶಾಲಾ ಶಿಕ್ಷರ ಸಂಘದ ಅಧ್ಯಕ್ಷ ಪದ್ಮೇಶ್, ಪ್ರಧಾನ ಕಾರ್ಯದರ್ಶಿ ಲಕ್ಷ್ಮಣಗೌಡ, ಶಿಕ್ಷಕರ ಸಂಘದ ಸಂಘಟನಾ ಕಾರ್ಯದರ್ಶಿ ಜಿ.ಎಸ್.ಮಂಜು, ಪತ್ತಿನ ಸಹಕಾರ ಸಂಘದ ಕಿರಣ್ ಕುಮಾರ್, ಇತಿಹಾಸ ಸಂಶೋಧಕ ರಂಗಸ್ವಾಮಿ, ಶಿಕ್ಷಣ ಸಂಯೋಜಕರಾದ ಸಿ.ವೀರಭದ್ರಯ್ಯ, ಕೃಷ್ಣನಾಯಕ್, ಜ್ಞಾನೇಶ್ ಇತರರು ಇದ್ದರು.

ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎಸ್.ಸೀತಾರಾಂ ಅವರು ನೂತನ ನಿರ್ದೇಶಕರನ್ನು ಅಭಿನಂದಿಸಿ ಮಾತನಾಡಿ ಸಹಕಾರ ತತ್ವದಂತೆ ಈ ಬಾರಿ ಚುನಾವಣೆ ನಡೆಸದೇ ಅವಿರೋಧವಾಗಿ ಆಯ್ಕೆ ಮಾಡಿದ ಎಲ್ಲಾ ಶೇರುದಾರರು ಹಾಗೂ ನೌಕರರನ್ನು ಇಲಾಖೆಯ ಪರವಾಗಿ ಶ್ಲಾಘಿಸಿದರು.

ಕಾರು–ಕ್ಯಾಂಟರ್ ಡಿಕ್ಕಿ: ಮೂವರು ಸಾವು

ನಾಗಮಂಗಲ ಬಳಿ ದುರಂತ, ಗಾಯಾಳು ಆಸ್ಪತ್ರೆಗೆ ದಾಖಲು

ನಾಗಮಂಗಲ,ಜು.11– ಕಾರು ಮತ್ತು ಕ್ಯಾಂಟರ್ ನಡುವೆ ಸಂಭವಿಸಿದ ಡಿಕ್ಕಿಯಿಂದ ಮೂವರು ಸ್ಥಳದಲ್ಲಿಯೇ ಸಾವನ್ನಪ್ಪಿ, ವ್ಯಕ್ತಿಯೊಬ್ಬರು ಗಾಯಗೊಂಡಿರುವ ದುರ್ಘಟನೆ ತಾಲೂಕಿನ ಶ್ರೀರಾಮನಹಳ್ಳಿ ಬಳಿ ಇಂದು ಮುಂಜಾನೆ ಸಂಭವಿಸಿದೆ.

ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆಯ ನಿವಾಸಿಗಳಾದ ಯುವರಾಜ್(45), ತಿಪ್ಪೆಸ್ವಾಮಿ (45) ಮತ್ತು ಸಿದ್ದೇಶ್(34) ಎಂಬುವರು ಸಾವನ್ನಪ್ಪಿದ್ದು, ಗಾಯಗೊಂಡಿರುವ ಸುಬೇರ್ ಅವರನ್ನು ಆಸ್ಪತ್ರೆಗೆ ಸೇರಿಸಲಾಗಿದೆ.

ಬುಧವಾರ ರಾತ್ರಿ 12.30ರ ಸಮಯದಲ್ಲಿ ಮೈಸೂರಿಗೆ ಹೊರಟಿದ್ದ ಮಾರುತಿ ಸುಜುಕಿ ಕಾರಿಗೆ ಬೀದರ್–ಶ್ರೀರಂಗಪಟ್ಟಣ ರಾಜ್ಯ ಹೆದ್ದಾರಿಯಲ್ಲಿ ಬರುವ ಶ್ರೀರಾಮನಹಳ್ಳಿ ಬಳಿ ಎದುರಿನಿಂದ ಬರುತ್ತಿದ್ದ ಟ್ಯಾಂಕರ್ ಡಿಕ್ಕಿ ಹೊಡೆದ ಪರಿಣಾಮ ಕಾರಿನಲ್ಲಿದ್ದ ಯುವರಾಜ್, ತಿಪ್ಪೇಸ್ವಾಮಿ ಮತ್ತು ಸಿದ್ದೇಶ್ ಅವರುಗಳು ಸ್ಥಳದಲ್ಲಿಯೇ ಸಾವಿಗೀಡಾಗಿದ್ದಾರೆ.



ಕ್ಯಾಂಟರ್ ಡಿಕ್ಕಿಯಿಂದ ಜಖಂಗೊಂಡಿರುವ ಮಾರುತಿ ಸುಜುಕಿ ಕಾರು.

ತೀವ್ರವಾಗಿ ಗಾಯಗೊಂಡಿದ್ದ ಸುಬೇರ್ ಅವರನ್ನು ಸ್ಥಳೀಯ ಆದಿಚುಂಚನಗಿರಿ ಆಸ್ಪತ್ರೆಗೆ ಸೇರಿಸಲಾಗಿದೆ. ಮೃತರು ಚಿತ್ರದುರ್ಗದ ಸಹಕಾರ ಸಂಘದ ಪದಾಧಿಕಾರಿಗಳು ಎಂದು ತಿಳಿದುಬಂದಿದೆ.

ವಿಷಯ ತಿಳಿಯುತ್ತಿದ್ದಂತೆ ನಾಗಮಂಗಲ ಟೌನ್ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಮೃತದೇಹಗಳನ್ನು ನಾಗಮಂಗಲ ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ಸಾಗಿಸಿದರಲ್ಲದೆ, ಗಾಯಗೊಂಡವರನ್ನು ಆದಿಚುಂಚನಗಿರಿ ಆಸ್ಪತ್ರೆಗೆ ದಾಖಲಿಸಿದರು. ಜಖಂಗೊಂಡಿರುವ ಎರಡು ವಾಹನಗಳನ್ನು ವಶಪಡಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ. ಇದರಿಂದ ಕೆಲಕಾಲ ಸಂಚಾರ ಅಸ್ತವ್ಯಸ್ತಗೊಂಡಿತ್ತು.

ಮಂಡ್ಯ ಬಳಿ ಮಗು ನಾಪತ್ತೆ: ನಾಲೆಯಲ್ಲಿ ಕೊಚ್ಚಿ ಹೋಗಿರುವ ಶಂಕೆ

ಮಂಡ್ಯ: ಅಂಗನವಾಡಿಯಿಂದ ಬಂದು ಮನೆ ಬಳಿ ಆಟವಾಡುತ್ತಿದ್ದ ಮಗು ನಾಪತ್ತೆಯಾಗಿದ್ದು, ನಿನ್ನೆಯಷ್ಟೇ ನಾಲೆಗಳಿಗೆ ಬಿಡಲಾಗಿರುವ ನೀರಿನಲ್ಲಿ ಕೊಚ್ಚಿಕೊಂಡು ಹೋಗಿರುವ ಶಂಕೆ ವ್ಯಕ್ತವಾಗಿದೆ.



ಮಂಡ್ಯ ತಾಲೂಕಿನ ಹೊನಗಾನಹಳ್ಳಿ ಮಠ ಗ್ರಾಮದಲ್ಲಿ ಘಟನೆ ನಡೆದಿದ್ದು, ಗ್ರಾಮದ ರಾಜು ಹಾಗೂ ಕಸ್ತೂರಿ ದಂಪತಿ ಪುತ್ರ ನಾಲ್ಕು ವರ್ಷದ ಸಜನ್ ನಾಪತ್ತೆಯಾಗಿರುವ ಮಗು. ಗುರುವಾರ ಮಧ್ಯಾಹ್ನ 2.30ರ ಸಮಯದಲ್ಲಿ ಅಂಗನವಾಡಿಯಿಂದ ಬಂದ ಮಗು ಮನೆ ಬಳಿ ಆಟವಾಡುತ್ತಿದ್ದು, ಇದ್ದಕ್ಕಿದ್ದಂತೆ ನಾಪತ್ತೆಯಾಗಿದ್ದಾನೆ.

ಸ್ವಲ್ಪ ಸಮಯದ ನಂತರ ಮಗುವನ್ನು ಪೋಷಕರು ಹುಡುಕಲು ಆರಂಭಿಸಿದ್ದಾರೆ. ಇವರ ಜೊತೆ ಅಕ್ಕ-ಪಕ್ಕದ ಮನೆಯವರು ಸಹ ಮಗುವನ್ನು ಹುಡುಕಾಟ ನಡೆಸಿದ್ದಾರೆ.

ಈ ವೇಳೆ ಮಗು ಎಲ್ಲೂ ಕಾಣಿಸದೆ ಮನೆ ಪಕ್ಕದಲ್ಲೇ ಹರಿಯುತ್ತಿರುವ ವಿಸಿ ನಾಲೆ ಬಳಿ ಮಗು ಚಪ್ಪಲಿ ಪತ್ತೆಯಾಗಿದ್ದು, ಆಟವಾಡುವ ವೇಳೆ ನಾಲೆಗೆ ಬಿದ್ದು ಕೊಚ್ಚಿ ಹೋಗಿರುವ ಶಂಕೆ ವ್ಯಕ್ತವಾಗಿದೆ. ಸ್ಥಳೀಯರು ಮತ್ತು ಕುಟುಂಬಸ್ಥರಿಂದ ಮಗುವಿಗಾಗಿ ರಾತ್ರಿವರೆಗೂ ಹುಡುಕಾಟ ನಡೆಸಿದ್ದಾರೆ. ಕತ್ತಲಾದ್ದರಿಂದ ನಾಳೆ(ಶುಕ್ರವಾರ) ಮತ್ತೆ ಮಗುವಿಗಾಗಿ ಶೋಧ ಕಾರ್ಯ ನಡೆಯಲಿದೆ.

ಸ್ಪಂದಿಸದ ಅಧಿಕಾರಿಗಳು: ನಾಲೆಗೆ ಬಿದ್ದು ಮಗು ಕೊಚ್ಚಿ ಹೋಗಿರುವ ಶಂಕೆ ವ್ಯಕ್ತವಾದ ಹಿನ್ನೆಲೆಯಲ್ಲಿ ಮಗು ಪತ್ತೆಗಾಗಿ ನೀರು ನಿಲ್ಲಿಸಲು ಅಧಿಕಾರಿಗಳ ಬಳಿ ಮನವಿ ಮಾಡಿದ್ದರೂ ಅಧಿಕಾರಿಗಳು ನಿರ್ಲಕ್ಷ್ಯ ತೋರಿದ್ದಾರೆ ಎಂದು ಗ್ರಾಮಸ್ಥರು ದೂರಿದ್ದಾರೆ. ಕೆಆರ್‌ಎಸ್ ಜಲಾಶಯದಿಂದ ನಿನ್ನೆಯಷ್ಟೇ ವಿಸಿ ನಾಲೆಗೆ ನೀರು ಹರಿಸಲಾಗಿರುವುದರಿಂದ ನೀರು ನಿಲ್ಲಿಸಲು ಅಧಿಕಾರಿಗಳು ನಿರಾಕರಿಸಿದ್ದಾರೆ ಎಂದು ತಿಳಿದು ಬಂದಿದೆ.

ಮಂಡ್ಯ ಜಿಲ್ಲೆಯಲ್ಲಿ ಹೆಚ್ಚುತ್ತಿರುವ ಡೆಂಗ್ಯೂ ಪ್ರಕರಣ

ಮಂಡ್ಯ,ಜು.11– ಮಂಡ್ಯ ಜಿಲ್ಲೆಯಲ್ಲಿ ದಿನದಿಂದ ದಿನಕ್ಕೆ ಡೆಂಗ್ಯೂ ಪ್ರಕರಣಗಳು ಹೆಚ್ಚುತ್ತಿವೆ. ಸಾರ್ವಜನಿಕರು ಸೊಳ್ಳೆಗಳ ನಿಯಂತ್ರಣದಲ್ಲಿ ಮುತುವರ್ಜಿ ವಹಿಸದಿದ್ದರೆ ಸೊಳ್ಳೆಗಳ ನಿಯಂತ್ರಣ ಅಸಾಧ್ಯ. ಸಾರ್ವಜನಿಕರು ಮುನ್ನೆಚ್ಚರಿಕಾ ಕ್ರಮಗಳನ್ನು ಅನುಸರಿಸಿ ಎಂದು ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ.ಕಾಂತರಾಜು ತಿಳಿಸಿದರು.

ನಗರದ ಕಾರ್ಯನಿರತ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಗುರುವಾರ ಜಿಲ್ಲಾಡಳಿತ ಮತ್ತು ಜಿಪಂ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ ವತಿಯಿಂದ ವಿಶ್ವ ಮಲೇರಿಯಾ ದಿನಾಚರಣೆ ಮತ್ತು ಡೆಂಗ್ಯೂ ವಿರೋಧ ಮಾಸಾಚರಣೆ ಪ್ರಯುಕ್ತ ಮಲೇರಿಯಾ ಮತ್ತು ಡೆಂಗ್ಯೂ ನಿಯಂತ್ರಣ ಕುರಿತು ಮಾಧ್ಯಮ ಪ್ರತಿನಿಧಿಗಳಿಗೆ ಹಮ್ಮಿ ಕೊಳ್ಳಲಾಗಿದ್ದ ಅಡ್ವೋಕೆಸಿ ಕಾರ್ಯಾಗಾರದಲ್ಲಿ ಮಾತನಾಡಿದರು.

ಜಿಲ್ಲೆಯಲ್ಲಿ ಒಟ್ಟು 297 ಡೆಂಗ್ಯೂ ಪ್ರಕರಣಗಳು ದಾಖಲು: 2024 ನೇ ಸಾಲಿನಲ್ಲಿ ಜನವರಿ ಮಾಹೆಯಿಂದ ಜುಲೈ 10 ರವರೆಗೆ ಜಿಲ್ಲೆಯಲ್ಲಿ ಒಟ್ಟು 297 ಡೆಂಗ್ಯೂ ಪ್ರಕರಣಗಳು ದಾಖಲಾಗಿದ್ದು, ಮಂಡ್ಯ ತಾಲೂಕಿನ ನಗರ ಪ್ರದೇಶದಲ್ಲಿ–37, ಮಂಡ್ಯ ಗ್ರಾಮಾಂತರ–119, ಮದ್ದೂರು–40 , ಮಳವಳ್ಳಿ–18, ಪಾಂಡವಪುರ–16, ಶ್ರೀರಂಗಪಟ್ಟಣ–34, ಕೆ.ಆರ್.ಪೇಟೆ–17, ನಾಗಮಂಗಲ ತಾಲೂಕಿನಲ್ಲಿ 16 ಪ್ರಕರಣಗಳು ದಾಖಲಾಗಿವೆ.

ಮುನ್ನೆಚ್ಚರಿಕೆ ವಹಿಸಲು ಆರೋಗ್ಯ ಇಲಾಖೆ ಮನವಿ



ಅಡ್ವೋಕಸಿ ಕಾರ್ಯಾಗಾರದಲ್ಲಿ ಡೆಂಗ್ಯೂ ನಿಯಂತ್ರಣದ ಬಗ್ಗೆ ಭಿತ್ತಿಪತ್ರಗಳನ್ನು ಬಿಡುಗಡೆ ಮಾಡುತ್ತಿರುವ ವೈದ್ಯರು ಮತ್ತು ತಜ್ಞರು.

ತೀವ್ರ ಜ್ವರ, ವಿಪರೀತ ತಲೆನೋವು, ಕಣ್ಣುಗುಡ್ಡೆ ಹಿಂಭಾಗದಲ್ಲಿ ನೋವು, ಕೀಲುಗಳ ನೋವು ಕಾಣಿಸಿಕೊಳ್ಳುವುದು, ತೀವ್ರ ಸ್ಥಿತಿಯಲ್ಲಿ ಬಾಯಿ, ಮೂಗು ಮತ್ತು ವಸಡುಗಳಿಂದ ರಕ್ತಸ್ರಾವ ಹಾಗೂ ಚರ್ಮದ ಮೇಲೆ ಅಲ್ಲಲ್ಲಿ ರಕ್ತಸ್ರಾವದ ಗುರುತುಗಳು ಕಾಣಿಸಿಕೊಳ್ಳುವುದು ಡೆಂಗ್ಯೂ ಜ್ವರದ ಮುಖ್ಯ ಲಕ್ಷಣವಾಗಿವೆ. ಡೆಂಗ್ಯೂ ಆಘಾತಕಾರಿ ಜ್ವರವಾಗಿದ್ದು, ಇದ್ದಕ್ಕಿದ್ದಂತೆ ಸಾಧಾರಣದಿಂದ ತೀವ್ರ ಜ್ವರ ಕಣ್ಣುಗಳು ಸ್ನಾಯುನೋವು, ಕೀಲುಗಳಲ್ಲಿ ಅಸಾಧ್ಯ ನೋವಿನಿಂದ ಕೈಕಾಲುಗಳನ್ನು ಆಡಿಸಲು ಕಷ್ಟವಾಗುವುದು ಹಾಗೂ ಕೆಲವರಲ್ಲಿ ಕೀಲುಗಳು ಬಾವು ಕಾಣಿಸಿಕೊಳ್ಳುತ್ತದೆ ಆದರೆ ಇದು ಮಾರಣಾಂತಿಕವಲ್ಲ. ಡೆಂಗ್ಯೂಜ್ವರ ರೋಗಿಗಳಿಗೆ ಯಾವುದೇ ನಿರ್ದಿಷ್ಟ ಔಷಧಿ ಅಥವಾ ಲಸಿಕೆ ಇರುವುದಿಲ್ಲ, ರೋಗದ ಲಕ್ಷಣಗಳಿಗನುಸಾರವಾಗಿ ವೈದ್ಯರಿಂದ ಸೂಕ್ತ ಚಿಕಿತ್ಸೆ ಪಡೆಯಬಹುದು. ಉಚಿತ ಚಿಕಿತ್ಸೆಗಾಗಿ ಜಿಲ್ಲೆಯ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಸರ್ಕಾರಿ ಆಸ್ಪತ್ರೆಯನ್ನು ಸಂಪರ್ಕಿಸಬಹುದು–ಡಾ.ಕಾಂತರಾಜು

ಮಂಡ್ಯ ತಾಲೂಕಿನಲ್ಲಿಯೇ ಅತೀ ಹೆಚ್ಚು ಡೆಂಗ್ಯೂ ಹಾಗೂ ಚಿಕನ್ ಗುನ್ಯಾ ಪ್ರಕರಣಗಳು ವರದಿಯಾಗಿವೆ ಎಂದರು. ಎಲ್ಲೆಲ್ಲಿ ಡೆಂಗ್ಯೂ ಮತ್ತು ಮಲೇರಿಯಾ ಪ್ರಕರಣಗಳು ಕಂಡು ಬರುತ್ತದೆಯೋ ಆ ಪ್ರದೇಶಗಳಲ್ಲಿ ಆಶಾ ಕಾರ್ಯಕರ್ತೆಯರ ಮೂಲಕ ತಿಳುವಳಿಕೆ ಹಾಗೂ ಸ್ವಚ್ಛತಾ ಕ್ರಮವನ್ನು ತಿಳಿಸಲಾಗುತ್ತಿದೆ. ಪ್ರತಿ ಮನೆ ಮನೆಗೆ ಭೇಟಿ ನೀಡಿ ಡೆಂಗ್ಯೂ ಹಾಗೂ ಮಲೇರಿಯಾ ರೋಗದ ನಿಯಂತ್ರಣದ ಬಗ್ಗೆ ಭಿತ್ತಿಪತ್ರಗಳನ್ನು ನೀಡುವ ಮೂಲಕ ಜನಜಾಗೃತಿ ಮೂಡಿಸುತ್ತಿದ್ದೇವೆ. ಶಾಲಾ–ಕಾಲೇಜುಗಳಿಗೆ ಭೇಟಿ ನೀಡಿ ಡೆಂಗ್ಯೂ–ಮಲೇರಿಯಾ ತಡೆಗಟ್ಟುವ ಬಗ್ಗೆ ಮುಂಜಾಗ್ರತಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ. ಹಾಸ್ಟೆಲ್‌ಗಳಿಗೆ ಭೇಟಿ ನೀಡಿ ಸೊಳ್ಳೆಪರದೆಗಳನ್ನು ಕಡ್ಡಾಯವಾಗಿ ಬಳಸುವಂತೆ ತಿಳಿಸಲಾಗುತ್ತಿದೆ ಎಂದರು.

ಸೊಳ್ಳೆಗಳಿಂದ ಡೆಂಗ್ಯೂ, ಚಿಕನ್‌ಗುನ್ಯಾ, ಮೆದುಳು ಜ್ವರ, ಝೀಕಾ, ಮಲೇರಿಯಾ, ಆನೆಕಾಲು ರೋಗಗಳು ಹರಡುತ್ತವೆ. ಮಲೇರಿಯಾ ರೋಗವು ಅನಾಫಿಲಿಸ್ ಎಂಬ ಹೆಣ್ಣು ಸೊಳ್ಳೆಯಿಂದ ಹರಡುತ್ತದೆ. ಚಳಿ ಜ್ವರ, ನಡುಕ, ತಲೆನೋವು, ವಾಕರಿಕೆ, ವಾಂತಿ, ಸ್ನಾಯು ನೋವು ಮಲೇರಿಯಾ ರೋಗದ ಲಕ್ಷಣವಾಗಿದೆ. ಮಲೇರಿಯಾದ ಯಾವುದೇ ಲಕ್ಷಣಗಳು ಕಂಡು ಬಂದಲ್ಲಿ ಕೂಡಲೇ ಹತ್ತಿರದ ಸರ್ಕಾರಿ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ, ಚಿಕಿತ್ಸೆ ಪಡೆಯಬೇಕು ಎಂದು ತಿಳಿಸಿದರು.

ಕಳಪೆ ಬಿತ್ತನೆ ಬೀಜ, ರಸಗೊಬ್ಬರಗಳ ಮಾರಾಟ ಕಂಡು ಬಂದಲ್ಲಿ ಕಠಿಣ ಕ್ರಮ ಜರುಗಿಸಿ

ಮಂಡ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಅಧಿಕಾರಿಗಳಿಗೆ ಸೂಚನೆ

ಮಂಡ್ಯ,ಜು.11– ಜಿಲ್ಲೆಯಲ್ಲಿ ಕಳಪೆ ಅಥವಾ ಕಲಬೆರಕೆ ಬಿತ್ತನೆ ಬೀಜ ಹಾಗೂ ರಸಗೊಬ್ಬರಗಳ ಮಾರಾಟ ಕಂಡುಬಂದಲ್ಲಿ ಪ್ರಕರಣ ದಾಖಲಿಸಿ ಕಠಿಣ ಕ್ರಮ ಜರುಗಿಸುವಂತೆ ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಹಾಗೂ ಕೃಷಿ ಇಲಾಖೆ ಕಾರ್ಯದರ್ಶಿ ವಿ.ಅನ್ಬು ಕುಮಾರ್ ಸೂಚಿಸಿದ್ದಾರೆ.

ಜಿಲ್ಲಾ ಪಂಚಾಯತ್ ಕಾವೇರಿ ಸಭಾಂಗಣದಲ್ಲಿ ಅಧಿಕಾರಿಗಳ ಸಭೆ ನಡೆಸಿ ಮಾತನಾಡಿದ ಅವರು ಕೃಷಿ ಇಲಾಖೆ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಬಿತ್ತನೆ ಬೀಜದ ಮೊಳಕೆ ಪರೀಕ್ಷೆಯನ್ನು ಕಡ್ಡಾಯವಾಗಿ ನಡೆಸಬೇಕು. ಇದರಿಂದ ಮುಂದೆಯಾಗುವ ತೊಂದರೆಗಳನ್ನು ತಡೆಗಟ್ಟಬಹುದು ಎಂದರು.

ಮನೆ ಹಾನಿ ಪ್ರಕರಣಗಳು ಒಂದು ವಾರದೊಳಗೆ ವಿಲೇಯಾಗಬೇಕು ಪ್ರಕೃತಿ ವಿಕೋಪದಿಂದ ಬಡವರ ಮನೆ ಹಾನಿಯಾದ ಸಂದರ್ಭದಲ್ಲಿ ಬೇಗ ರಿಪೇರಿ ಅಥವಾ ಮನೆ ಕಟ್ಟಿಕೊಳ್ಳಲು ಅನುಕೂಲವಾಗುವಂತೆ ಪರಿಹಾರ ಒದಗಿಸುವ ಕೆಲಸವನ್ನು ಸರಳೀಕರಣಗೊಳಿಸಲಾಗಿದೆ. ಸಣ್ಣ ಪುಟ್ಟ ಮನೆ ಹಾನಿಯಾದಾಗ ಎರಡು ಅಥವಾ ಮೂರು ದಿನಗಳಲ್ಲಿ ಪರಿಶೀಲನೆ ನಡೆಸಿ ಪರಿಹಾರ ಒದಗಿಸಿ ಇಲ್ಲವಾದಲ್ಲಿ ಅವರೆ ದುರಸ್ತಿ ಮಾಡಿಕೊಳ್ಳುತ್ತಾರೆ. ಜನಸ್ನೇಹಿಯಾಗಿ ಕೆಲಸ ನಿರ್ವಹಿಸಿ ಒಂದು ವಾರದೊಳಗೆ ಮನೆ ಹಾನಿ ಪರಿಹಾರ ಹಣ ಪಾವತಿಸಿ ಎಂದರು.



ಮಂಡ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ವಿ.ಅನ್ಬುಕುಮಾರ್ ಮಾತನಾಡುತ್ತಿರುವುದು.

ಕುಡಿಯುವ ನೀರು ಗಂಭೀರ ವಿಷಯವಾಗಿದ್ದು, ಗ್ರಾಮ ಪಂಚಾಯಿತಿಗಳಲ್ಲಿ ಕುಡಿಯುವ ನೀರಿನ ಪರೀಕ್ಷೆ ನಿಗದಿತವಾಗಿ ನಡೆಯಬೇಕು. ಪರೀಕ್ಷೆ ನಡೆಸಿರುವ ಬಗ್ಗೆ ವರದಿಯನ್ನು ಪಡೆದುಕೊಂಡು ಪರಿಶೀಲನೆ ನಡೆಸಬೇಕು. ಕಲುಷಿತ ಕಂಡುಬಂದಲ್ಲಿ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದರು.

ಬಾಲ್ಯವಿವಾಹ ಹಾಗೂ ಹೆಣ್ಣು ಭ್ರೂಣ ಹತ್ಯೆಯನ್ನು ತಡೆಗಟ್ಟಲು ಗುಪ್ತಚರ ಕೆಲಸಗಳನ್ನು ಹೆಚ್ಚಿಗೊಳಿಸಬೇಕು. ಕಂದಾಯ, ಗ್ರಾಮ ಪಂಚಾಯತಿ, ಪೊಲೀಸ್ ಇಲಾಖೆ ಮೂರು ಇಲಾಖೆಗಳು ಆಂತರಿಕವಾಗಿ ಸಮನ್ವಯದೊಂದಿಗೆ ಕಾರ್ಯನಿರ್ವಹಿಸಿ ಮಾಹಿತಿಗಳನ್ನು ಕಲೆಹಾಕಿ, ಬಾಲ್ಯವಿವಾಹ ಹಾಗೂ ಹೆಣ್ಣು ಭ್ರೂಣ ಹತ್ಯೆ ಪ್ರಕರಣಗಳು ಜಿಲ್ಲೆಯಲ್ಲಿ ನಡೆಯದಂತೆ ನೋಡಿಕೊಳ್ಳಿ ಎಂದರು.

ಸೊಳ್ಳೆ ಕಡಿತ ಎಂದ ಕೂಡಲೇ ರಾತ್ರಿ ಮಾತ್ರ ಎಂದು ಜನರು ಭಾವಿಸಿಕೊಳ್ಳಬಾರದು. ಡೆಂಗ್ಯೂ ರೋಗ ಹರಡುವ ಸೊಳ್ಳೆ ಬೆಳಗಿನ ಸಮಯದ ಕಡಿತದಿಂದ ಉಂಟಾಗುತ್ತದೆ. ರಾತ್ರಿ ಸೇರಿದಂತೆ ಬೆಳಗಿನ ಸಮಯದಲ್ಲೂ ಸಹ ಸೊಳ್ಳೆ ಕಡಿತ ಉಂಟಾಗದಂತೆ ನೋಡಿಕೊಳ್ಳಿ. ಡೆಂಗ್ಯೂ ತಡೆಗಟ್ಟಲು ಹೆಚ್ಚು ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಿ ಎಂದರು.

ಖ್ಯಾತ ನಿರೂಪಕಿ, ನಟಿ ಅಪರ್ಣಾ ನಿಧನ

ಬೆಂಗಳೂರು, ಜು.11– ಸ್ಪಷ್ಟ ಕನ್ನಡದ ನಿರೂಪಣೆ ಮೂಲಕ ಕನ್ನಡಿಗರ ಮನಗೆದ್ದ ಖ್ಯಾತ ನಟಿ, ನಿರೂಪಕಿ ಅಪರ್ಣಾ(58) ನಿಧನರಾಗಿದ್ದಾರೆ.



ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಅಪರ್ಣಾ ಇಂದು ಬೆಂಗಳೂರಿನ ಬನಶಂಕರಿ 2ನೇ ಹಂತದಲ್ಲಿರುವ ಅವರ ನಿವಾಸದಲ್ಲಿ ಕೊನೆಯುಸಿರೆಳೆದಿದ್ದಾರೆ. 1984–85 ರಲ್ಲಿ ತೆರೆಕಂಡ ಪುಟ್ಟಣ್ಣ ಕಣಗಾಲ್‌ರ 'ಮಸಣದ ಹೂವು' ಚಿತ್ರದಿಂದ ಬೆಳಕಿಗೆ ಬಂದ ಅಪರ್ಣಾ ನಂತರ 'ಸಂಗ್ರಾಮ', 'ನಮ್ಮೂರ ರಾಜ', 'ಒಂಟಿ ಸಲಗ', 'ಇನ್ಸ್‌ಪೆಕ್ಟರ್ ವಿಕ್ರಮ್' ಸೇರಿದಂತೆ ಹಲವು ಚಿತ್ರಗಳಲ್ಲಿ ನಟಿಸಿ ಸೈ ಎನಿಸಿಕೊಂಡಿದ್ದರು. ಸಿನಿಮಾಗಿಂತ ನಿರೂಪಕಿಯಾಗಿ ಮನಗೆದ್ದಿದ್ದರು.

90ರ ದಶಕದಲ್ಲಿ ಚಂದನ ವಾಹಿನಿಯಲ್ಲಿ ಮೂಡಿಬಂದ 'ಮೂಡಲ ಮನೆ', 'ಮುಕ್ತ' ಮುಂತಾದ ಧಾರಾವಾಹಿಗಳಲ್ಲಿ ನಟಿಸಿದ್ದು, ಸರ್ಕಾರದ ವಿವಿಧ ಕಾರ್ಯಕ್ರಮದ ನಿರೂಪಣೆ ಹಾಗೂ ರೇಡಿಯೋ ಜಾಕಿಯಾಗಿ ಕೂಡ ಕಾರ್ಯನಿರ್ವಹಿಸಿದ್ದರು. 1998ರಲ್ಲಿ ನಡೆದ ದೀಪಾವಳಿ ಕಾರ್ಯಕ್ರಮವೊಂದನ್ನು ಎಂಟು ಗಂಟೆಗಳ ಕಾಲ ನಿರಂತರ ನಿರೂಪಣೆ ಮಾಡಿ ದಾಖಲೆ ಬರೆದಿದ್ದರು. 2013 ರಲ್ಲಿ ಬಿಗ್ ಬಾಸ್ ಕನ್ನಡದ ಮೊದಲ ಸೀಸನ್‌ನಲ್ಲಿ ಭಾಗವಹಿಸಿದ್ದ ಅಪರ್ಣಾ ರಿಯಾಲಿಟಿ ಶೋಗಳಲ್ಲೂ ಸೈ ಎನಿಸಿಕೊಂಡಿದ್ದರು. 2015 ರಲ್ಲಿ ಸೃಜನ್ ಲೋಕೇಶ್ ನೇತೃತ್ವದಲ್ಲಿ ಆರಂಭವಾದ 'ಮಜಾ ಟಾಕೀಸ್' ಕಾರ್ಯಕ್ರಮದಲ್ಲಿ ವರಲಕ್ಷ್ಮಿ ಪಾತ್ರ ಮಾಡಿ ಹಾಸ್ಯ ನಟಿಯಾಗಿಯೂ ಜನರ ಮನಗೆದ್ದಿದ್ದರು. ಬಹುಮುಖ ಪ್ರತಿಭೆಯಾದ ಅಪರ್ಣಾ ಕೆಲ ಪತ್ರಿಕೆಗಳಲ್ಲಿ ಅಂಕಣ ಬರೆಯುವ ಮೂಲಕ ಓದುಗರಿಗೂ ಹತ್ತಿರವಾಗಿದ್ದರು. ಮೊದಲ ಮದುವೆಯಿಂದ ವಿಚ್ಛೇದನ ಪಡೆದಿದ್ದ ಅಪರ್ಣಾ, ಖ್ಯಾತ ಲೇಖಕ ನಾಗರಾಜ ವಸ್ತಾರೆ ವರಿಸಿದ್ದರು. ಇವರ ನಿಧನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಾಮಾಜಿಕ ಜಾಲತಾಣದ ಮೂಲಕ ಸಂತಾಪ ಸೂಚಿಸಿದ್ದಾರೆ.

ಹಣ ಸುಲಿಗೆ ಪ್ರಕರಣ: ನಿರೂಪಕಿ ದಿವ್ಯ ವಸಂತ ಕೇರಳದಲ್ಲಿ ಬಂಧನ

ಬೆಂಗಳೂರು, ಜು.11–ಬ್ಲ್ಯಾಕ್‌ಮೇಲ್ ಮಾಡಿ ಹಣ ಸುಲಿಗೆ ಯತ್ನ ಮಾಡಿರುವ ಆರೋಪದ ಬೆನ್ನಲ್ಲೇ ಕಾಣೆಯಾಗಿದ್ದ ನಿರೂಪಕಿ ದಿವ್ಯ ವಸಂತ ಬಂಧನವಾಗಿದೆ. ಬೆಂಗಳೂರಿನ ಜೀವನ್ ಭೀಮಾನಗರ ಪೊಲೀಸರು ಬಂಧಿಸಿದ್ದಾರೆ.



ದಿವ್ಯ ವಸಂತ ಮತ್ತು ಗ್ಯಾಂಗ್‌ನಿಂದ ಇಂದಿರಾನಗರದಲ್ಲಿರುವ ಸ್ಪಾ ಮಾಲೀಕನಿಗೆ ಬೆದರಿಕೆ ಹಾಕಿ ಹಣ ಸುಲಿಗೆ ಯತ್ನ ಪ್ರಕರಣ ಇದಾಗಿದ್ದು, ಈ ಕೇಸ್‌ನಲ್ಲಿ ತಮ್ಮನ ಬಂಧನ ನಂತರ ಪರಾರಿಯಾಗಿ ತಲೆಮರೆಸಿಕೊಂಡಿದ್ದ ದಿವ್ಯ ವಸಂತ ಕೇರಳದಲ್ಲಿ ಇರುವ ಬಗ್ಗೆ ಮಾಹಿತಿ ಲಭ್ಯವಾಗಿತ್ತು.

ವಾರದಿಂದ ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸುತ್ತಿದ್ದ ದಿವ್ಯ, ತಮಿಳುನಾಡಿನಿಂದ ಕೇರಳದಲ್ಲಿ ತಲೆಮರೆಸಿಕೊಂಡಿದ್ದಳು. ಸದ್ಯ ಕೇರಳದಿಂದ ಬಂಧಿಸಿ ಕರೆತಂದಿರುವ ಜೀವನ್ ಭೀಮಾನಗರ ಪೊಲೀಸರು ವಿಚಾರಣೆ ನಡೆಸುತ್ತಿದ್ದಾರೆ.

ಇಂದಿರಾನಗರ 'ಸ್ಪಾ' ವ್ಯವಸ್ಥಾಪಕನಿಗೆ ಬೆದರಿಸಿ 15 ಲಕ್ಷ ರು. ಹಣ ಸುಲಿಗೆಗೆ ಯತ್ನಿಸಿದ ಪ್ರಕರಣ ಸಂಬಂಧ ರಾಜ್ ನ್ಯೂಸ್ ಕಾರ್ಯನಿರ್ವಾಹಕ ಎಂದು ತನ್ನನ್ನು ಹೇಳಿಕೊಂಡಿದ್ದ ರಾಜಾನುಕುಂಟೆ ವೆಂಕಟೇಶ್, ದಿವ್ಯ ತಮ್ಮ ಸಂದೇಶ್ ಸೇರಿ ಮೂವರನ್ನು ಈಗಾಗಲೇ ಬಂಧಿಸಿದ್ದಾರೆ.

ಥಾಣೆ ಕಾರ್ಖಾನೆಯಲ್ಲಿ ಬಾಯ್ಲರ್ ಬಿದ್ದು ಇಬ್ಬರು ಕಾರ್ಮಿಕರು ಸಾವು

ಥಾಣೆ, ಜು.11– ಮಹಾರಾಷ್ಟ್ರದ ಥಾಣೆ ಜಿಲ್ಲೆಯ ಕಾರ್ಖಾನೆಯೊಂದರಲ್ಲಿ ಕ್ರೇನ್ ಸಹಾಯದಿಂದ ದೊಡ್ಡ ಗಾತ್ರದ ಬಾಯ್ಲರ್ ಮೇಲೆತ್ತುವ ವೇಳೆ ಅದು ಜಾರಿ ಕೆಳಗೆ ನಿಂತಿದ್ದ ಇಬ್ಬರು ಕಾರ್ಮಿ ಕರು ಮೇಲೆ ಬಿದ್ದಿದೆ. ಪರಿಣಾಮ ಇಬ್ಬರು ಕಾರ್ಮಿಕರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ. ಭಿವಂಡಿ ಪಟ್ಟಣದ ಸಾರವ್ಲಿ ಎಂಐ ಡಿಸಿ(ಮಹಾರಾಷ್ಟ್ರ ಕೈಗಾರಿಕಾ ಅಭಿವೃದ್ಧಿ ನಿಗಮ)ಯಲ್ಲಿರುವ ಡೈಯಿಂಗ್ ಘಟಕ ದಲ್ಲಿ ಬುಧವಾರ ಸಂಜೆ ಈ ಘಟನೆ ನಡೆದಿದೆ ಎಂದು ಕೊಂಗಾವ್ ಪೊಲೀಸ್ ಠಾಣೆ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಮೃತ ಕಾರ್ಮಿಕರನ್ನು ಬಲರಾಮ್ ಚೌಧರಿ(55) ಮತ್ತು ಪಾಂಡುರಂಗ ಪಾಟೀಲ್(65) ಎಂದು ಗುರುತಿಸಲಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.


ಡೆಂಗ್ಯೂ : ಮೈಸೂರು ಜಿಲ್ಲೆಯಲ್ಲಿ ಪ್ರಸ್ತುತ 24 ಸಕ್ರಿಯ ಪ್ರಕರಣ

ಪಾಸಿಟಿವಿಟಿ ರೇಟ್ ಶೇ.17ರಿಂದ 11ಕ್ಕೆ ಇಳಿಕೆ

ಮೈಸೂರು, ಜು.11(ಪಿಎಂ)– ಜಿಲ್ಲೆಯಲ್ಲಿ ಡೆಂಗ್ಯೂ ಪಾಸಿಟಿವಿಟಿ ರೇಟ್ ಶೇ.17ರಿಂದ 11ಕ್ಕೆ ಇಳಿಕೆಯಾಗಿದೆ. ಗುರುವಾರ ಸಂಜೆ ವೇಳೆಗೆ ಜಿಲ್ಲೆಯಲ್ಲಿ ಒಟ್ಟು 24 ಸಕ್ರಿಯ ಪ್ರಕರಣಗಳು ಇದ್ದು, ಸೋಂಕಿತರ ಸಂಖ್ಯೆ ಗಣನೀಯವಾಗಿ ಇಳಿಕೆಯಾಗುತ್ತಿದೆ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ ತಿಳಿಸಿದರು.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಜಿಲ್ಲೆಯಲ್ಲಿ ಡೆಂಗ್ಯೂ ಸೋಂಕಿತರ ಪ್ರಮಾಣ ಇಳಿಕೆಯಾಗುತ್ತಿದೆ. ಈ ವರ್ಷದ ಜನವರಿಯಿಂದ ಈವರೆಗೆ ನಾಲ್ಕೂವರೆ ಸಾವಿರಕ್ಕೂ ಅಧಿಕ ಮಂದಿಯ ರಕ್ತ ಮಾದರಿ ಪರೀಕ್ಷೆ ನಡೆಸಲಾಗಿದೆ. ಈ ಪೈಕಿ 557 ಮಂದಿಯಲ್ಲಿ ಡೆಂಗ್ಯೂ ಪಾಸಿಟಿವ್ ಕಂಡುಬಂದಿದ್ದು, ಗುರುವಾರ ಪತ್ತೆಯಾದ ಎರಡು ಡೆಂಗ್ಯೂ ಪ್ರಕರಣ ಸೇರಿದಂತೆ ಪ್ರಸ್ತುತ 24 ಸಕ್ರಿಯ ಪ್ರಕರಣಗಳು ಜಿಲ್ಲೆಯಲ್ಲಿವೆ ಎಂದರು.

ಡಿಹೆಚ್‌ಓ ಮಾಹಿತಿ



ಈ ರೀತಿಯಲ್ಲಿ ಯಾವುದೇ ಸಾಂಕ್ರಾಮಿಕ ಸೋಂಕು ಸ್ಫೋಟಗೊಂಡಾಗ ಶೇ.5ರಿಂದ 10ರಷ್ಟು ಸ್ಯಾಂಪಲ್ ಸಂಗ್ರಹ ಮಾಡಿದರೂ ಸಾಕೆಂಬ ಮಾರ್ಗಸೂಚಿ ಇದೆ. ಆದರೂ ನಮ್ಮಲ್ಲಿ ಶೇ.32ರಷ್ಟು ಸ್ಯಾಂಪಲ್ ಸಂಗ್ರಹಕ್ಕೆ ಕ್ರಮ ವಹಿಸಲಾಗಿದೆ. ಹಾಗಾಗಿ ಆರಂಭಿಕ ಹಂತದಲ್ಲೇ ಡೆಂಗ್ಯೂ ಪ್ರಕರಣಗಳು ಪತ್ತೆಯಾಗುತ್ತಿವೆ ಎಂದು ತಿಳಿಸಿದರು.

ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆಯ ಮಹಿಳಾ ಸಿಬ್ಬಂದಿ ಲಲಿತಾ (32) ಅವರ ಸಾವಿಗೆ ಸಂಬಂಧಿಸಿದಂತೆ ಡೆತ್ ಆಡಿಟಿಂಗ್ ವರದಿ ನಾಳೆ ಬರಲಿದೆ. ಆ ಬಳಿಕ ಅವರ ಸಾವಿಗೆ ಕಾರಣವಾದ ಅನಾರೋಗ್ಯ ಅಂಶವನ್ನು ತಿಳಿಸಲಾಗುವುದು ಎಂದು ಹೇಳಿದರು. ಕೆಆರ್ ಆಸ್ಪತ್ರೆಯಲ್ಲಿ ದಾಖಲಾಗಿರುವ ಡೆಂಗ್ಯೂ ಪ್ರಕರಣಗಳಲ್ಲಿ ಕೇವಲ ಮೈಸೂರಿಗೆ ಸಂಬಂಧಿಸಿದವು ಮಾತ್ರ ಇರುವುದಿಲ್ಲ. ಇತರೆ ಜಿಲ್ಲೆಗಳ ಡೆಂಗ್ಯೂ ಪ್ರಕರಣಗಳೂ ಇರುತ್ತವೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ತಾಯೂರು ವಿಠಲಮೂರ್ತಿಗೆ ಸಂತಾಪ



ಹಿರಿಯ ಕನ್ನಡ ಹೋರಾಟಗಾರ ತಾಯೂರು ವಿಠಲಮೂರ್ತಿ ಅವರಿಗೆ ಕಾವೇರಿ ಕ್ರಿಯಾ ಸಮಿತಿ ವತಿಯಿಂದ ಸಂತಾಪ ಸೂಚಿಸಲಾಯಿತು. ಈ ವೇಳೆ ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷ ಜಯಪ್ರಕಾಶ್, ಮೂಗೂರು ನಂಜುಂಡಸ್ವಾಮಿ, ಮೆಲ್ಲಹಳ್ಳಿ ಮಹದೇವಸ್ವಾಮಿ, ತೇಜೇಶ್ ಲೋಕೇಶ್‌ಗೌಡ, ಸುರೇಶ್‌ಗೌಡ, ವರಕೋಡು ಕೃಷ್ಣೇಗೌಡ, ಪ್ರಭುಶಂಕರ್, ನಾಗರಾಜ್, ಭಾಗ್ಯಮ್ಮ, ಶ್ರೀನಿವಾಸ್, ಹನುಮಂತಯ್ಯ, ರವೀಶ್, ಬಾಲು, ವಿಷ್ಣು, ಕೃಷ್ಣಪ್ಪ, ಪ್ರಭಾಕರ್, ಆಟೋಮಹದೇವ್ ಇನ್ನಿತರರು ಹಾಜರಿದ್ದರು.

ಶ್ರೀ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಆಷಾಢ ಶುಕ್ರವಾರದ ವಿಶೇಷ ಪೂಜೆ



ಮೈಸೂರು, ಜು.11– ತಾಲೂಕಿನ ಯಾಂದಹಳ್ಳಿ ಗ್ರಾಮದಲ್ಲಿರುವ ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ ಆಷಾಢ ಮಾಸದ ನಾಲ್ಕು ಶುಕ್ರವಾರ ಹಾಗೂ ಜು.27ರಂದು ಅಮ್ಮನವರ ವರ್ಧಂತಿ ಹಿನ್ನೆಲೆ ವಿಶೇಷ ಅಲಂಕಾರ ಹಾಗೂ ಪೂಜಾ ಕೈಂಕರ್ಯ ಹಮ್ಮಿಕೊಳ್ಳಲಾಗಿದೆ. ವಿವಿಧ ಪೂಜೆ ಸಲ್ಲಿಸಲು ಬಯಸುವ ಭಕ್ತಾದಿಗಳು ಮೊ.ನಂ.8073091391ಗೆ ಸಂಪರ್ಕಿಸುವಂತೆ ದೇವಸ್ಥಾನದ ಮುಖ್ಯಸ್ಥ ವರುಣಾ ಪ್ರಶಾಂತ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮುಡಾ ಹಗರಣ ಸಿಬಿಐಗೆ ವಹಿಸಲು ಕೋರಿ ಮುಖ್ಯ ನ್ಯಾಯಮೂರ್ತಿಗೆ ಪತ್ರ ಬರೆದ ಶಾಸಕ ಯತ್ನಾಳ್

ಬೆಂಗಳೂರು, ಜು.11– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ(ಮುಡಾ) ನಡೆದಿರುವ ನಿವೇಶನಗಳ ಹಂಚಿಕೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮ ಹಗರಣವನ್ನು ತಕ್ಷಣ ಸಿಬಿಐ ತನಿಖೆಗೆ ವಹಿಸುವಂತೆ ಕೋರಿ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳಿಗೆ ಮನವಿ ಮಾಡಿದ್ದಾರೆ.



ಎರಡು ಪುಟಗಳ ಪತ್ರ ಬರೆದಿರುವ ಅವರು, ಹಗರಣದಲ್ಲಿ ಮುಖ್ಯಮಂತ್ರಿ ಪತ್ನಿ ಪಾರ್ವತಿ ಅವರಿಗೆ ಒಟ್ಟು 14 ನಿವೇಶನಗಳನ್ನು ಅಕ್ರಮವಾಗಿ ಹಂಚಿಕೆ ಮಾಡಿರುವುದು ಮಾಧ್ಯಮಗಳ ಮುಖಾಂತರ ಬೆಳಕಿಗೆ ಬರುತ್ತಿದ್ದಂತೆಯೇ ರಾಜ್ಯದ ಸಂಪುಟ ದರ್ಜೆ ಸಚಿವರೊಬ್ಬರು ಮುಡಾದಲ್ಲಿದ್ದ ಕಡತಗಳನ್ನು ಬೆಂಗಳೂರಿಗೆ ತರಿಸಿಕೊಂಡಿದ್ದಾರೆ. ಇದು ಭಾರಿ ಭ್ರಷ್ಟಾಚಾರ ಮುಚ್ಚಿ ಹಾಕುವ ಪ್ರಯತ್ನ ಎಂದು ಪತ್ರದಲ್ಲಿ ದೂರಲಾಗಿದೆ.

ಮುಡಾ ವ್ಯಾಪ್ತಿಯಲ್ಲಿ 3 ಸಾವಿರ ನಿವೇಶನಗಳನ್ನು ಅಕ್ರಮವಾಗಿ ಹಂಚಿಕೆ ಮಾಡಲಾಗಿದೆ. ಮೈಸೂರು ಜಿಲ್ಲಾಧಿಕಾರಿ 2023ರ ನವೆಂಬರ್ 27ರಂದೇ ರಾಜ್ಯ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿಗೆ ಬರೆದ ಪತ್ರದಲ್ಲಿ ಮುಡಾ ನಿವೇಶನಗಳ ಅಕ್ರಮ ಹಂಚಿಕೆ ಬಗ್ಗೆ ಪ್ರಸ್ತಾಪಿಸಿದ್ದಾರೆ. ಇದರಿಂದ ರಾಜ್ಯದ ಬೊಕ್ಕಸಕ್ಕೆ 1 ಸಾವಿರ ಕೋಟಿ ರೂ. ಆರ್ಥಿಕ ನಷ್ಟ ಉಂಟಾಗಿದೆ ಎಂದು ಅಂದಾಜಿಸಿದ್ದಾರೆ. ಈ ಹಗರಣದಲ್ಲಿ ಮುಖ್ಯಮಂತ್ರಿಯನ್ನು ರಕ್ಷಿಸಲು ರಾಜ್ಯ ಸರ್ಕಾರ ಮತ್ತು ಸಂಬಂಧಿಸಿದ ಅಧಿಕಾರಿಗಳು ಪ್ರಯತ್ನ ಮಾಡುತ್ತಿದ್ದಾರೆ. ಆದ್ದರಿಂದ ಹಗರಣದ ಗಂಭೀರತೆಯನ್ನು ಪರಿಗಣಿಸಿ ತಾವು ಇದನ್ನು ಸ್ವಯಂ ಪ್ರೇರಿತವಾಗಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನಾಗಿ ದಾಖಲಿಸಿಕೊಂಡು; ಕೂಡಲೇ ಸಿಬಿಐ ತನಿಖೆಗೆ ಒಪ್ಪಿಸಬೇಕು ಮತ್ತು ಈ ತನಿಖೆಯು ಹೈಕೋರ್ಟ್ ಮೇಲ್ವಿಚಾರಣೆಯಲ್ಲಿ ನಡೆಯುವಂತಾಗಬೇಕು ಎಂದು ಕೋರಿದ್ದಾರೆ.

ಇಂದು ಮೈಸೂರಲ್ಲಿ ಬಿಜೆಪಿ ಬೃಹತ್ ಪ್ರತಿಭಟನಾ ಸಭೆ; ಬಿ.ವೈ.ವಿಜಯೇಂದ್ರ ಭಾಗಿ

ಮೈಸೂರು,ಜು.11(ಪಿಎಂ)– ಶಾಸಕರೂ ಆದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಜು.12ರ ಶುಕ್ರವಾರ ಮೈಸೂರು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ. ಬೆಂಗಳೂರಿನಿಂದ ಮಧ್ಯಾಹ್ನ 12ಕ್ಕೆ ಮೈಸೂರಿಗೆ ಆಗಮಿಸಿ, ಮಹಾರಾಜ ಕಾಲೇಜು ಮೈದಾನದಲ್ಲಿ ಮುಡಾ ಹಗರಣಗಳನ್ನು ಸಿಬಿಐ ತನಿಖೆಗೆ ವಹಿಸಬೇಕೆಂದು ಆಗ್ರಹಿಸಿ ಬಿಜೆಪಿ ಹಮ್ಮಿಕೊಂಡಿರುವ ಬೃಹತ್ ಪ್ರತಿಭಟನಾ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ನಂತರ ಮಧ್ಯಾಹ್ನ 2ಕ್ಕೆ ಮೈಸೂರಿನಿಂದ ಬೆಂಗಳೂರಿಗೆ ನಿರ್ಗಮಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.



ಆಗಸ್ಟ್‌ನಲ್ಲಿ ಸುನೀತಾ ವಿಲಿಯಂ ಭೂಮಿಗೆ ವಾಪಸ್ಸಾಗುವ ನಿರೀಕ್ಷೆ

ವಾಷಿಂಗ್ಟನ್, ಜು.11– ಬೋಯಿಂಗ್‌ನ ಸ್ಟಾರ್‌ಲೈನರ್ ಬಾಹ್ಯಾಕಾಶ ನೌಕೆಯಲ್ಲಿನ ತಾಂತ್ರಿಕ ಸಮಸ್ಯೆಯಿಂದಾಗಿ ಬಾಹ್ಯಾಕಾಶ ನಿಲ್ದಾಣದಲ್ಲಿ ಅಕ್ಷರಶಃ ಬಂಧಿಯಾಗಿರುವ ಭಾರತೀಯ ಮೂಲದ ಸುನೀತಾ ವಿಲಿಯಮ್ಸ್ ಮೊದಲ ಬಾರಿಗೆ ಪ್ರತಿಕ್ರಿಯೆ ನೀಡಿದ್ದಾರೆ.

ಬೋಯಿಂಗ್‌ನ ಸ್ಟಾರ್‌ಲೈನರ್ ಬಾಹ್ಯಾಕಾಶ ನೌಕೆಯಲ್ಲಿ ಅಂತರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಪ್ರಯಾಣ ಬೆಳೆಸಿದ್ದ ನಾಸಾ ಗಗನಯಾತ್ರಿ ಸುನಿತಾ 'ಸುನಿ' ವಿಲಿಯಮ್ಸ್ ಮತ್ತು ಬ್ಯಾರಿ 'ಬುಚ್' ವಿಲ್ಮೋರ್ ಅವರು ಕಳೆದ ತಿಂಗಳೇ ಭೂಮಿಗೆ ಮರಳಲಿದ್ದಾರೆ ಎಂದು ಭಾವಿಸಲಾಗಿತ್ತು.

ಆದರೆ ತಾವು ತೆರಳಿದ್ದ ಬೋಯಿಂಗ್‌ನ ಸ್ಟಾರ್‌ಲೈನರ್ ಬಾಹ್ಯಾಕಾಶ ನೌಕೆಯಲ್ಲಿನ ತಾಂತ್ರಿಕ ಸಮಸ್ಯೆಯಿಂದಾಗಿ ಈ ಜೋಡಿ ಆಗಸ್ಟ್‌ವರೆಗೆ ಕೆಲವು ವಾರಗಳ ಕಾಲ ಬಾಹ್ಯಾಕಾಶದಲ್ಲಿ ಉಳಿಯಬೇಕಾಗಬಹುದು ಎಂದು ಹೇಳಲಾಗುತ್ತಿದೆ. ಅತ್ತ ನೌಕೆಯಲ್ಲಿನ ತಾಂತ್ರಿಕ ದೋಷ ಸರಿಪಡಿಸಲು ಇಂಜಿನಿಯರ್‌ಗಳು ಸಮಯದೊಂದಿಗೆ ಸ್ಪರ್ಧೆ ನಡೆಸಿದ್ದರೆ ಇತ್ತ ಕೆಲ ಮಾಧ್ಯಮಗಳು ಬಾಹ್ಯಾ ಕಾಶಕ್ಕೆ ತೆರಳಿರುವ ನಾಸಾ ಗಗನಯಾತ್ರಿಗಳು ಭೂಮಿಗೆ ಮರಳುವುದೇ ಅನುಮಾನ ಎಂಬ ಶಂಕೆ ವ್ಯಕ್ತಪಡಿಸುತ್ತಿವೆ. ನೌಕೆಯಲ್ಲಿನ ತಾಂತ್ರಿಕ ದೋಷ ಸರಿಪಡಿಸಲು ಸಾಧ್ಯವಾಗದೇ ಇರಬಹುದು ಎಂಬ ಚರ್ಚೆಗಳು ನಡೆಯುತ್ತಿವೆ.



ಸುನೀತಾ ವಿಲಯಮ್ಸ್ ಮೊದಲ ಮಾತು!: ಬಾಹ್ಯಾಕಾಶದಲ್ಲಿರುವ ಗಗನಯಾತ್ರಿ ಸುನಿತಾ ವಿಲಿಯಮ್ಸ್‌ರನ್ನು ಖಾಸಗಿ ವಾಹಿನಿಯೊಂದು ಸಂಪರ್ಕಿಸಿದ್ದು ಈ ವೇಳೆ ಮಾತನಾಡಿರುವ ಸುನಿತಾ ವಿಲಿಯಮ್ಸ್, "ಸ್ಟಾರ್‌ಲೈನರ್ ನೌಕೆಯಲ್ಲಿನ ತಾಂತ್ರಿಕ ಸಮಸ್ಯೆ ಶೀಘ್ರ ಬಗೆಹರಿಯುವ ವಿಶ್ವಾಸವಿದೆ. ನಾವು ಶೀಘ್ರದಲ್ಲೇ ಭೂಮಿಗೆ ಹಿಂತಿರುಗಿಸಬಹುದು ಎಂಬ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ನಮಗೆ ಅಗತ್ಯವಿದ್ದರೆ, ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ಸಮಸ್ಯೆಯಿದ್ದರೆ, ನಾವು ಸ್ಟಾರ್ಲೈನರ್ ಬಾಹ್ಯಾಕಾಶ ನೌಕೆ ಪ್ರವೇಶಿ ಅನ್‌ಡಾಕ್ ಮಾಡಬಹುದು, ನಮ್ಮ ತಂಡದೊಂದಿಗೆ ಮಾತನಾಡಬಹುದು ಮತ್ತು ಮನೆಗೆ ಬರಲು ಉತ್ತಮ ಮಾರ್ಗವನ್ನು ಕಂಡುಹಿಡಿಯಬಹುದು ಎಂದು ನನಗೆ ವಿಶ್ವಾಸವಿದೆ. ನೌಕೆಯಲ್ಲಿನ ತಾಂತ್ರಿಕದೋಷ ಶೀಘ್ರ ಬಗೆಹರಿಯುವ ಸಂಪೂರ್ಣ ವಿಶ್ವಾಸವನ್ನು ನಾವು ಹೊಂದಿದ್ದೇವೆ. ಬಾಹ್ಯಾಕಾಶ ನೌಕೆಯು ನಮ್ಮನ್ನು ಮನೆಗೆ ಕರೆತರುತ್ತದೆ, ತೊಂದರೆಯಿಲ್ಲ ಎಂದು ಸುನಿತಾ ವಿಲಿಯಮ್ಸ್ ISSನಿಂದ CNN ವರದಿಗಾರರಿಗೆ ತಿಳಿಸಿದ್ದಾರೆ.

ನೌಕೆಗೆ ಏನಾಗಿದೆ: ಬಾಹ್ಯಾಕಾಶದಲ್ಲಿ 10 ದಿನಗಳನ್ನು ಕಳೆಯಲು ಹೋಗಿದ್ದ ಭಾರತೀಯ ಮೂಲದ ಸುನೀತಾ ವಿಲಿಯಮ್ಸ್ ಹಾಗೂ ಆಕೆಯ ಸಹೋದ್ಯೋಗಿ ಅಂತರಾಷ್ಟ್ರೀಯ ಬಾಹ್ಯಾಕಾಶದಲ್ಲೇ ತಾಂತ್ರಿಕ ದೋಷದಿಂದ ಬಂಧಿಯಾಗಿದ್ದಾರೆ. ಜೂನ್ 5ರಂದು ಬೋಯಿಂಗ್ ಸ್ಟಾರ್ಲೈನರ್‌ನಲ್ಲಿ ಸುನಿತಾ ಮತ್ತು ಬ್ಯಾರಿ 'ಬುಚ್' ವಿಲ್ಮೋರ್ ಬಾಹ್ಯಾಕಾಶಕ್ಕೆ ಹಾರಿದ್ದರು. ಆದರೆ ಸ್ಟಾರ್ಲೈನರ್ 28 ಟ್ರಸ್ಟರ್‌ಗಳಲ್ಲಿ ಐದು ಹೀಲಿಯಂ ಸೋರಿಕೆಗಳು ಸೇರಿ ಕೆಲ ತಾಂತ್ರಿಕ ಸಮಸ್ಯೆ ಕಂಡುಬಂದಿತ್ತು. ಹೀಗಾಗಿ ಅಂದಿನಿಂದ ಅವರಿಬ್ಬರು ಬಾಹ್ಯಾಕಾಶದಲ್ಲಿಯೇ ಬಂಧಿಯಾಗಿದ್ದಾರೆ.

ಮೈಸೂರು ಮಿತ್ರ

ದೇಶ - ವಿದೇಶ

ರಾಮಸೇತುವಿನ ಮತ್ತಷ್ಟು ರಹಸ್ಯ ಬಿಚ್ಚಿಟ್ಟ ಇಸ್ರೋ!



ರಾಮೇಶ್ವರಂ (ತಮಿಳುನಾಡು): ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ), ಭಾರತದ ಧಾರ್ಮಿಕ ಗ್ರಂಥಗಳಲ್ಲಿ ಉಲ್ಲೇಖಿಸಲಾದ ಸಮುದ್ರದಲ್ಲಿ ನೀರಿನಲ್ಲಿ ಮುಳುಗಿರುವ ಭಾರತ ಮತ್ತು ಶ್ರೀಲಂಕಾ ನಡುವಿನ ಪುರಾತನ 'ರಾಮ ಸೇತು'ವಿನ ಕುರಿತಾದ ಮತ್ತಷ್ಟು ರಹಸ್ಯಗಳನ್ನು ಬೆಳಕಿಗೆ ತರುವಲ್ಲಿ ಯಶಸ್ವಿಯಾಗಿದೆ. ರಾಮಸೇತುವಿನ ಕುರಿತು ಇಸ್ರೋ ಹೊಸ ನಕ್ಷೆಯೊಂದನ್ನು ಸಿದ್ಧಪಡಿಸಿದ್ದು, ಒಂದು ಕಾಲದಲ್ಲಿ ಭಾರತ ಮತ್ತು ಶ್ರೀಲಂಕಾ ನಡುವಿನ ಭೂ ಸಂಪರ್ಕವಾಗಿದ್ದ ಆಡಮ್ಸ್ ಬ್ರಿಜ್ ಅಥವಾ ರಾಮಸೇತುವಿನ ಮೂಲವನ್ನು ದೃಢಪಡಿಸುವಲ್ಲಿ ಮಹತ್ವದ ಪಾತ್ರ ವಹಿಸಲಿದೆ ಎನ್ನಲಾಗಿದೆ.

ಗಿರಿಬಾಬು ದಂಡಬಾತುಲ ನೇತೃತ್ವದ ಸಂಶೋಧನಾ ತಂಡವು ನೀರೊಳಗಿನ ವಿವರವಾದ ನಕ್ಷೆಯು ಧನುಷ್ಕೋಡಿಯಿಂದ ತಲೈಮನ್ನಾರ್‌ವರೆಗಿನ ಸೇತುವೆಯ ಸಂಪರ್ಕವನ್ನು ಸಾಬೀತುಪಡಿಸಿದೆ. ಈ ಪೈಕಿ ಶೇ.99.98ರಷ್ಟು ಭಾಗ ಆಳವಿಲ್ಲದ ನೀರಿನಲ್ಲಿ ಮುಳುಗಿದೆ. ಜೊತೆಗೆ ಮನ್ನಾರ್ ಕೊಲ್ಲಿ ಮತ್ತು ಪಾಕ್ ಜಲಸಂಧಿ ನಡುವೆ 11 ಕಿರಿದಾದ ಕಾಲುವೆಗಳನ್ನು ಕಂಡುಹಿಡಿದಿದೆ. ಈ ಕಾಲುವೆಗಳು ಸಮುದ್ರದ ಅಲೆಗಳಿಂದ ರಾಮಸೇತು ಸಂರಕ್ಷಿಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ರಾಮಾಯಣದಲ್ಲಿ ರಾಮನ ವಾನರಸೇನೆಯು, ರಾವಣನ ರಾಜ್ಯವಾದ ಶ್ರೀಲಂಕಾವನ್ನು ತಲುಪಲು ಈ ಸೇತುವೆ ನಿರ್ಮಿಸಿತ್ತು. ರಾವಣನಿಂದ ಅಪಹರಣಕ್ಕೆ ಒಳಗಾಗಿದ್ದ ರಾಮನ ಹೆಂಡತಿ ಸೀತೆಯನ್ನು ರಕ್ಷಿಸಲು ವಾನರ ಸೇನೆಯು ಈ ಸೇತುವೆ ಮೂಲಕ ಲಂಕೆ ತಲುಪಿತ್ತು ಎಂದು ಉಲ್ಲೇಖಿಸಲಾಗಿದೆ.

ತಿಗಣೆ ಔಷಧಿ ಹೊಡೆಯಲು ಹೋದವರ ಪತ್ತೆದಾರಿಕೆ; ಯುವತಿಯರ ಕಳ್ಳಸಾಗಣೆ ಬಯಲು

ಟೆಕ್ಸಾಸ್ (ಅಮೆರಿಕ): ಅಮೆರಿಕದ ಟೆಕ್ಸಾಸ್ ರಾಜ್ಯದ ಉತ್ತರ ಭಾಗದಲ್ಲಿ ಪ್ರಿನ್ಸ್‌ಟನ್ ಎಂಬ ನಗರ ಇದೆ. ಈ ನಗರದಲ್ಲಿ ತಿಗಣೆ ಔಷಧ ಹೊಡೆಯುವ ತಂಡಕ್ಕೆ ಕರೆ ಬಂದಿತ್ತು. ಈ ತಂಡಕ್ಕೆ ಕಟ್ಟಡದಲ್ಲಿ ಕಂಡ ದೃಶ್ಯಗಳು ಹಾಗೂ ಇವರ ಸಮಯ ಪ್ರಜ್ಞೆಯಿಂದಾಗಿ ಅತಿ ದೊಡ್ಡ ಮಾನವ ಕಳ್ಳಸಾಗಣೆ ಜಾಲವೇ ಬಯಲಾಗಿದೆ.



ಎರಡು ಅಂತಸ್ತಿನ ಈ ಕಟ್ಟಡಕ್ಕೆ ತಿಗಣೆ ಔಷಧ ಹೊಡೆಯುವ ತಂಡ ಭೇಟಿ ಕೊಟ್ಟ ವೇಳೆ ಪ್ರತಿ ರೂಂನಲ್ಲೂ ಮೂರರಿಂದ ಐದು ಯುವತಿಯರು ಇದ್ದರು. ಎಲ್ಲರೂ ನೆಲದ ಮೇಲೆ ಬಟ್ಟೆ ಹಾಸಿಕೊಂಡು ಮಲಗಿದ್ದರು. ಇವರನ್ನು ಕಾವಲು ಕಾಯಲು ಮೂವರು ಯುವಕರಿದ್ದರು. ಓರ್ವ ಮಹಿಳೆ ಕೂಡ ಇದ್ದರು. ತಿಗಣೆ ಔಷಧ ಹೊಡೆಯುವ ಕಂಪನಿ ಈ ವಿಚಾರವನ್ನು ಅಧಿಕೃತವಾಗಿ ಪೊಲೀಸರಿಗೆ ತಿಳಿಸಿತು. ಕೂಡಲೇ ಪೊಲೀಸರು ದಿಢೀರ್ ದಾಳಿ ನಡೆಸಿದರು. ಈ ವೇಳೆ ಮಹಿಳೆಯೊಬ್ಬರು ಸೇರಿದಂತೆ ನಾಲ್ವರು ಆರೋಪಿಗಳನ್ನು ವಶಕ್ಕೆ ಪಡೆದ ಪೊಲೀಸರು ಅವರ ದಾಖಲೆ ಪರಿಶೀಲಿಸಿದಾಗ ನಾಲ್ವರಲ್ಲಿ ಮೂವರು ಭಾರತೀಯ ಪ್ರಜೆಗಳು ಎಂದು ತಿಳಿದು ಬಂತು. ಇವರೆಲ್ಲರೂ ಜಾವಾ ಸ್ಕ್ರಿಪ್ಟಿಂಗ್ ಹಾಗೂ ಕಂಪ್ಯೂಟರ್ ಪ್ರೋಗ್ರಾಮಿಂಗ್ ಕೆಲಸ ಕೊಡಿಸುವ ಆಮಿಷ ಒಡ್ಡಿ 15 ಮಹಿಳೆಯರನ್ನು ಇಲ್ಲಿ ಇರಿಸಿಕೊಂಡಿದ್ದರು ಎಂದು ಸಾಬೀತಾಗಿದೆ.

12 ವರ್ಷದ ಬಾಲಕಿಯನ್ನು ನುಂಗಿದ ಮೊಸಳೆ

ಆಸ್ಟ್ರೇಲಿಯಾ: ತನ್ನ ಕುಟುಂಬದೊಂದಿಗೆ ಈಜುತ್ತಿದ್ದಾಗ 12 ವರ್ಷದ ಬಾಲಕಿಯನ್ನು ಮೊಸಳೆಯೊಂದು ಜೀವಂತವಾಗಿ ನುಂಗಿರುವ ಘಟನೆ ಉತ್ತರ ಆಸ್ಟ್ರೇಲಿಯಾದಲ್ಲಿ ನಡೆದಿದೆ. ಬಳಿಕ ಜನರು ಆ 14 ಅಡಿ ಉದ್ದದ ಬೃಹತ್ ಗಾತ್ರದ ಮೊಸಳೆಯನ್ನು ಹೊಡೆದು ಕೊಂದಿದ್ದಾರೆ.



2018ರಲ್ಲಿ ಕೂಡ ಸ್ಥಳೀಯ ಮಹಿಳೆಯೊಬ್ಬರು ನದಿಯಲ್ಲಿ ಮಸ್ಸೆಲ್ಸ್ ಸಂಗ್ರಹಿಸುವಾಗ ಮೊಸಳೆ ಬಲಿ ಪಡೆದಿತ್ತು. ಈ ದಾಳಿಯು ಉತ್ತರ ಪ್ರಾಂತ್ಯದಲ್ಲಿ ಮೊಸಳೆಗಳ ಸಂಖ್ಯೆಯನ್ನು ನಿಗ್ರಹಿಸಲು ಕ್ರಮ ತೆಗೆದುಕೊಳ್ಳಬೇಕೇ ಎಂಬ ಚರ್ಚೆಯನ್ನು ಹುಟ್ಟುಹಾಕಿದೆ. ಕಳೆದ ವಾರ ಬಾಲಕಿಯ ಮೇಲೆ ದಾಳಿ ನಡೆದಾಗಿನಿಂದ ರೇಂಜರ್‌ಗಳು ಮೊಸಳೆಯನ್ನು ಬಲೆಗೆ ಬೀಳಿಸಲು ಅಥವಾ ಶೂಟ್ ಮಾಡಲು ಪ್ರಯತ್ನಿಸುತ್ತಿದ್ದಾರೆ. ಅನೇಕ ಸ್ಥಳೀಯ ಆಸ್ಟ್ರೇಲಿಯನ್ನರು ಉಪ್ಪುನೀರಿನ ಮೊಸಳೆಗಳನ್ನು 'ಟೋಟೆಮ್' ಎಂದು ಪರಿಗಣಿಸಲಾಗುತ್ತದೆ. ಇದೇ ಬಾಲಕಿಯನ್ನು ಕೊಂದ ಪ್ರಾಣಿ ಎಂದು ಹೇಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಿಡಿಲು ಬಡಿದು ಒಂದೇ ದಿನ 7 ಮಕ್ಕಳು, ರೈತ ಸೇರಿ 38 ಜನ ಬಲಿ

ಉತ್ತರಪ್ರದೇಶ: ಉತ್ತರಪ್ರದೇಶದಲ್ಲಿ ಒಂದೇ ದಿನ ಸಿಡಿಲು ಬಡಿದ ಪ್ರಕರಣಗಳಲ್ಲಿ ಒಟ್ಟು 38 ಜನ ಮೃತಪಟ್ಟಿದ್ದಾರೆ ಎಂದು ವರದಿ ಆಗಿದೆ. ನಿನ್ನೆ ಒಂದೇ ದಿನ ಸಿಡಿಲಿನಿಂದಾಗಿ ಇಷ್ಟೊಂದು ಸಾವು ಸಂಭವಿಸಿದೆ. ಅದರಲ್ಲೂ ಪ್ರತಾಪ್‌ಗಢ ಜಿಲ್ಲೆಯಿಂದಾಗಿ ಅತ್ಯಧಿಕ ಎಂದರೆ 11 ಜನ ಮೃತಪಟ್ಟಿದ್ದಾರೆ.



ನಂತರದ ಸ್ಥಾನದಲ್ಲಿ ಸುಲ್ತಾನ್‌ಪುರ ಜಿಲ್ಲೆಯಲ್ಲಿ 7 ಜನ ಸಿಡಿಲಿಗೆ ಬಲಿಯಾಗಿದ್ದಾರೆ. ಛಂದೌಲಿ ಜಿಲ್ಲೆಯಲ್ಲಿ 6 ಜನ ಮೃತಪಟ್ಟಿದ್ದರೆ ಮೈನ್‌ಪುರಿಯಲ್ಲಿ 5 ಜನ ಹಾಗೂ ಪ್ರಯಾಗ್‌ರಾಜ್‌ನಲ್ಲಿ 4 ಜನ ಸಾವನ್ನಪ್ಪಿದ್ದಾರೆ. ಹಾಗೆಯೇ ಔರೈಯಾ, ದಿಯೋರಿಯಾ, ಹಾಥ್ರಸ್, ವಾರಣಾಸಿ ಹಾಗೂ ಸಿದ್ಧಾರ್ಥನಗರ ಜಿಲ್ಲೆಯಲ್ಲಿ ತಲಾ ಒಬ್ಬೊಬ್ಬರು ಈ ಸಿಡಿಲಿನ ರೌದ್ರಾವತಾರಕ್ಕೆ ಬಲಿಯಾಗಿದ್ದಾರೆ. ಅಲ್ಲದೇ ಈ ಜಿಲ್ಲೆಗಳಲ್ಲಿ ಡಜನ್‌ಗೂ ಹೆಚ್ಚು ಜನರಿಗೆ ಸಿಡಿಲಿನಿಂದಾಗಿ ಸುಟ್ಟಗಾಯಗಳಾಗಿವೆ. ಮೃತರಲ್ಲಿ 13 ಹಾಗೂ 14 ವರ್ಷ ಪ್ರಾಯದ ಮಕ್ಕಳು ಕೂಡ ಇದ್ದಾರೆ. ಹೊಲದಲ್ಲಿ ಕೆಲಸ ಮಾಡುತ್ತಿರುವಾಗ ಹಾಗೂ ಮೀನು ಹಿಡಿಯುತ್ತಿರುವಾಗ ಈ ಮಕ್ಕಳು ಸಿಡಿಲಿಗೆ ಬಲಿಯಾಗಿದ್ದಾರೆ. ಔರೈಯಾದಲ್ಲಿ 14 ವರ್ಷದ ಬಾಲಕ ಮಾವಿನ ಮರದ ಕೆಳಗೆ ಆಶ್ರಯ ಪಡೆಯುತ್ತಿದ್ದಾಗ ಸಿಡಿಲಿಗೆ ಬಲಿಯಾಗಿದ್ದಾನೆ. ದಿಯೋರಿಯಾದಲ್ಲಿ ಪೋಷಕರು ಇದ್ದ ಹೊಲದತ್ತ ಹೋಗುತ್ತಿದ್ದ ವೇಳೆ 5 ವರ್ಷದ ಬಾಲಕಿ ಸಿಡಿಲು ಬಡಿದು ಮೃತಪಟ್ಟಿದ್ದಾಳೆ. ವಾರಣಾಸಿಯಲ್ಲಿ ಇಬ್ಬರು ಸೋದರರು ಮೃತಪಟ್ಟಿದ್ದಾರೆ. ಈ ಮಧ್ಯೆ ಹವಾಮಾನ ಇಲಾಖೆಯೂ ರಾಜ್ಯಾದ್ಯಂತ ಮತ್ತಷ್ಟು ಮಳೆಯ ಮುನ್ಸೂಚನೆ ನೀಡಿದೆ. ಜೊತೆಗೆ ಉತ್ತರ ಪ್ರದೇಶಕ್ಕೆ ಹೊಂದಿಕೊಂಡಿರುವ ರಾಜ್ಯಗಳಲ್ಲೂ ಜೋರಾಗಿ ಮಳೆಯಾಗುವ ಸೂಚನೆ ನೀಡಿದೆ.

ಚೀನಾದಿಂದ ಪಾಕಿಸ್ತಾನಕ್ಕೆ ನಿಷೇಧಿತ ರಾಸಾಯನಿಕ ಸಾಗಿಸುತ್ತಿದ್ದ ಶಿಪ್‌ಮೆಂಟ್ ತಮಿಳ್ನಾಡಲ್ಲಿ ಜಪ್ತಿ

ಚೆನ್ನೈ: ಚೀನಾದಿಂದ ಅಶ್ರುವಾಯು ಮತ್ತು ಗಲಭೆ ನಿಯಂತ್ರಣ ಏಜೆಂಟ್‌ಗಳಿಗೆ ಬಳಸುವ ಅಂತರರಾಷ್ಟ್ರೀಯವಾಗಿ ನಿಷೇಧಿತ ರಾಸಾಯನಿಕಗಳನ್ನು ಪಾಕಿಸ್ತಾನಕ್ಕೆ ಸಾಗಿಸುತ್ತಿದ್ದ ಶಿಪ್‌ಮೆಂಟ್ ಅನ್ನು ತಮಿಳುನಾಡಿನ ಬಂದರಿನಲ್ಲಿ ಭದ್ರತಾ ಸಂಸ್ಥೆಗಳು ವಶಪಡಿಸಿಕೊಂಡಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಪಾಕಿಸ್ತಾನವು ತನ್ನ 'ಸ್ನೇಹಿತ' ಚೀನಾದ ಸಹಾಯದಿಂದ ಆಕ್ರಮಣಕಾರಿ ರಾಸಾಯನಿಕ ಮತ್ತು ಜೈವಿಕ ಯುದ್ಧಕ್ಕೆ ಯೋಜನೆ ರೂಪಿಸುತ್ತಿದೆ ಎಂದು ಆರೋಪಿಸಲಾಗಿದೆ. ಚೀನಾದ ಕಂಪನಿ, ಚೆಂಗ್ಡು ಶಿಚೆನ್ ಟ್ರೇಡಿಂಗ್ ಕಂ. ಲಿಮಿಟೆಡ್, ರಾವಲ್ಪಿಂಡಿ ಮೂಲದ ರಕ್ಷಣಾ ಪೂರೈಕೆದಾರರಾದ ರೊಹೇಲ್ ಎಂಟರ್‌ಪ್ರೈಸಸ್‌ಗೆ 'ಆರ್ಥೋ-ಕ್ಲೋರೋ ಬೆಂಜೈಲಿಡೆನ್ ಮಲೋನೋನಿಟ್ರಿಲ್' ಅನ್ನು ರವಾನಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸುಮಾರು 2560 ಕೆಜಿ ತೂಕದ ಶಿಪ್‌ಮೆಂಟ್‌ನಲ್ಲಿ 25 ಕೆಜಿಯ 103 ಡ್ರಮ್‌ಗಳಲ್ಲಿ ನಿಷೇಧಿತ ರಾಸಾಯನಿಕ ಸಂಗ್ರಹಿಸಲಾಗಿದೆ ಮತ್ತು 2024 ರ ಏಪ್ರಿಲ್ 18 ರಂದು ಚೀನಾದ ಶಾಂಘೈ ಬಂದರಿನಲ್ಲಿ ಲೋಡ್ ಮಾಡಲಾಗಿದೆ ಎಂದು ಅವರು ಹೇಳಿದ್ದಾರೆ. ಕರಾಚಿಗೆ ತೆರಳುತ್ತಿದ್ದ ಈ ಹಡಗು ಮೇ 08, 2024 ರಂದು ಕಟ್ಟುಪಲ್ಲಿ ಬಂದರನ್ನು(ತಮಿಳುನಾಡು) ತಲುಪಿತು.

ಮನೆಗೆ ನುಗ್ಗಿ ಚಿನ್ನಾಭರಣ ದೋಚಿದ ದುಷ್ಕರ್ಮಿಗಳು

ಮೈಸೂರಿನ ಸಿದ್ಧಿಖಿನಗರದಲ್ಲಿ ಬುಧವಾರ ಮುಂಜಾನೆ ಚಾಕು ತೋರಿಸಿ ದರೋಡೆ

ಮೈಸೂರು,ಜು.11(ಆರ್‌ಕೆ)- ಬಾಗಿಲು ಮುರಿದು ಮನೆಗೆ ನುಸುಳಿದ ಖದೀಮರಿಬ್ಬರು ಚಾಕು ತೋರಿಸಿ ಬೆದರಿಸಿ ನಗದು, ಚಿನ್ನ, ಬೆಳ್ಳಿ ಆಭರಣ ದೋಚಿ ಪರಾರಿಯಾಗಿರುವ ಘಟನೆ ಮೈಸೂರಿನ ಸಿದ್ಧಿಖಿನಗರದಲ್ಲಿ ಬುಧವಾರ ಮುಂಜಾನೆ ನಡೆದಿದೆ.

ಸಿದ್ಧಿಖಿನಗರ 1ನೇ ಮೇನ್‌ನಲ್ಲಿರುವ ಮೊಹಮದ್ ಬದ್ರೆ ಅಲಂ ಎಂಬುವರ ಮೂರು ಅಂತಸ್ತಿನ ಮನೆಗೆ ಜುಲೈ 10ರಂದು ಮುಂಜಾನೆ 3.45 ಗಂಟೆ ವೇಳೆ ನುಗ್ಗಿ ಖದೀಮರು, ಮೊದಲ ಮಹಡಿಯಲ್ಲಿ ಮಲಗಿದ್ದ ಮಗ ಮೊಹಮ್ಮದ್ ಉಜೈಫಾಗೆ ಚಾಕು ತೋರಿಸಿ, ಗಲಾಟೆ ಮಾಡಿದರೆ ಸಾಯಿಸುವುದಾಗಿ ಬೆದರಿಸಿದ್ದಾರೆ.



ನಂತರ ಕಬೋರ್ಡ್ ಶೋಧಿಸಿ ಅಲ್ಲಿದ್ದ 15000ರೂ ನಗದು, ಸಿಲ್ವರ್ ಚೈನ್, ಬ್ರೆಸ್‌ಲೆಟ್, ಉಂಗುರವನ್ನು ತೆಗೆದುಕೊಂಡರು. ನಂತರ ಪಕ್ಕದಲ್ಲಿದ್ದ ಮತ್ತೊಂದು ಬೆಡ್ ರೂಂ ಕಬೋರ್ಡ್‌ನಲ್ಲಿದ್ದ 30,000 ರೂ. ತೆಗೆದುಕೊಂಡು ಇಬ್ಬರೂ ಬೈಕ್‌ನಲ್ಲಿ ಪರಾರಿಯಾದರು ಎಂದು ಮೊಹಮದ್ ಉಜೈಫಾ ಪೊಲೀಸರಿಗೆ ದೂರು ನೀಡಿದ್ದಾರೆ.

ನಂತರ ನಾನು ಎರಡನೇ ಫ್ಲೋರ್‌ನಲ್ಲಿದ್ದ ಅಣ್ಣನನ್ನು ಎಬ್ಬಿಸಿಕೊಂಡು ನೆಲಮಹಡಿಗೆ ಬಂದು ತಂದೆ ತಾಯಿಯನ್ನು ಎಚ್ಚರಿಸಿ ನೋಡಲಾಗಿ ಅವರ ಬೆಡ್‌ರೂಂನ ವಾರ್ಡ್‌ರೋಬ್‌ನಲ್ಲಿದ್ದ 30ಗ್ರಾಂ ತೂಕದ ಎರಡು ಚಿನ್ನದ ಬಳೆಗಳು, 1,20,000 ರೂ ನಗದು ನಾಪತ್ತೆಯಾಗಿರುವುದು ತಿಳಿಯಿತು ಎಂದು ಉಜೈಫಾ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ತೆರಳಿದ ಎನ್‌ಆರ್ ಠಾಣೆ ಇನ್ಸ್‌ಪೆಕ್ಟರ್ ಲಕ್ಷ್ಮಿಕಾಂತ್ ತಳವಾರ ಹಾಗೂ ಸಿಬ್ಬಂದಿ ಮಹಜರು ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಶ್ವಾನದಳ, ಬೆರಳಚ್ಚು ಮುದ್ರೆ ಘಟಕದ ಸಿಬ್ಬಂದಿ ಸಹ ಘಟನಾ ಸ್ಥಳಕ್ಕೆ ತೆರಳಿ ಪರಿಶೀಲಿಸಿದರು. ಇಂದು ಬೆಳಿಗ್ಗೆ ಡಿಸಿಪಿ ಎಸ್.ಜಾಹ್ನವಿ ಭೇಟಿ ನೀಡಿದ್ದರು. ಮನೆಯಿಂದ ತುಸು ದೂರದಲ್ಲಿರುವ ಮನೆಯೊಂದರಲ್ಲಿರುವ ಸಿಸಿ ಕ್ಯಾಮೆರಾದಲ್ಲಿ ಮುಂಜಾನೆ 4 ಗಂಟೆ ವೇಳೆಗೆ ಬೈಕೊಂದು ಹಾದು ಹೋಗಿರುವ ದೃಶ್ಯ ಸೆರೆಯಾಗಿದೆ. ಸಿಸಿ ಕ್ಯಾಮರಾ ಫುಟೇಜಸ್ ಕಲೆ ಹಾಕಿರುವ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ದಾನಗಳಲ್ಲಿ ರಕ್ತದಾನ ಶ್ರೇಷ್ಠ: ಡಾ.ಯೋಗಣ್ಣ



ಸುಯೋಗ್ ಆಸ್ಪತ್ರೆಯಲ್ಲಿ ಜೀವಧಾರ ರಕ್ತನಿಧಿ ಕೇಂದ್ರದ ಸಹ ಯೋಗದಲ್ಲಿ ರಕ್ತದಾನ ಶಿಬಿರ ಏರ್ಪಡಿಸಲಾಗಿತ್ತು.

ಮೈಸೂರು, ಜು.11- ಸುಯೋಗ್ ಆಸ್ಪತ್ರೆಯಲ್ಲಿ ಜೀವಧಾರ ರಕ್ತನಿಧಿ ಕೇಂದ್ರದ ಸಹಯೋಗದಲ್ಲಿ ರಕ್ತದಾನ ಶಿಬಿರವನ್ನು ಗುರುವಾರ ಏರ್ಪಡಿಸಲಾಗಿತ್ತು.

ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ. ಯೋಗಣ್ಣ ಮಾತನಾಡಿ, ಡೆಂಗ್ಯೂ ಜ್ವರದಿಂದ ಬಳಲುತ್ತಿರುವ ರೋಗಿಗೆ ಬಿಳಿ ರಕ್ತಕಣಗಳು ಅತ್ಯವಶ್ಯಕವಾಗಿರುವುದರಿಂದ ರಕ್ತದಾನ ಮಾಡಲು ಆಗಿಂದಾಗ್ಗೆ ರಕ್ತದಾನ ಶಿಬಿರಗಳನ್ನು ಸುಯೋಗ್ ಆಸ್ಪತ್ರೆಯಿಂದ ಆಯೋಜಿಸಲಾಗುವುದು ಎಂದರು.

ದಾನಗಳಲ್ಲೆಲ್ಲ ಅತ್ಯಂತ ಶ್ರೇಷ್ಠವಾದುದು ರಕ್ತದಾನ ಎಂದ ಅವರು, ರಕ್ತವನ್ನು ಕೃತಕವಾಗಿ ತಯಾರಿಸಲು ಸಾಧ್ಯವಿಲ್ಲವಾದುದರಿಂದ ಅವಶ್ಯಕವಿರುವವರಿಗೆ ದಾನಿಗಳಿಂದ ರಕ್ತ ಪಡೆದು ನೀಡುವುದರ ಮೂಲಕ ಜೀವಗಳನ್ನು ಉಳಿಸಬೇಕೆಂದು ಕರೆಯಿತ್ತರು. ರಕ್ತ ನೀಡಿದರೆ ಕಾಯಿಲೆಗಳು ಉಂಟಾಗುತ್ತವೆ ಎಂಬ ಮೂಢನಂಬಿಕೆ ಅನೇಕ ಜನರಲ್ಲಿದ್ದು, ದೇಹದಲ್ಲಿ ಪ್ರತಿನಿತ್ಯ ರಕ್ತ ಪುನರೋತ್ಪತ್ತಿಯಾಗುವುದರಿಂದ ರಕ್ತದಾನದಿಂದ ಯಾವ ಹಾನಿಯೂ ಉಂಟಾಗುವುದಿಲ್ಲ ಎಂದರು.


ಪದ್ಮಶ್ರೀ ಪುರಸ್ಕೃತ ಡಾ.ಸುದೀಪ್ತ ಬ್ಯಾನರ್ಜಿ ಮಾತನಾಡಿದರು. ಶಿಬಿರದಲ್ಲಿ ಪಾಲ್ಗೊಂಡ ಸುಯೋಗ್ ಆಸ್ಪತ್ರೆ ಸಿಬ್ಬಂದಿ, ಕಾಲೇಜಿನ ವಿದ್ಯಾರ್ಥಿಗಳು ರಕ್ತದಾನ ನೀಡಿದರಲ್ಲದೆ ಅವರಿಗೆ ಪ್ರಮಾಣಪತ್ರ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಸುಯೋಗ್ ಆಸ್ಪತ್ರೆಯ ನಿರ್ದೇಶಕರಾದ ಡಾ.ಯಶಿತಾ ರಾಜ್ ಮುಂತಾದವರು ಪಾಲ್ಗೊಂಡಿದ್ದರು. ಪ್ರಾರಂಭದಲ್ಲಿ ಆಸ್ಪತ್ರೆಯ ಕಾರ್ಯ ನಿರ್ವಾಹಕ ಅಧಿಕಾರಿ ಸಾಗರ್ ಸ್ವಾಗತಿಸಿದರು.

ಸಮಾಜದ ಹಿರಿಯರೊಂದಿಗೆ ಶಾಸಕ ಟಿ.ಎಸ್.ಶ್ರೀವತ್ಸ ಚರ್ಚೆ



ಮೈಸೂರು ಅಶೋಕಪುರಂನ ಆದಿಕರ್ನಾಟಕ ಮಹಾ ಸಂಸ್ಥೆ ವತಿಯಿಂದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದ ನವೀಕರಣ ಹಾಗೂ ಇನ್ನಿತರ ಕಾಮಗಾರಿಗಳಿಗೆ ಒಟ್ಟು 6.45 ಕೋಟಿ ರೂ. ಬಿಡುಗಡೆಗೊಂಡಿರುವ ಸಂಬಂಧ ಶಾಸಕ ಟಿ.ಎಸ್.ಶ್ರೀವತ್ಸ ಅವರು ಸಮಾಜದ ಹಿರಿಯರೊಂದಿಗೆ ಚರ್ಚಿಸಿದರು. ಈ ವೇಳೆ ಸಂಸ್ಥೆಯ ಅಧ್ಯಕ್ಷ ಪಿ.ಸುನಿಲ್, ವಿಜಯ್‌ಕುಮಾರ್, ಶಿವಸ್ವಾಮಿ, ಚಿಕ್ಕ ಗರಡಿ ಅಧ್ಯಕ್ಷ ಗಂಗಾಧರ್, ದೊಡ್ಡ ಗರಡಿ ಅಧ್ಯಕ್ಷ ಪೈಲ್ವಾನ್ ಗೋವಿಂದರಾಜು, ರಾಜುಮೊಗ, ಜೈ ಜಯಕುಮಾರ, ವಿಶ್ವೇಶ್ವರಯ್ಯ, ಈಶ್ವರ್, ಕೃಷ್ಣ, ಜೋಗಿ ಮಹೇಶ್, ರವಿ, ನಾಗರಾಜ್ ಬಿಲ್ಲಯ್ಯ, ಸೋಮಸುಂದರ, ಜಯರಾಮ, ಮಧು ಇದ್ದರು.

ಭಾರತ ಮೂಲದ ಶಿವಾನಿ ರಾಜಾ ಬ್ರಿಟನ್ ಸಂಸತ್‌ನಲ್ಲಿ ಭಗವದ್ಗೀತೆ ಹೆಸರಲ್ಲಿ ಪ್ರಮಾಣ



ಲಂಡನ್: ಬ್ರಿಟನ್ ಸಂಸತ್ತಿಗೆ ಆಯ್ಕೆಯಾಗಿರುವ ಭಾರತೀಯ ಮೂಲದ ಶಿವಾನಿ ರಾಜಾ, ಭಗವದ್ಗೀತೆ ಮೇಲೆ ಪ್ರಮಾಣ ವಚನ ಸ್ವೀಕರಿಸಿ ಗಮನ ಸೆಳೆದಿದ್ದಾರೆ.

ಶಿವಾನಿ ಅವರು ಲೀಸೆಸ್ಟರ್ ಈಸ್ಟ್ ಕ್ಷೇತ್ರದಿಂದ ಸಂಸದೆಯಾಗಿ ಆಯ್ಕೆಯಾಗಿದ್ದಾರೆ. ಆ ಮೂಲಕ ಕಳೆದ 37 ವರ್ಷಗಳಲ್ಲಿ ಲೀಸೆಸ್ಟರ್ ಈಸ್ಟ್ ಕ್ಷೇತ್ರದಿಂದ ಆಯ್ಕೆಯಾದ ಕನ್ಸರ್ವೇಟಿವ್ ಪಕ್ಷದ ಮೊದಲ ಸಂಸದೆ ಎನಿಸಿದ್ದಾರೆ. ಬ್ರಿಟನ್ ಸಂಸತ್ತಿನಲ್ಲಿ ಜು.10ರಂದು ಪ್ರಮಾಣ ವಚನ ಸ್ವೀಕಾರ ಸಮಾರಂಭ ನಡೆಯಿತು. 'ಲೀಸೆಸ್ಟರ್ ಈಸ್ಟ್ ಕ್ಷೇತ್ರವನ್ನು ಪ್ರತಿನಿಧಿಸಿ ಸಂಸತ್ತಿಗೆ ಆಯ್ಕೆಯಾಗಿರುವುದಕ್ಕೆ ಹೆಮ್ಮೆಯಾಗುತ್ತಿದೆ' ಎಂದು ಗುಜರಾತ್ ಮೂಲದ ಶಿವಾನಿ ತಿಳಿಸಿದ್ದಾರೆ. ಬ್ರಿಟನ್ ಸಂಸತ್ತಿಗೆ ನಡೆದ ಚುನಾವಣೆಯಲ್ಲಿ ಕೀರ್ ಸ್ಟಾರ್ಮರ್ ನೇತೃತ್ವದ ಲೇಬರ್ ಪಕ್ಷ ಗೆಲುವು ಸಾಧಿಸಿತ್ತು.


ರಾಜ್ಯ ಸವಿತಾ ಸಮಾಜದ ಅಭಿವೃದ್ಧಿ ನಿಗಮಕ್ಕೆ ನೇಮಕ ಮಾಡಲು ಆಗ್ರಹ

ಮೈಸೂರು, ಜು.11(ಜಿಎ)-ಕರ್ನಾಟಕ ರಾಜ್ಯ ಸವಿತಾ ಸಮಾಜದ ಕಾರ್ಯಾಧ್ಯಕ್ಷರಾದ ಎಸ್.ಕಿರಣ್‌ಕುಮಾರ್ ಕಳೆದ 27 ವರ್ಷದಿಂದ ಕಾಂಗ್ರೆಸ್ ಪಕ್ಷದ ಸಕ್ರಿಯ ಕಾರ್ಯಕರ್ತರಾಗಿದ್ದಾರೆ. ಅಲ್ಲದೆ ಪಕ್ಷದ ಸಂಘಟನೆಗಾಗಿ ದುಡಿಯುತ್ತಿರುವ ಕಾರಣ ಇವರನ್ನು ರಾಜ್ಯ ಸವಿತಾ ಸಮಾಜ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ ನೇಮಕ ಮಾಡುವಂತೆ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಎ.ಎಂ.ನಾಗರಾಜು ಮನವಿ ಮಾಡಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಿರಣ್‌ಕುಮಾರ್ ಅವರು ಎಸ್.ಎಂ. ಕೃಷ್ಣ ಅವರು ಸಿಎಂ ಆಗಿದ್ದ ವೇಳೆ ಮೈಸೂರಿನಿಂದ ಬೆಂಗಳೂರುವರೆಗೆ ನಡುವೆ ಕಾವೇರಿ ಪಾದಯಾತ್ರೆಯಲ್ಲಿಯೂ ಭಾಗವಹಿಸಿದ್ದರು. ಜೊತೆಗೆ ಭಾರತ್ ಜೋಡೋ ಯಾತ್ರೆಯಲ್ಲಿಯೂ ಪಾಲ್ಗೊಂಡಿದ್ದರು. ಕೋವಿಡ್ ವೇಳೆ ಸಮುದಾಯದವರಿಗೆ ಸಾವಿರಾರು ಆಹಾರದ ಕಿಟ್ ವಿತರಿಸಿದ್ದಾರೆ. ಇದೇ ರೀತಿ ಸಮುದಾಯದವರಿಗಾಗಿ ಹಲವಾರು ಸೇವೆಗಳಲ್ಲಿ ತೊಡಗಿದ್ದಾರೆ. ಹೀಗಾಗಿ ಇವರನ್ನು ನಿಗಮಕ್ಕೆ ನೇಮಕ ಮಾಡುವುದರಿಂದ ಇನ್ನಷ್ಟು ಒಳಿತಾಗುತ್ತದೆ ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಸಮುದಾಯದ ಮುಖಂಡರಾದ ರಾಜೇಶ್, ಮಂಜು, ಧನರಾಜು, ಅಶೋಕ್, ಮಹೇಶ್, ಚಂದನ್, ನರಸಿಂಹಮೂರ್ತಿ, ಪುರುಷೋತ್ತಮ್, ರಾಜು, ಕೃಷ್ಣ ಉಪಸ್ಥಿತರಿದ್ದರು.

ಮನಸೂರೆಗೊಂಡ ಸ್ವರಾಲಯ ಸಾಂಸ್ಕೃತಿಕ ಹಬ್ಬ



ಮೈಸೂರಿನ ವೀಣೆ ಶೇಷಣ್ಣ ಭವನದಲ್ಲಿ ಸಾಂಸ್ಕೃತಿಕ ಹಬ್ಬ-2024 ಭಾಗ-2 ಅನ್ನು ಆಚರಿಸಲಾಯಿತು.

ಮೈಸೂರು, ಜು.11-ಮೈಸೂರಿನ ಆದಿಚುಂಚನಗಿರಿ ರಸ್ತೆಯಲ್ಲಿರುವ ಗಾನ ಭಾರತಿ (ವೀಣೆ ಶೇಷಣ್ಣ ಭವನ)ಯಲ್ಲಿ ಇತ್ತೀಚೆಗೆ ರಾಮಕೃಷ್ಣನಗರದಲ್ಲಿರುವ ಸ್ವರಾಲಯ ಸಂಗೀತ ಸಂಸ್ಥೆ ಬೆಂಗಳೂರಿನ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಇವರ ಸಹಯೋಗದೊಂದಿಗೆ ಸಾಂಸ್ಕೃತಿಕ ಹಬ್ಬ-2024 ಭಾಗ-2 ಅನ್ನು ಆಚರಿಸಲಾಯಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ಸಂಗೀತ ಶಿಕ್ಷಕಿ ವಿದುಷಿ ಶ್ರೀಮತಿ ಆರ್.ಲಲಿತಾ ನೆರವೇರಿಸಿದರು. ಮುಖ್ಯ ಅತಿಥಿಯಾಗಿ ಸಂಗೀತ ಶಿಕ್ಷಕಿ ವಿದುಷಿ ಶ್ರೀಮತಿ ಸುಬ್ಬಲಕ್ಷ್ಮಿ ಆಗಮಿಸಿದ್ದರು. ವಿಶೇಷ ಆಹ್ವಾನಿತರಾಗಿ ಸಂಗೀತ ಶಿಕ್ಷಕಿ ವಿದುಷಿ ಶ್ರೀಮತಿ ವಿಜಯಲಕ್ಷ್ಮಿ ಭಾಗವಹಿಸಿದ್ದರು.

ಅಧ್ಯಕ್ಷತೆಯನ್ನು ಸ್ವರಾಲಯ ಸಂಗೀತ ಸಂಸ್ಥೆ ಸಂಸ್ಥಾಪಕ ಅಧ್ಯಕ್ಷೆ ಹಾಗೂ ಸಂಗೀತ ಶಿಕ್ಷಕಿ ವಿದುಷಿ ಶ್ರೀಮತಿ ಡಾ.ಸುಮ ಹರಿನಾಥ್ ವಹಿಸಿದ್ದರು. ಸಂಸ್ಥೆ ಕಾರ್ಯದರ್ಶಿ ಶ್ರೀಮತಿ ಹೆಚ್.ಎಸ್.ಶ್ರೀಕಾಂತಾಮಣಿ ನಿರೂಪಿಸಿದರು. ಇದೇ ಸಂದರ್ಭದಲ್ಲಿ ಮೈಸೂರಿನ ನಾದವಿದ್ಯಾಲಯ ಅಕಾಡೆಮಿ ಆಫ್ ಮ್ಯೂಸಿಕ್ ಅಂಡ್ ಡ್ಯಾನ್ಸ್ ಸಂಸ್ಥಾಪಕ ಅಧ್ಯಕ್ಷ ವಿದ್ವಾನ್ ನವೀನ್ ಎಂ.ಎಸ್.ಅಂದಗಾರ್ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು.

ವೇದಿಕೆ ಕಾರ್ಯಕ್ರಮದ ನಂತರ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಚಾಮರಾಜನಗರ ಶ್ರೀ ಶಾರದಾ ನೃತ್ಯ ಕಲಾ ಶಾಲೆಯ ನಾಟ್ಯ ವಿದ್ವಾನ್ ಮಹೇಶ್ ವಿ. ಮತ್ತು ತಂಡದವರಿಂದ ನೃತ್ಯ ಸಂಭ್ರಮ ಸಭಿಕರ ಕಣ್ಮನ ಸೆಳೆಯಿತು. ತದ ನಂತರ ದಾಸರ ಪದಗಳ ಗಾಯನವನ್ನು ವಿದುಷಿ ಪದ್ಮ ಅವರ ನಿರ್ದೇಶನದಲ್ಲಿ ಕು.ಸುಕೃತಿ ವಿ. ಮತ್ತು ವೃಂದದವರಿಂದ ಪ್ರಸ್ತುತಪಡಿಸಲಾಯಿತು. ಪಿಟೀಲಿನಲ್ಲಿ ವಿದ್ವಾನ್ ಎಂ.ಆರ್. ಶ್ರೀಕಾಂತ್, ಮೃದಂಗದಲ್ಲಿ ವಿದ್ವಾನ್ ಎಂ.ಆರ್.ಉದಯಕುಮಾರ್ ಸಹಕಾರ ನೀಡಿದರು.

ಹೊಯ್ಸಳ ಕರ್ನಾಟಕ ಸಂಘದ ಸಂಸ್ಥಾಪಕರ ದಿನಾಚರಣೆ

ಮೈಸೂರು, ಜು.11(ಜಿಎ)-ಮೈಸೂರಿನ ಹೊಯ್ಸಳ ಕರ್ನಾಟಕ ಸಂಘದ ವತಿಯಿಂದ ಜು.14ರಂದು ಬೆಳಗ್ಗೆ 10 ಗಂಟೆಗೆ ವಿಜಯನಗರದ ಒಂದನೇ ಹಂತದಲ್ಲಿರುವ ಸಪ್ತಪದಿ ಕಲ್ಯಾಣ ಮಂಟಪದಲ್ಲಿ ಸಂಘದ ಸಂಸ್ಥಾಪಕರ ದಿನಾಚರಣೆ ಕಾರ್ಯಕ್ರಮ ನಡೆಯಲಿದೆ ಎಂದು ಅಧ್ಯಕ್ಷ ಕೆ.ಆರ್.ಸತ್ಯನಾರಾಯಣ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮದಲ್ಲಿ ಹೊಯ್ಸಳ ಕರ್ನಾಟಕ ಸಮುದಾಯದ 80 ವರ್ಷ ಮೇಲ್ಪಟ್ಟ 80 ಹಿರಿಯರಿಗೆ ಸನ್ಮಾನ, 20 ಮಂದಿ ಸಂಸ್ಥಾಪಕರ ಕುಟುಂಬದ ಸದಸ್ಯರಿಗೆ ಗೌರವ, 20ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, 20 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡುವ ಕಾರ್ಯಕ್ರಮ ನಡೆಯಲಿದೆ ಎಂದರು.

ಸಂಘದ ಧರ್ಮದರ್ಶಿಗಳಾದ ಪದ್ಮಭೂಷಣ ಡಾ.ಎಸ್.ಎಲ್.ಭೈರಪ್ಪ, ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ, ಕೃಷ್ಣರಾಜ ಕ್ಷೇತ್ರದ ಶಾಸಕರಾದ ಟಿ.ಎಸ್.ಶ್ರೀವತ್ಸ ಸೇರಿದಂತೆ ಶಾಸಕರು, ಸಮುದಾಯದ ಮುಖಂಡರು ಆಗಮಿಸಲಿದ್ದಾರೆ ಎಂದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು,ಜು.11(ಎಂಟಿವೈ)- ಕರ್ನಾಟಕ ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಂಘದ ಜಿಲ್ಲಾ ಶಾಖೆ ವತಿಯಿಂದ ಮೈಸೂರು ಜಿಲ್ಲೆಯ 2023-24ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ.80ಕ್ಕಿಂತ ಹೆಚ್ಚು ಅಂಕವನ್ನು ಪಡೆದು ಉತ್ತೀರ್ಣರಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರವನ್ನು ನೀಡಲಾಗುತ್ತಿದೆ. ಅರ್ಹ ವಿದ್ಯಾರ್ಥಿಗಳು ಅಗತ್ಯ ದಾಖಲೆಗಳನ್ನು ಜುಲೈ 25ರೊಳಗೆ ಸಲ್ಲಿಸಲು ಕೋರಲಾಗಿದೆ. ಹೆಚ್ಚಿನ ವಿವರಗಳಿಗೆ ಸಂಘದ ಉಪಾಧ್ಯಕ್ಷ ಮಹದೇವ ಮೊ: 9945616793, ಕಾರ್ಯದರ್ಶಿ ರಾಘವೇಂದ್ರ ಮೊ: 9741962104, ಖಜಾಂಚಿ ಮಹದೇವ ಮೊ: 9448710391 ಅವರನ್ನು ಸಂಪರ್ಕಿಸುವಂತೆ ತಿಳಿಸಲಾಗಿದೆ.

ಮೈಸೂರು ಜೆ.ಪಿ.ನಗರ ಲಯನ್ಸ್ ಕ್ಲಬ್ ಪದಾಧಿಕಾರಿಗಳ ಪದಗ್ರಹಣ



ಮೈಸೂರು ಜೆ.ಪಿ.ನಗರ ಲಯನ್ಸ್ ಕ್ಲಬ್‌ನ 2024-25ನೇ ಸಾಲಿನ ಪದವಿ ಪ್ರದಾನ ಸಮಾರಂಭದಲ್ಲಿ ಹಿರಿಯ ವೈದ್ಯ ಡಾ.ಷಡಕ್ಷರಮೂರ್ತಿ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಜು.11-ಮೈಸೂರು ಜೆ.ಪಿ. ನಗರ ಲಯನ್ಸ್ ಕ್ಲಬ್‌ನ 2024-25ನೇ ಸಾಲಿನ ನೂತನ ಅಧ್ಯಕ್ಷರಾದ ಲಯನ್ ಕೆ.ಸಿದ್ದಲಿಂಗಪ್ಪನವರಿಗೆ ಪದವಿ ಪ್ರದಾನ ಮಾಡಿ ಪ್ರತಿಜ್ಞಾವಿಧಿ ಬೋಧಿಸಿದರು.

ವಿಶ್ವೇಶ್ವರನಗರ ಖಾಸಗಿ ಹೋಟೆಲ್‌ನಲ್ಲಿ ನಡೆದ ಸಭೆಯಲ್ಲಿ ಲಯನ್ ವಿ.ಸತ್ಯ ನಾರಾಯಣ ಅವರಿಗೆ ಕ್ಲಬ್ಬಿನ ನೂತನ ಕಾರ್ಯದರ್ಶಿಯಾಗಿ ಹಾಗೂ ಲಯನ್ ಕೆ.ಸುರೇಶ್ ಅವರಿಗೆ ನೂತನ ಕೋಶಾಧ್ಯಕ್ಷರಾಗಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.

ಕೊರೊನಾ ಸಮಯದಲ್ಲಿ ಅಸಾಧಾರಣ ಸೇವೆ ಸಲ್ಲಿಸಿದ ವಿದ್ಯಾರಣ್ಯಪುರಂನ ಬಸಪ್ಪಾಜಿ ಕ್ಲಿನಿಕ್‌ನ ಹಿರಿಯ ವೈದ್ಯರಾದ ಡಾ.ಷಡಕ್ಷರಮೂರ್ತಿ ಅವರನ್ನು ವೈದ್ಯ ಮಾಸಾಚಾರಣ ಅಂಗವಾಗಿ ಅವರ ಸೇವೆಯನ್ನು ಸ್ಮರಿಸಿ, ಸನ್ಮಾನಿಸಲಾಯಿತು.

ಕಾರ್ಯಕ್ರಮದ ಅಂಗವಾಗಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇಕಡಾ 96 ಅಂಕ ಪಡೆದ ಅನನ್ಯಾಗೆ ಪ್ರೋತ್ಸಾಹ ಧನ ನೀಡುವುದರೊಂದಿಗೆ 77 ವರ್ಷದ ಹಿರಿಯ ನಾಗರಿಕರಾದ ಸಾವಿತ್ರಮ್ಮ ನಾಗಪ್ಪ ದಂಪತಿ ಗೌರವಿಸಲಾಯಿತು. ಕಾರ್ಯಕ್ರಮದ ಆರಂಭದಲ್ಲಿ ನೃತ್ಯ ಶಿಕ್ಷಕರಾದ ಶ್ರೀಧರ್ ಜೈನ್‌ರವರ ಶಿಷ್ಯೆ ಕುಮಾರಿ ಕೆ.ಬಿ.ವೇದಿಕಾ ವಿಶೇಷ ನೃತ್ಯ ಕಾರ್ಯಕ್ರಮ ನೀಡಿದರು.

ಬೋಗಾದಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಪಾವತಿಗೆ ಶೇ.5ರಷ್ಟು ರಿಯಾಯಿತಿ

ಮೈಸೂರು,ಜು.11-ಬೋಗಾದಿ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ 2024-25 ಸಾಲಿನ ಪೂರ್ಣ ಪ್ರಮಾಣದ ಆಸ್ತಿ ತೆರಿಗೆ ಪಾವತಿಸುವವರಿಗೆ ಶೇ.5ರಷ್ಟು ರಿಯಾಯಿತಿ ನೀಡಲಾಗುವುದು ಎಂದು ಬೋಗಾದಿ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಬಸವರಾಜು ತಿಳಿಸಿದ್ದಾರೆ.

ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಪಾವತಿಯನ್ನು ಪರಿಣಾಮಕಾರಿಯಾಗಿ ಹೆಚ್ಚಿಸಲು ಹಾಗೂ ಸ್ವಯಂ ತೆರಿಗೆ ಪಾವತಿಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ (ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳ) ಆರ್ಥಿಕ ವರ್ಷದ ಪ್ರಾರಂಭದ 30 ದಿನಗಳಲ್ಲಿ ಪೂರ್ಣ ಪ್ರಮಾಣದ ಆಸ್ತಿ ತೆರಿಗೆ ಪಾವತಿ ಮಾಡಿದಲ್ಲಿ ಶೇ.5ರಷ್ಟು ರಿಯಾಯಿತಿ ನೀಡಲು ಕಲ್ಪಿಸಿರುವ ಅವಕಾಶದ ಅವಧಿಯನ್ನು ಜು.31ರವರೆಗೆ ವಿಸ್ತರಿಸುವಂತೆ ರಾಜ್ಯ ಸರ್ಕಾರ ಸೂಚಿಸಿರುವುದರಿಂದ ಈ ಅವಕಾಶ ಕಲ್ಪಿಸಲಾಗಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮುಡಾ ಮುತ್ತಿಗೆ ಹಾಕುವ ಬಿಜೆಪಿ ಮುಖಂಡರಿಗೇ ಮುತ್ತಿಗೆ!

ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಘೋಷಣೆ

ಮೈಸೂರು, ಜು.11(ಎಂಟಿವೈ)- ರಾಜಕೀಯ ಉದ್ದೇಶದಿಂದ ಮುಡಾಗೆ ಮುತ್ತಿಗೆ ಹಾಕಲು ಬರುವ ಬಿಜೆಪಿ ಮುಖಂಡರಿಗೆ ಕಾಂಗ್ರೆಸ್ ವತಿಯಿಂದ ಮುತ್ತಿಗೆ ಹಾಕುತ್ತೇವೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಘೋಷಿಸಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿಯವರು ಮುಡಾ ವಿಚಾರವನ್ನು ರಾಜಕೀಯವಾಗಿ ಬಳಸಿಕೊಳ್ಳುತ್ತಿದ್ದಾರೆ. ಯಾವುದೇ ದಾಖಲೆ ಇಲ್ಲದೇ ಬಿಜೆಪಿಯವರು ಸುಳ್ಳು ಆರೋಪ ಮಾಡುತ್ತಿದ್ದಾರೆ. ಜನರನ್ನು ದಿಕ್ಕು ತಪ್ಪಿಸುವುದರೊಂದಿಗೆ ಸರ್ಕಾರದ ವಿರುದ್ಧ ಅಪಪ್ರಚಾರ ಮಾಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಬಿಜೆಪಿ ಕಾರ್ಯಕರ್ತರು ಹಾಗೂ ಮುಖಂಡರ ವರ್ತನೆ ಖಂಡಿಸಿ ನಾಳೆ(ಜು.12) ಬೆಳಗ್ಗೆ 10 ಗಂಟೆಗೆ ಮುಡಾ ಆವರಣದಲ್ಲಿ ಪ್ರತಿಭಟನೆ ಮಾಡುತ್ತೇವೆ ಎಂದು ಹೇಳಿದರು.

ಬಿ.ವೈ.ವಿಜಯೇಂದ್ರ 2019ರಲ್ಲಿ ಪರ್ಯಾಯ ಸರ್ಕಾರ ನಡೆಸುತ್ತಿದ್ದಾರೆ ಎಂದು ಬಿಜೆಪಿ ನಾಯಕರು ಹೈಕಮಾಂಡ್‌ಗೆ ಪತ್ರ ಬರೆದಿದ್ದರು. 50 ಸಾವಿರ ಕೋಟಿ ಲೂಟಿ ಮಾಡಿದ್ದಾರೆಂದು ಆಪಾದಿಸಿದ್ದರು. ಇದನ್ನು ತನಿಖೆಗೆ ಕೊಡುವಂತೆ ಲಕ್ಷ್ಮಣ್ ಒತ್ತಾಯಿಸಿದರು.



ದೇಶದ ಸ್ವಚ್ಛವಾದ 10 ಮುಖ್ಯಮಂತ್ರಿಗಳಲ್ಲಿ ಸಮಾಜವಾದಿ ಹಿನ್ನೆಲೆಯ ಸಿದ್ದರಾಮಯ್ಯ ನಂ.1 ಸ್ಥಾನದಲ್ಲಿದ್ದಾರೆ. ಅವರನ್ನು ತೇಜೋವಧೆ ಮಾಡಲು ಬಿಜೆಪಿ ನಾಯಕರು ಆರೋಪ ಮಾಡುತ್ತಿದ್ದಾರೆ. ಇದು ನಾಚಿಕೆಗೇಡು ಎಂದು ಕಿಡಿಕಾರಿದರು.

ಕಾಂಗ್ರೆಸ್ ಗ್ರಾಮಾಂತರ ಅಧ್ಯಕ್ಷ ಡಾ.ಬಿ.ಜೆ. ವಿಜಯ್‌ಕುಮಾರ್ ಮಾತನಾಡಿ, ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಭ್ರಷ್ಟಾಚಾರದ ಕಿಂಗ್. ಈ ಹಿಂದೆ ಆರ್‌ಟಿಜಿಎಸ್ ಮೂಲಕ ಹಣ ಪಡೆದಿರುವ ಕರಪ್ಶನ್ ಕಿಂಗ್ ಎನಿಸಿದ್ದಾರೆ. ಬಿಜೆಪಿ ನಾಯಕರಿಗೆ ಪ್ರತಿಭಟನೆ ಮಾಡಲು ನೈತಿಕತೆ ಇಲ್ಲ. ಕೋವಿಡ್ ವೇಳೆ 22 ಸಾವಿರ ಕೋಟಿ ರೂ. ಭ್ರಷ್ಟಾಚಾರದ ಮಾಡಿರುವುದಾಗಿ ಬಿಜೆಪಿ ನಾಯಕರು ಹೈಕಮಾಂಡ್‌ಗೆ ಪತ್ರ ಬರೆದಿದ್ದಾರೆ. ಇಂಥವರು ನಿಷ್ಕಳಂಕ ರಾಜಕಾರಣ ಮಾಡುತ್ತಿರುವ ಸಿದ್ದರಾಮಯ್ಯ ವಿರುದ್ಧ ಪ್ರತಿಭಟನೆ ಮಾಡುತ್ತಿದ್ದಾರೆ. ಮುಡಾ ಕಚೇರಿ ಬಲಭಾಗದಲ್ಲಿ ಪ್ರತಿಭಟನೆ ಮಾಡಲು ಅವಕಾಶ ನೀಡುವಂತೆ ಪೊಲೀಸರಿಗೆ ಕೇಳಿದ್ದೇವೆ. ಬಿಜೆಪಿ ವಿರುದ್ಧದ ಪ್ರತಿಭಟನೆಯಲ್ಲಿ ಜಿಲ್ಲೆಯ ಎಲ್ಲ ಶಾಸಕರು, ಎಲ್ಲ ಹಂತದ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ ಎಂದರು.

ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಮಾತನಾಡಿ, ಮುಡಾದಲ್ಲಿ ಕಳೆದ ನಾಲ್ಕು ವರ್ಷ ಹಿಂದೆಯೇ ಭಾರಿ ಪ್ರಮಾಣದಲ್ಲಿ ಭ್ರಷ್ಟಾಚಾರ ನಡೆದಿದೆ. ಆದರೆ, ಕೇವಲ ಸುಳ್ಳು ಮಾಹಿತಿ ನೀಡುವುದಕ್ಕಾಗಿ ಮುಖ್ಯಮಂತ್ರಿಗಳ ಕುಟುಂಬದ ವಿರುದ್ಧ ಅಪಪ್ರಚಾರ ನಡೆಸುತ್ತಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಮಾಜಿ ಮೇಯರ್ ಆರೀಫ್ ಹುಸೇನ್, ಜಿ.ಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಮುಖಂಡರಾದ ಪ್ರದೀಪ್‌ಕುಮಾರ್, ಎಂ.ಶಿವಣ್ಣ, ಗಿರೀಶ್, ಮಹದೇವ, ಮಾಧ್ಯಮ ವಕ್ತಾರ ಕೆ.ಮಹೇಶ್ ಇದ್ದರು.

ಕಾಲಮಿತಿಯಲ್ಲಿ ಕೇಂದ್ರದ ಯೋಜನೆ ಅನುಷ್ಠಾನಗೊಳಿಸಿ

ದಿಶಾ ಸಭೆಯಲ್ಲಿ ಅಧಿಕಾರಿಗಳಿಗೆ ಸಂಸದ ಯದುವೀರ್ ಸೂಚನೆ

ಮಡಿಕೇರಿ, ಜು.11–ಕೇಂದ್ರ ಪುರಸ್ಕೃತ ಯೋಜನೆಗಳನ್ನು ಸಮರ್ಪಕವಾಗಿ ಕಾಲಮಿತಿಯೊಳಗೆ ಪ್ರಗತಿ ಸಾಧಿಸಬೇಕು ಎಂದು ಕೊಡಗು–ಮೈಸೂರು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಆಯಾ ಇಲಾಖೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಗುರುವಾರ ನಡೆದ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ (ದಿಶಾ) ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜಲಜೀವನ್, ರಾಷ್ಟ್ರೀಯ ತೋಟಗಾರಿಕೆ, ಪ್ರಧಾನಮಂತ್ರಿ ಆವಾಜ್ ಯೋಜನೆ, ಸ್ವಚ್ಛ ಭಾರತ್ ಮಿಷನ್, ಎನ್‌ಆರ್‌ಎಲ್‌ಎಂ, ಸಂಜೀವಿನಿ, ಲೀಡ್ ಬ್ಯಾಂಕ್ ವತಿಯಿಂದ ಹಲವು ಯೋಜನೆಗಳನ್ನು ಕೇಂದ್ರಸರ್ಕಾರ ಜಾರಿಗೊಳಿಸಿದೆ. ಜಲಜೀವನ್ ಮಿಷನ್ ಯೋಜನೆಯಡಿ ಪ್ರತಿ ಮನೆಗೂ ನದಿ ಸೇರಿದಂತೆ ಮತ್ತಿತರ ಜಲ ಮೂಲಗಳಿಂದ ಕಡ್ಡಾಯವಾಗಿ ನಲ್ಲಿ ನೀರು ಸಂಪರ್ಕ ಕಲ್ಪಿಸಬೇಕು ಎಂದು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ವಿಧಾನಪರಿಷತ್ ಸದಸ್ಯ ಎಂ.ಪಿ.ಸುಜಾ ಕುಶಾಲಪ್ಪ ಮಾತನಾಡಿ, ವಿರಾಜಪೇಟೆ ತಾಲೂಕಿನ ಚೆಂಬೆಬೆಳ್ಳೂರು, ಒಂಟಿಯಂಗಡಿ ಮತ್ತಿತರ ಕಡೆಗಳಲ್ಲಿ ನಲ್ಲಿ ನೀರು ಸಂಪರ್ಕ ಪರಿಪೂರ್ಣವಾಗಿ ಅನುಷ್ಠಾನಗೊಂಡಿಲ್ಲ. ಜಲಜೀವನ್ ಮಿಷನ್ ಯೋಜನೆ ಕಾಮಗಾರಿ ಸಂಬಂಧಿಸಿದಂತೆ ಜಿಲ್ಲಾ ಮಟ್ಟದ ಇಂಜಿನಿಯರ್‌ಗಳು ಖುದ್ದಾಗಿ ಭೇಟಿ ನೀಡಿ, ಪರಿಶೀಲಿಸಿ ವರದಿ ನೀಡಬೇಕು. ಅದನ್ನು ಬಿಟ್ಟು ಸ್ಥಳಕ್ಕೆ ಭೇಟಿ ನೀಡದೆ ಮಾಹಿತಿ ನೀಡುವುದು ಸರಿಯಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಜಿಲ್ಲಾಧಿಕಾರಿ ವೆಂಕಟ್ ರಾಜಾ ಮಾತನಾಡಿ, ಹಿಂದೆ ಕಟಾವು ಮಾಡಿದ ಮರದ ದಿಮ್ಮಿಗಳನ್ನು ಸಣ್ಣ ವಾಹನಗಳಲ್ಲಿ ಸಾಗಿಸುತ್ತಿದ್ದಾರೆ. ಈ ಬಗ್ಗೆ ಅಗತ್ಯ ಕ್ರಮ ವಹಿಸಲಾಗುವುದು ಎಂದರು.

ಸಭೆಯಲ್ಲಿ ಶಾಸಕ ಡಾ.ಮಂತರ್‌ಗೌಡ, ಜಿಪಂ ಸಿಇಓ ಆನಂದ್ ಪ್ರಕಾಶ್ ಮೀನಾ, ಅಪರ ಜಿಲ್ಲಾಧಿಕಾರಿ ಬಿ.ಎಸ್.ವೀಣಾ, ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸುಂದರ ರಾಜ್, ಉಪವಿಭಾಗಾಧಿಕಾರಿ ವಿನಾಯಕ ನರ್ವಾಡೆ, ಲೋಕೋಪಯೋಗಿ ಇಲಾಖೆ ಇಇ ಸಿದ್ದೇಗೌಡ, ಸೆಸ್ಕ್ ಇಇ ಅನಿತಾ ಬಾಯಿ, ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಯೋಗೇಶ್, ಲೀಡ್ ಬ್ಯಾಂಕ್ ವ್ಯವಸ್ಥಾಪಕ ಗಂಗಾಧರ ನಾಯಕ್, ಉಪ ಅರಣ್ಯ ಸಂರಕ್ಷಣಾಧಿಕಾರಿ ಜಗನ್ನಾಥ್ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಇದ್ದರು.



ಮಡಿಕೇರಿ ಜಿಪಂ ಸಭಾಂಗಣದಲ್ಲಿ ನಡೆದ ದಿಶಾ ಸಭೆಯಲ್ಲಿ ಕೊಡಗು–ಮೈಸೂರು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿದರು.

ಜಿಲ್ಲೆಯಲ್ಲಿ 125 ಡೆಂಗ್ಯೂ ಪ್ರಕರಣ

ಜಿಲ್ಲೆಯಲ್ಲಿ 125 ಡೆಂಗ್ಯೂ ಪ್ರಕರಣಗಳು ದಾಖಲಾಗಿದ್ದು, ಪೊನ್ನಂಪೇಟೆ ಹಾಗೂ ಕುಶಾಲನಗರದಲ್ಲಿ ಹೆಚ್ಚಾಗಿ ಡೆಂಗ್ಯೂ ಕಂಡುಬಂದಿದೆ. 4 ಪ್ರಕರಣಗಳು ಪಾಸಿಟಿವ್ ಇದ್ದು, 1 ಪ್ರಕರಣವನ್ನು ಹೊರ ಜಿಲ್ಲೆಗೆ ಕಳುಹಿಸಲಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸತೀಶ್ ಕುಮಾರ್ ಮಾಹಿತಿ ನೀಡಿದರು.

ನಂತರ ಮಾತನಾಡಿದ ಜಿಲ್ಲಾಧಿಕಾರಿ ವೆಂಕಟ್ ರಾಜಾ, ಜಿಲ್ಲೆಯ ಎಲ್ಲೆಡೆ ಲಾರ್ವ ಸರ್ವೇ ನಡೆಸಲಾಗುತ್ತಿದೆ. ನಗರ, ಪಟ್ಟಣ ಪ್ರದೇಶಗಳಲ್ಲಿ ಕಿಂಗ್ ಫಾಗಿಂಗ್ ಸಿಂಪಡಿಸಲಾಗುವುದು ಎಂದರು. ಮಡಿಕೇರಿಯಲ್ಲಿ ಕ್ರಿಟಿಕಲ್ ಕೇರ್ ಸೆಂಟರ್ ಆರಂಭ ಬಗ್ಗೆ ಮಾಹಿತಿ ಪಡೆದ ಸಂಸದರು, ಶೀಘ್ರ ಕಾಮಗಾರಿ ಕೈಗೊಳ್ಳುವಂತೆ ಸೂಚಿಸಿದರು. ಸಂಚಾರಿ ಆರೋಗ್ಯ ಗಿರಿಜನ ಘಟಕವನ್ನು ಬಲಪಡಿಸುವಂತೆ ನಿರ್ದೇಶನ ನೀಡಿದರು.

ಕಾಡಾನೆಗಳ ಸ್ಥಳಾಂತರ ಮಾಡಲಾಗುವುದು

ಜಿಲ್ಲೆಯಲ್ಲಿ ಕಾಡಾನೆಗಳ ಉಪಟಳ ಹೆಚ್ಚಾಗಿದ್ದು, ರ್‍ಯಾಪಿಡ್ ರೆಸ್ಪಾನ್ಸ್ ತಂಡ ಬಲಪಡಿಸುವ ಜೊತೆಗೆ ಅಗತ್ಯ ಬ್ಯಾರಿಕೇಡ್‌ಗಳನ್ನು ಅಳವಡಿಸಲಾಗುವುದು. ಹಾಗೆಯೇ ಕಾಡಾನೆಗಳನ್ನು ಸ್ಥಳಾಂತರಿಸಲಾಗುವುದು ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ಭಾಸ್ಕರ್ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸುಜಾ ಕುಶಾಲಪ್ಪ, ಕಾಡಾನೆ ಹಾವಳಿಯನ್ನು ಸ್ಥಳೀಯರ ಸಹಕಾರದಿಂದ ನಿಯಂತ್ರಿಸುವಂತೆ ಸಲಹೆ ನೀಡಿದರು.

ಸಂಸದ ಯದುವೀರ್, ಅರಣ್ಯ ಪ್ರದೇಶಗಳಲ್ಲಿ ಲಾಂಟನಾಗಳು ಹೆಚ್ಚಾಗಿ ಬೆಳೆದಿದ್ದು, ಇವುಗಳನ್ನು ತೆರವುಗೊಳಿಸಬೇಕು. ತಲಕಾವೇರಿ ಸೂಕ್ಷ್ಮ ವನ್ಯಜೀವಿ ಪ್ರದೇಶದಲ್ಲಿ ಮರ ಕಡಿದಿರುವ ಬಗ್ಗೆ ವರದಿಯಾಗಿದ್ದು, ಈ ಬಗ್ಗೆ ಅಗತ್ಯ ಕ್ರಮ ವಹಿಸುವಂತೆ ಅರಣ್ಯಾಧಿಕಾರಿಗಳಿಗೆ ಸೂಚಿಸಿದರು.

ಮುಡಾ ಹಗರಣ ಸಿಬಿಐ ತನಿಖೆಗೆ ವಹಿಸಲಿ

ಮಡಿಕೇರಿ, ಜು.11–ಮೈಸೂರಿನಲ್ಲಿ ಬಡವರಿಗೆ ನಿವೇಶನ ನೀಡಲು ಹುಟ್ಟುಹಾಕಿದ್ದ ಮುಡಾ ಇದೀಗ ಶ್ರೀಮಂತರ ಸಂಸ್ಥೆಯಾಗಿ ಮಾರ್ಪಟ್ಟಿದೆ. ಮುಡಾ ಹಗರಣವನ್ನು ಸಿಬಿಐ ತನಿಖೆಗೆ ವಹಿಸಬೇಕು ಎಂದು ಕೊಡಗು–ಮೈಸೂರು ಸಂಸದ ಯದುವೀರ್ ಕೃಷ್ಣದತ್ತ ಚಾಮ ರಾಜ ಒಡೆಯರ್ ಆಗ್ರಹಿಸಿದರು.



ಸಂಸದ ಯದುವೀರ್

ಇಲ್ಲಿನ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಗುರುವಾರ ನಡೆದ ದಿಶಾ ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ವಾಲ್ಮೀಕಿ ನಿಗಮದ ಭ್ರಷ್ಟಾಚಾರ ಸಹಿತ ಮೈಸೂರಿನ ಮುಡಾ ನಿವೇಶನಗಳ ಹಗರಣವನ್ನು ಅತ್ಯಂತ ಗಂಭೀರ ಪ್ರಕರಣಗಳಾಗಿವೆ. ರಾಜ್ಯ ಸರ್ಕಾರದ ಆಡಳಿತ ವೈಫಲ್ಯಗಳಿಂದ ಇಂತಹ ಹಗರಣಗಳು ನಡೆಯಲು ಕಾರಣವಾಗಿವೆ. ಈ ಬಗ್ಗೆ ಬಿಜೆಪಿ ವತಿಯಿಂದ ಹೇಳಿಕೆಗಳ ಸಹಿತ ಪ್ರತಿಭಟನೆಗಳನ್ನು ಕೂಡ ನಡೆಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಮುಡಾ ಹಗರಣದ ಮುಕ್ತ ತನಿಖೆಗಾಗಿ ಸಿಬಿಐಗೆ ಹಸ್ತಾಂತರಿಸಬೇಕು ಎಂದು ಒತ್ತಾಯಿಸಿದರು.

ಕೊಡಗು ಜಿಲ್ಲೆಯಲ್ಲಿ ಹಕ್ಕುಪತ್ರ ವಿತರಣೆ, ಬಿಎಸ್‌ಎನ್‌ಎಲ್ ಟವರ್‌ಗಳನ್ನು '4ಜಿ' ಆಗಿ ಮಾರ್ಪಡಿಸುವಂತೆ ಸಾರ್ವಜನಿಕರಿಂದ ಮನವಿಗಳು ಬಂದಿವೆ. ಈ ಸಂಬಂಧ ಅಧಿಕಾರಿಗಳೊಂದಿಗೆ ಚರ್ಚಿಸಿ ಸಮಸ್ಯೆ ಪರಿಹಾರಕ್ಕೆ ಸೂಚಿಸಲಾಗಿದೆ. ಜಿಲ್ಲೆಯಲ್ಲಿ ವನ್ಯಜೀವಿ ಮತ್ತು ಮಾನವ ಸಂಘರ್ಷ ತಡೆಗೆ ಅರಣ್ಯಾಧಿಕಾರಿಗಳೊಂದಿಗೆ ಚರ್ಚಿಸಲಾಗಿದೆ. ಅರಣ್ಯದಂಚಿನ ಗ್ರಾಮಗಳಲ್ಲಿ ರೈಲ್ವೆ ಬ್ಯಾರಿಕೇಡ್ ಅಳವಡಿಕೆಯಿಂದ ಒಂದಷ್ಟು ಯಶಸ್ಸು ಕಂಡಿದೆ. 150ಕ್ಕೂ ಹೆಚ್ಚು ಆನೆಗಳು ಕಾಡಿನಿಂದ ಹೊರ ಬಂದು ಹಾವಳಿ ಮಾಡುತ್ತಿದ್ದು, ಅವುಗಳನ್ನು ಗುರುತಿಸಲು ಸೂಚಿಸಲಾಗಿದೆ. ಕಾಡಾನೆಗಳನ್ನು ಸ್ಥಳಾಂತರಿಸಿ ಸೂಕ್ತ ಪುನರ್ವಸತಿ ಕಲ್ಪಿಸುವ ನಿಟ್ಟಿನಲ್ಲಿ ಯೋಜನೆ ಸಿದ್ಧಪಡಿಸಲು ಅರಣ್ಯಾಧಿಕಾರಿಗಳಿಗೆ ಸೂಚಿಸಲಾಗಿದೆ. ವನ್ಯಜೀವಿ ತಜ್ಞರು ಹಾಗೂ ಅರಣ್ಯಾಧಿಕಾರಿಗಳ ಜೊತೆ ಚರ್ಚಿಸಿ ಅದಕ್ಕೆ ಶಾಶ್ವತ ಯೋಜನೆ ರೂಪಿಸಲಾಗುವುದು ಎಂದು ಹೇಳಿದರು.

ಯೋಜನೆ ಪೂರ್ಣಗೊಳಿಸಲು ಕ್ರಮ: ಈಗಾಗಲೇ ಮೈಸೂರು–ಕುಶಾಲನಗರ ರಾಷ್ಟ್ರೀಯ ಹೆದ್ದಾರಿ ಯೋಜನೆಗೆ ಅನುಮೋದನೆ ದೊರಕಿದೆ. ಅದರೊಂದಿಗೆ ಬೆಳಗೊಳ–ಕುಶಾಲನಗರ ರೈಲ್ವೆ ಯೋಜನೆಯ ಡಿಪಿಆರ್ ಸಿದ್ಧವಾಗಿದ್ದು, ಕೇಂದ್ರದ ಬಳಿ ಇದೆ. ಬಹುಪಥ ಹೆದ್ದಾರಿ ಯೋಜನೆಯ ಟೆಂಡರ್ ಪ್ರಕ್ರಿಯೆಗಳು ಚಾಲ್ತಿಯಲ್ಲಿದ್ದು, ಸದ್ಯದಲ್ಲೇ ಯೋಜನೆ ಅನುಷ್ಠಾನಕ್ಕೆ ಬರಲಿದೆ. ರೈಲ್ವೆ ಯೋಜನೆ ಸಹಿತ ಕೇಂದ್ರ ಸರ್ಕಾರದ ಗ್ರಾಮ್ ಸಡಕ್ ಯೋಜನೆಗಳನ್ನು ಕೂಡ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ಈ ಸಂದರ್ಭ ವಿಧಾನಪರಿಷತ್ ಸದಸ್ಯ ಸುಜಾ ಕುಶಾಲಪ್ಪ ಇದ್ದರು.

ಶೆಡ್ ಧ್ವಂಸಗೊಳಿಸಿದ ಕಾಡಾನೆ



ಕಾಡಾನೆ ದಾಳಿಗೆ ಧ್ವಂಸಗೊಂಡಿರುವ ಶೆಡ್.

ಮಡಿಕೇರಿ, ಜು.11–ವ್ಯಕ್ತಿಯನ್ನು ಅಟ್ಟಾಡಿಸಿ ಆತಂಕ ಸೃಷ್ಟಿಸಿದ ಕಾಡಾನೆ ಶೆಡ್ ಅನ್ನು ಧ್ವಂಸಗೊಳಿಸಿದ ಘಟನೆ ಮಡಿಕೇರಿ ತಾಲೂಕಿನ ಊರುಬೈಲು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಪಲ್ತಾಡು ದೇವಸ್ಯ ರವಿ ಅವರು ರಬ್ಬರ್ ಟ್ಯಾಪಿಂಗ್ ಕೆಲಸ ಮುಗಿಸಿ ಶೆಡ್‌ಗೆ ಹಿಂತಿರುಗುತ್ತಿದ್ದಾಗ ಕಾಡಾನೆ ದಿಢೀರ್ ಪ್ರತ್ಯಕ್ಷವಾಗಿದೆ. ರವಿ ಮೇಲೆ ದಾಳಿಗೆ ಯತ್ನಿಸಿದಾಗ ಓಡಿ ಹೋಗಿದ್ದಾರೆ. ಆದರೆ, ಆನೆ ಪಕ್ಕದಲ್ಲೇ ಇದ್ದ ಶೆಡ್ ಧ್ವಂಸಗೊಳಿಸಿ ಅಲ್ಲಿಂದ ಹೊರಟು ಹೋಗಿದೆ.

15 ದಿನಗಳಿಂದ ಊರುಬೈಲು ಮತ್ತು ಅಕ್ಕಪಕ್ಕದ ಗ್ರಾಮಗಳಲ್ಲಿ ಕಾಡಾನೆ ಹಾವಳಿ ಮಿತಿ ಮೀರಿದೆ. ಅರಣ್ಯ ಇಲಾಖೆಗೆ ಮಾಹಿತಿ ನೀಡಿದರೂ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲವೆಂದು ಗ್ರಾಮಸ್ಥರು ಆರೋಪಿಸಿದ್ದಾರೆ. ಕಾಡಾನೆ ಉಪಟಳ ತಡೆಗೆ ಅರಣ್ಯಾಧಿಕಾರಿಗಳು ತುರ್ತು ಕ್ರಮ ಕೈಗೊಂಡು, ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಬೇಕು ಮತ್ತು ಆನೆ ದಾಳಿಯಿಂದ ಉಂಟಾದ ಹಾನಿಗೆ ತಕ್ಷಣ ಪರಿಹಾರ ನೀಡಬೇಕೆಂದು ಸಾಮಾಜಿಕ ಕಾರ್ಯಕರ್ತ ಹಾಗೂ ಗ್ರಾಮಸ್ಥ ರಜಿತ್ ಪಲ್ತಾಡು ದೇವಸ್ಯ ಒತ್ತಾಯಿಸಿದ್ದಾರೆ.

ಕಾಡಾನೆ ಹಾವಳಿ ತಡೆಗೆ ಆಗ್ರಹಿಸಿ ಪ್ರತಿಭಟನೆ



ಕಾಡಾನೆ ಹಾವಳಿ ತಡೆಗೆ ಆಗ್ರಹಿಸಿ ನರಿಯಂದಡ ಹಾಗೂ ಕುಂಜಿಲ ಕಕ್ಕಬೆ ಗ್ರಾಪಂ ವ್ಯಾಪ್ತಿಯ ಗ್ರಾಮಸ್ಥರು ಚೆಯ್ಯಂಡಾಣೆಯಲ್ಲಿ ಪ್ರತಿಭಟನೆ ನಡೆಸಿದರು.

ಮಡಿಕೇರಿ, ಜು.11–ಕಾಡಾನೆ ಹಾವಳಿ ತಡೆ ಹಾಗೂ ವಿದ್ಯುತ್ ಸಮಸ್ಯೆ ಪರಿಹರಿಸುವಂತೆ ಆಗ್ರಹಿಸಿ ನರಿಯಂದಡ ಹಾಗೂ ಕುಂಜಿಲ ಕಕ್ಕಬೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಸ್ಥರು ಚೆಯ್ಯಂಡಾಣೆ ಪಟ್ಟಣದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

ನಾಪೋಕ್ಲು–ವಿರಾಜಪೇಟೆ ಮುಖ್ಯರಸ್ತೆಯಲ್ಲಿ ಪ್ರತಿಭಟನೆ ನಡೆಸಿದ ನರಿಯಂದಡ, ಕೋಕೇರಿ, ಚೇಲಾವರ, ಕರಡ, ಅರಪಟ್ಟು, ಪೊದವಾಡ, ಮರಂದೋಡ, ಕಕ್ಕಬೆ ಗ್ರಾಮಸ್ಥರು, ಈ ಭಾಗದಲ್ಲಿ ಕಾಡಾನೆ ಹಾವಳಿ ಮಿತಿಮೀರಿದ್ದು, ತೋಟಗಳಿಗೆ ಲಗ್ಗೆ ಇಟ್ಟು ಕೃಷಿ ಫಸಲುಗಳನ್ನು ಧ್ವಂಸಗೊಳಿಸುತ್ತಿವೆ. ಸುಮಾರು 70 ರಿಂದ 80ಕ್ಕೂ ಹೆಚ್ಚು ಕಾಡಾನೆಗಳು ನಿರಂತರ ದಾಳಿ ನಡೆಸುತ್ತಿದ್ದರೂ ಅರಣ್ಯ ಇಲಾಖೆ ಸೂಕ್ತ ಕ್ರಮ ಕೈಗೊಂಡಿಲ್ಲ ಹಾಗೂ ನಿರಂತರ ವಿದ್ಯುತ್ ಸಮಸ್ಯೆಯಿಂದ ಗ್ರಾಮಸ್ಥರು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ ಎಂದು ಅರಣ್ಯ ಇಲಾಖೆ ಹಾಗೂ ಸೆಸ್ಕ್ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.


ಈ ಸಂದರ್ಭ ರಸ್ತೆತಡೆ ನಡೆಸಲು ಗ್ರಾಮಸ್ಥರು ಮುಂದಾದಾಗ ಪೊಲೀಸ್ ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ ಹಾಗೂ ನಾಪೋಕ್ಲು ಠಾಣಾಧಿಕಾರಿ ಮಂಜುನಾಥ್ ಗ್ರಾಮಸ್ಥರ ಮನವೊಲಿಸಿದರು. ನಂತರ ಡಿಎಫ್‌ಓ ಜಗನ್ನಾಥ್ ಭೇಟಿ ನೀಡಿ, ಕಾಡಾನೆಗಳ ಸೆರೆ ಹಿಡಿಯಲು ಮೇಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ಇದೇ ವೇಳೆ ವಿರಾಜಪೇಟೆ ವಲಯ ಅರಣ್ಯಾಧಿಕಾರಿ ಕಳ್ಳಿರ ದೇವಯ್ಯ, ಎಸಿಎಫ್ ನೆಹರು, ಸೆಸ್ಕ್ ಜೆಇ ಚಿತ್ರೇಶ್, ಮೂರ್ನಾಡು ಸೆಸ್ಕ್ ಅಧಿಕಾರಿ ಸಂಪತ್ ಇದ್ದರು.

ಪ್ರತಿಭಟನೆಯಲ್ಲಿ ಗ್ರಾಪಂ ಮಾಜಿ ಅಧ್ಯಕ್ಷರಾದ ಬಿದ್ದಂಡ ರಾಜೇಶ್ ಅಚ್ಚಯ್ಯ, ಪೆಮ್ಮಂಡ ಕೌಶಿ ಕಾವೇರಮ್ಮ, ಗ್ರಾಮಸ್ಥರಾದ ಪೊಕ್ಕುಳಂಡ್ರ ದನೋಜ್, ಮಚ್ಚಂಡ ಸುಮತಿ, ಅಂಜಪರವಂಡ ಕುಶಾಲಪ್ಪ, ಬಟ್ಟಿಯಂಡ ಜಯರಾಂ, ಅಶೋಕ್, ಚೇಲಾವರದ ತಮ್ಮಯ್ಯ, ವಿವಿಧ ಸಂಘ ಸಂಸ್ಥೆಗಳು, ಗ್ರಾಪಂ ಸದಸ್ಯರು ಪಾಲ್ಗೊಂಡಿದ್ದರು.

'ಬ್ರೂನೋ' ಯಶಸ್ವಿ ಕಳ್ಳನ ಬೇಟೆ

ಮಡಿಕೇರಿ, ಜು.11–ಮನೆಯೊಂದರಲ್ಲಿ ಕಳ್ಳತನ ಮಾಡಿದ್ದ ಕಳ್ಳನನ್ನು ಜಿಲ್ಲಾ ಶ್ವಾನ ದಳದ 'ಬ್ರೂನೋ' ಪತ್ತೆ ಮಾಡಿದೆ.

ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯ ಮುತ್ತಾರ್ಮುಡಿ ಗ್ರಾಮದ ಪಿ.ಎಂ.ಮೋಹನ್ ಕುಮಾರ್ ಅವರ ಮನೆಯಲ್ಲಿ ಕಳ್ಳತನವಾಗಿತ್ತು. ಮನೆಗೆ ನುಗ್ಗಿದ ಕಳ್ಳರು ಚಿನ್ನ ಹಾಗೂ ನಗದು ದೋಚಿ ಪರಾರಿಯಾಗಿದ್ದರು. ಈ ಸಂಬಂಧ ದೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು. ಪೊಲೀಸರು (ಬ್ರೂನೋ) ಶ್ವಾನದೊಂದಿಗೆ ಕಾರ್ಯಾಚರಣೆ ನಡೆಸಿದಾಗ ಪಿ.ಎಂ. ಮೋಹನ್ ಕುಮಾರ್ ಮನೆಯ ಪಕ್ಕದ ಲೈನ್ ಮನೆಯಲ್ಲಿದ್ದ ಆರೋಪಿ ಮಂಜುನನ್ನು ಗುರುತಿಸಿದೆ.



ಬ್ರೂನೋ

ಬಳಿಕ ಈತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕಳವು ನಡೆಸಿರುವುದು ಬೆಳಕಿಗೆ ಬಂದಿದೆ. ಬಂಧಿತನಿಂದ ಕಳವು ಮಾಡಿದ್ದ 5 ಗ್ರಾಂ ಚಿನ್ನ ಹಾಗೂ 2 ಸಾವಿರ ರೂ. ನಗದನ್ನು ವಶಪಡಿಸಿಕೊಳ್ಳಲಾಗಿದೆ.

ಬ್ರೂನೋ ಪೊಲೀಸ್ ಶ್ವಾನ ಎಆರ್‌ಎಸ್‌ಐ ಜಿತೇಂದ್ರ ರೈ, ಮನಮೋಹನ್, ಸಿದ್ಧನಗೌಡ ಪಾಟೀಲ್ ಗರಡಿಯಲ್ಲಿ ಪಳಗಿದೆ. ಈ ಬಗ್ಗೆ ಎಸ್‌ಪಿ ರಾಮರಾಜನ್ ಶ್ಲಾಘನೆ ವ್ಯಕ್ತಪಡಿಸಿದ್ದಾರೆ.

ಹೆಣ್ಣು ಮಕ್ಕಳು ಸುಶಿಕ್ಷಿತರಾಗಿ, ಸಂಘಟಿತರಾಗಿ

● ಡಾ.ನಾಗಲಕ್ಷ್ಮೀ ಚೌಧರಿ ಸಲಹೆ ● ಸುವರ್ಣ ಗಂಗೋತ್ರಿಯಲ್ಲಿ ವಿದ್ಯಾರ್ಥಿನಿಯರೊಂದಿಗೆ ಸಂವಾದ



ಚಾ.ನಗರ ವಿವಿಯ ಸುವರ್ಣ ಗಂಗೋತ್ರಿ ವಿದ್ಯಾರ್ಥಿ ನಿಲಯದಲ್ಲಿ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌಧರಿ, ಡಿಸಿ ಶಿಲ್ಪನಾಗ್ ವಿದ್ಯಾರ್ಥಿಗಳೊಂದಿಗೆ ಊಟ ಮಾಡಿದರು.

ಚಾಮರಾಜನಗರ, ಜು.11– ಉತ್ತಮ ಶಿಕ್ಷಣ ಪಡೆಯುವ ಮೂಲಕ ಯಾವುದೇ ಸಮಸ್ಯೆಗಳನ್ನು ಧೈರ್ಯವಾಗಿ ಎದುರಿಸಲು ಹೆಣ್ಣು ಮಕ್ಕಳು ಸುಶಿಕ್ಷಿತರಾಗಿ ಸಂಘಟಿತರಾಗಬೇಕು ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌಧರಿ ಸಲಹೆ ನೀಡಿದರು.

ನಗರದ ಹೊರವಲಯದ ಬೇಡರಪುರದ ಚಾಮರಾಜನಗರ ವಿಶ್ವವಿದ್ಯಾಲಯ ಸುವರ್ಣ ಗಂಗೋತ್ರಿಯ ನಿಜಗುಣ ಸಭಾಂಗಣದಲ್ಲಿ ಗುರುವಾರ 'ಮಹಿಳೆಯರ ಅಭಿವೃದ್ಧಿ ಹಾಗೂ ಸ್ವಾವಲಂಬನೆ' ಕುರಿತು ವಿದ್ಯಾರ್ಥಿನಿಯರೊಂದಿಗೆ ನಡೆದ ಸಂವಾದದಲ್ಲಿ ಮಾತನಾಡಿದ ಅವರು, ಶಿಕ್ಷಣ ಮಹಿಳೆಯರ ಭವಿಷ್ಯವನ್ನು ನಿರ್ಧರಿಸುವ ಬಹುದೊಡ್ಡ ಅಸ್ತ್ರವಾಗಿದೆ. ಹೆಣ್ಣು ಮಕ್ಕಳಿಗೆ ತಮ್ಮ ಹಕ್ಕು, ರಕ್ಷಣೆಯ ಕಾನೂನು, ಭದ್ರತೆ ಹಾಗೂ ಸರ್ಕಾರದಿಂದ ದೊರೆಯುವ ಸೌಲಭ್ಯಗಳ ಅರಿವು ಇಲ್ಲವಾಗಿದೆ. ಈ ಬಗ್ಗೆ ಐಇಸಿ ಕಾರ್ಯಕ್ರಮಗಳ ಜಾಗೃತಿ ಮೂಡಿಸಲು ಸರ್ಕಾರ ಸಾಕಷ್ಟು ಅನುದಾನ ನೀಡುತ್ತಿದೆ. ಇದನ್ನು ಸದ್ಬಳಕೆ ಮಾಡಿಕೊಂಡು ಸಮಾಜದ ಇತರರಿಗೂ ಅರಿವು ಮೂಡಿಸಬೇಕು. ಆಗ ಮಾತ್ರ ಮಹಿಳೆಯರ ಸಬಲೀಕರಣ ಸಾಧ್ಯವಾಗಲಿದೆ ಎಂದರು.

> ❝ ವಿದ್ಯಾರ್ಥಿ ನಿಲಯಕ್ಕೆ ಬೇಕಾಗಿರುವ ಸೌಲಭ್ಯಗಳು, ವ್ಯವಸ್ಥೆಗಳ ಕುರಿತು ಲಿಖಿತವಾಗಿ ಪ್ರಸ್ತಾವನೆ ಸಲ್ಲಿಸಿ, ಅದನ್ನು ಪರಿಶೀಲಿಸಿ ಸೂಕ್ತ ಕ್ರಮ ವಹಿಸಲಾಗುವುದು.
> –ಶಿಲ್ಪನಾಗ್, ಜಿಲ್ಲಾಧಿಕಾರಿ

ಮಹಿಳಾ ಆಯೋಗಕ್ಕೆ ಸ್ವೀಕೃತವಾಗುವ ದೂರುಗಳನ್ನು ಗಮನಿಸಲಾಗುತ್ತಿದೆ. ಚಾಮರಾಜನಗರ ಜಿಲ್ಲೆಯಿಂದ 4 ದೂರುಗಳು ದಾಖಲಾಗಿವೆ. ಹೆಣ್ಣು ಮಕ್ಕಳಿಗೆ ಮೊಬೈಲ್ ಮಾರಕವಾಗಿ ಪರಿಣಮಿಸುತ್ತಿದೆ. ಸೈಬರ್ ಕ್ರೈಂನಂತಹ ದುಷ್ಕೃತ್ಯಗಳಿಗೆ ಹೆಣ್ಣು ಮಕ್ಕಳೇ ಹೆಚ್ಚಾಗಿ ಬಲಿಯಾಗುತ್ತಿದ್ದಾರೆ. ಫೇಕ್ ಅಂಕೌಂಟ್‌ಗಳಿಂದ ಮೋಸ ಹೋಗುತ್ತಿದ್ದು, ಇದು ತಪ್ಪಬೇಕು. ಮಹಿಳೆಯರು ಮೊಬೈಲ್‌ಗಳಿಂದ ಪ್ರಭಾವಿತರಾಗದೇ ಸಕಾರಾತ್ಮಕ ಚಿಂತನೆಗಳಿಗೆ ಆದ್ಯತೆ ನೀಡಬೇಕು. ಸದೃಢ ಸಾಮಾಜಿಕ ಪ್ರಜ್ಞೆಯನ್ನು ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ಮಹಿಳೆಯರಿಗೆ ಯಾವುದೇ ದೌರ್ಜನ್ಯಗಳಾದರೂ ನೇರವಾಗಿ ಪೊಲೀಸರಿಗೆ ದೂರು ನೀಡಬೇಕು. ಪೊಲೀಸರು ಸಹ ಮಹಿಳೆಯರನ್ನು ಗೌರವದಿಂದ ನಡೆಸಿಕೊಳ್ಳಬೇಕು. ಜನಸ್ನೇಹಿಯಾಗಿರುವ ಪೊಲೀಸ್ ಠಾಣೆಗಳು ಮಹಿಳಾ ಸ್ನೇಹಿಯಾಗಿಯೂ ಕಾರ್ಯನಿರ್ವಹಿಸಬೇಕು. ಮಹಿಳೆಯರಿಗೆ ನ್ಯಾಯ ದೊರಕಿಸಿಕೊಡುವ ಆತ್ಮವಿಶ್ವಾಸ ತುಂಬಬೇಕು. ಎಲ್ಲಾ ಸರ್ಕಾರಿ ಕಚೇರಿಗಳಲ್ಲೂ ಐಸಿಸಿ (ಇಂಟರ್ನಲ್ ಕಂಪ್ಲೈಟ್ ಕಮಿಟಿ) ಇರಬೇಕು. ಹೆಣ್ಣು ಮಕ್ಕಳು ದೌರ್ಜನ್ಯ, ಹಿಂಸೆಗೊಳಗಾದಾಗ ಐಸಿಸಿ ಸಮಿತಿಯಲ್ಲಿ ದೂರು ದಾಖಲಿಸಬೇಕು ಎಂದು ಸಲಹೆ ನೀಡಿದರು.

ಸಂವಾದದ ಬಳಿಕ ಡಾ.ನಾಗಲಕ್ಷ್ಮೀ ಚೌಧರಿ ಕಾಲೇಜಿನ ವಿದ್ಯಾರ್ಥಿನಿಯರ ಕುಂದುಕೊರತೆ ಆಲಿಸಿದರು. ನಂತರ ವಿಶ್ವವಿದ್ಯಾಲಯದ ಆವರಣದ ವಿದ್ಯಾರ್ಥಿನಿಲಯಕ್ಕೆ ಭೇಟಿ ನೀಡಿ, ಹಾಸ್ಟಲ್‌ನ ಸಮಸ್ಯೆಗಳ ಬಗ್ಗೆ ಅಲ್ಲಿನ ವಿದ್ಯಾರ್ಥಿಗಳಿಂದಲೇ ಮಾಹಿತಿ ಪಡೆದರು. ವಿದ್ಯಾರ್ಥಿನಿಲಯದಲ್ಲಿ ನೀಡುವ ಊಟ, ಉಪಹಾರ ಗುಣಮಟ್ಟದಿಂದ ಕೂಡಿಲ್ಲ. ವಿದ್ಯಾರ್ಥಿನಿಲಯ ನಗರದಿಂದ ಹೊರಗಿರುವುದರಿಂದ ರಾತ್ರಿ ವೇಳೆ ಯಾವುದೇ ವೈದ್ಯಕೀಯ ಸಮಸ್ಯೆ ಎದುರಾದರೆ, ಸಾರಿಗೆ ವ್ಯವಸ್ಥೆ ಕೊರತೆ ಇದೆ. ಇದನ್ನು ಸರಿಪಡಿಸುವಂತೆ ವಿದ್ಯಾರ್ಥಿಗಳು ಮನವಿ ಮಾಡಿದರು.

ವಿದ್ಯಾರ್ಥಿಗಳೊಂದಿಗೆ ಊಟ ಸೇವನೆ

ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮೀ ಚೌಧರಿ, ಡಿಸಿ ಶಿಲ್ಪನಾಗ್, ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ ಅವರು ವಿದ್ಯಾರ್ಥಿಗಳೊಂದಿಗೆ ಊಟ ಮಾಡಿದರು. ಕಾರ್ಯಕ್ರಮಕ್ಕೂ ಮೊದಲು ವಿವಿಯ ಪ್ರವೇಶದ್ವಾರದಲ್ಲಿ ರಂಗೋಲಿ ಮೂಲಕ ಚಿತ್ರೀಕರಿಸಿದ್ದ ಸಾಮಾಜಿಕ ನ್ಯಾಯ ಕುರಿತ ತಕ್ಕಡಿ ಹಿಡಿದಿರುವ ನ್ಯಾಯದೇವತೆ ಚಿತ್ರವನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಅಲ್ಲದೆ ಸಂವಿಧಾನಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು.

ಜಿಲ್ಲಾಸ್ಪತ್ರೆಗೆ ಮಹಿಳಾ ಆಯೋಗದ ಅಧ್ಯಕ್ಷೆ ಭೇಟಿ

ಆಸ್ಪತ್ರೆ ವೈದ್ಯಕೀಯ ಸೌಲಭ್ಯಗಳ ಪರಿಶೀಲಿಸಿ ಮಾಹಿತಿ ಪಡೆದ ಡಾ.ನಾಗಲಕ್ಷ್ಮೀ ಚೌಧರಿ

ಚಾಮರಾಜನಗರ, ಜು.11–ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌಧರಿ ಗುರುವಾರ ನಗರದ ಜಿಲ್ಲಾಸ್ಪತ್ರೆಗೆ ಭೇಟಿ ನೀಡಿ, ಮಹಿಳೆಯರ ವೈದ್ಯಕೀಯ ಚಿಕಿತ್ಸಾ ಸೌಲಭ್ಯಗಳನ್ನು ಪರಿಶೀಲಿಸಿದರು.

ಮೊದಲಿಗೆ ಜಿಲ್ಲಾಸ್ಪತ್ರೆ ಹೆರಿಗೆ ವಾರ್ಡ್‌ಗೆ ಭೇಟಿ ನೀಡಿದ ಅವರು, ಅಲ್ಲಿನ ವೈದ್ಯಕೀಯ ಸೌಲಭ್ಯಗಳ ಬಗ್ಗೆ ಸಂಬಂಧಪಟ್ಟ ವೈದ್ಯಾಧಿಕಾರಿಗಳಿಂದ ಮಾಹಿತಿ ಪಡೆದರು. ಆಸ್ಪತ್ರೆಯಲ್ಲಿ ದಾಖಲಾಗಿದ್ದ ರೋಗಿಗಳನ್ನು ಆತ್ಮೀಯತೆಯಿಂದ ಮಾತನಾಡಿಸಿದರು. ವೈದ್ಯಕೀಯ ಸೌಲಭ್ಯಗಳು ಸಕಾಲದಲ್ಲಿ ದೊರೆಯುತ್ತಿರುವ ಬಗ್ಗೆ ಖಚಿತಪಡಿಸಿಕೊಂಡರು.

ಬಳಿಕ ಐಸಿಯು ಘಟಕಕ್ಕೆ ಭೇಟಿ ನೀಡಿ, ವೈದ್ಯರು, ಶುಶ್ರೂಷಕರು ಸರಿಯಾಗಿ ಚಿಕಿತ್ಸೆ ನೀಡುತ್ತಿದ್ದಾರೆಯೇ? ಆಸ್ಪತ್ರೆಯಲ್ಲಿ ಏನಾದರೂ ಕೊರತೆ ಇದೆಯೇ ಎಂದು ರೋಗಿಗಳು ಹಾಗೂ ಅವರ ಸಂಬಂಧಿಕರಿಂದ ಮಾಹಿತಿ ಪಡೆದರು. ವಾರ್ಡ್ ಹೊರಭಾಗದಲ್ಲಿ ಕುಳಿತಿದ್ದ ಮಹಿಳೆಯರನ್ನು ಮಾತನಾಡಿಸಿ, ಚಿಕಿತ್ಸೆ ನೀಡಲು ವೈದ್ಯರು ಸ್ಪಂದಿಸುತ್ತಿರುವರೇ? ಸರ್ಕಾರದ ಸೌಲಭ್ಯಗಳು ದೊರೆಯುತ್ತಿವೆಯೇ? ಗೃಹಲಕ್ಷ್ಮೀ ಸೌಲಭ್ಯಕ್ಕೆ ಒಳಪಟ್ಟಿದ್ದೀರಾ? ಕಾಲಕಾಲಕ್ಕೆ ಪಿಂಚಣಿ ಸಿಗುತ್ತಿದೆಯೇ ಎಂದು ಮಹಿಳೆಯರಿಂದ ವಿವರ ಪಡೆದರು.

ನಂತರ ಆಸ್ಪತ್ರೆ ಆವರಣ ವೀಕ್ಷಿಸಿದ ಅವರು, ಅಲ್ಲಿನ ಸ್ವಚ್ಛತೆ ಪರಿಶೀಲಿಸಿದರು. ಆಸ್ಪತ್ರೆಯ ಹೊರ ಆವರಣದಲ್ಲಿ ತ್ಯಾಜ್ಯಗಳನ್ನು ಎಲ್ಲೆಂದರಲ್ಲಿ ಬಿಸಾಡಬಾರದು. ಗಿಡಗಂಟಿಗಳು ಬೆಳೆಯದಂತೆ ಆಗಾಗ್ಗೆ ತೆರವುಗೊಳಿಸಬೇಕು. ರೋಗಿಗಳಿಗೆ ಕುಡಿಯಲು ಶುದ್ಧ ನೀರು, ಉತ್ತಮ ಶೌಚಾಲಯ ವ್ಯವಸ್ಥೆ ಮಾಡಬೇಕು ಎಂದು ವೈದ್ಯಾಧಿಕಾರಿಗಳಿಗೆ ಸೂಚಿಸಿದರು. ಬಳಿಕ ಕುಡಿಯುವ ನೀರಿನ ಶುದ್ಧತೆ ಖಚಿತಪಡಿಸಿಕೊಳ್ಳಲು ಜಿಲ್ಲಾಸ್ಪತ್ರೆಯ ಹಿಂಭಾಗದ ಓವರ್ ಹೆಡ್‌ಟ್ಯಾಂಕ್ ನೀರನ್ನು ಭಾವಚಿತ್ರದ ಮುಖೇನ ಪರಿಶೀಲಿಸಿದರು.

ಇದೇ ವೇಳೆ ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ, ವೈದ್ಯಕೀಯ ವಿಜ್ಞಾನ ಸಂಸ್ಥೆಯ ಡೀನ್ ಡಾ.ಮಂಜುನಾಥ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಸ್. ಚಿದಂಬರ, ಜಿಲ್ಲಾಸ್ಪತ್ರೆ ಸ್ಥಾನಿಕ ವೈದ್ಯಾಧಿಕಾರಿ ಡಾ. ಕೃಷ್ಣಪ್ರಸಾದ್, ಅರವಳಿಕೆ ತಜ್ಞ ಡಾ.ಮಹೇಶ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಮಂಜುನಾಥ್, ಆರೋಗ್ಯಾಧಿಕಾರಿಗಳು, ಸಿಬ್ಬಂದಿ ಇದ್ದರು.



ಚಾಮರಾಜನಗರದ ಜಿಲ್ಲಾಸ್ಪತ್ರೆಗೆ ಭೇಟಿ ನೀಡಿದ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌಧರಿ ರೋಗಿಗಳ ಸಂಬಂಧಿಕರಿಂದ ಸೌಲಭ್ಯ ಕುರಿತು ಮಾಹಿತಿ ಪಡೆದರು.

ಅಹವಾಲು ಸ್ವೀಕರಿಸಿದ ಶಾಸಕ ಕೃಷ್ಣಮೂರ್ತಿ



ಕೊಳ್ಳೇಗಾಲ ಪ್ರವಾಸಿ ಮಂದಿರದಲ್ಲಿ ಶಾಸಕ ಎ.ಆರ್.ಕೃಷ್ಣಮೂರ್ತಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದರು.

ಕೊಳ್ಳೇಗಾಲ, ಜು.11–ಪಟ್ಟಣದ ಪ್ರವಾಸಿ ಮಂದಿರದಲ್ಲಿ ಗುರುವಾರ ಶಾಸಕ ಎ.ಆರ್.ಕೃಷ್ಣಮೂರ್ತಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದರು.

ಇದೇ ವೇಳೆ ಆಲ್ಕೆರೆ ಅಗ್ರಹಾರದ ರೇವಣ್ಣ ಮಾತನಾಡಿ, ಗ್ರಾಮದ ಕಾಲುವೆಯಲ್ಲಿ ಸಾಕಷ್ಟು ಹೂಳು ತುಂಬಿದೆ. ಇದರಿಂದ ರೈತರಿಗೆ ತೊಂದರೆಯಾಗುತ್ತಿದ್ದು, ತೆರವುಗೊಳಿಸಬೇಕು ಎಂದು ಮನವಿ ಮಾಡಿದರು.

ಕುಂತೂರು ಗ್ರಾಪಂ ಸದಸ್ಯೆ ರೂಪಾ ಮಾತನಾಡಿ, ಗ್ರಾಮದಲ್ಲಿ ನೀರಾವರಿ ಇಲಾಖೆಗೆ ಸೇರಿದ ಕನ್ನಿಪುರ ಕಾಲುವೆಯಲ್ಲಿ ಹೂಳು ತುಂಬಿದೆ. ಇದ್ದರಿಂದ ನೀರು ಸರಾಗವಾಗಿ ಹರಿಯಲು ಸಾಧ್ಯವಾಗುತ್ತಿಲ್ಲ. ಗ್ರಾಮ ಪಂಚಾಯಿತಿಯಲ್ಲೂ ಊಳು ತೆಗೆಸಲು ಅನುದಾನವಿಲ್ಲ. ಆದ್ದರಿಂದ ನೀರಾವರಿ ಇಲಾಖೆಯಿಂದಲೇ ಹೂಳು ತೆಗೆಸಬೇಕು ಎಂದು ಒತ್ತಾಯಿಸಿದರು.

ಬಳಿಕ ಶಾಸಕರು ಈ ಸಂಬಂಧ ಕ್ರಮ ವಹಿಸುವುದಾಗಿ ಭರವಸೆ ನೀಡಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಟೇಶ್, ಕಾರ್ಯದರ್ಶಿ ಬಸ್ತೀಪುರ ರವಿ, ರಾಜ್ಯ ಯುವ ಕಾಂಗ್ರೆಸ್ ಕಾರ್ಯದರ್ಶಿ ಚೇತನ್ ದೊರೈ ರಾಜ್, ನಗರಸಭೆ ಸದಸ್ಯ ಎ.ಪಿ.ಶಂಕರ್, ಶಾಂತರಾಜು, ಮಂಜುನಾಥ್, ಮುಖಂಡ ಅನ್ಸರ್ ಬೇಗ್, ಬಸ್ತಿಪುರ ರಮೇಶ್, ಶಾಸಕರ ಆಪ್ತ ಸಹಾಯಕ ಹೊಂಗನೂರ ಚೇತನ್ ಇತರರು ಇದ್ದರು.

ಕಾಮಗಾರಿ ಕಳಪೆಗೆ ಶಾಸಕರು ಗರಂ: ಪಟ್ಟಣದ ಮರಡಿಗುಡ್ಡದ ತಪ್ಪಲಿನಲ್ಲಿ ಕೊಳ್ಳೇಗಾಲ ತಾಲೂಕು ಕಾರ್ಯನಿರತ ಪತ್ರಕರ್ತ ಸಂಘದ ಭವನ ನಿರ್ಮಾಣವಾಗುತ್ತಿದ್ದು, ಭವನ ಕಾಮಗಾರಿ ತೀರಾ ಕಳಪೆಯಾಗಿದೆ. ನೀವು ಗಮನಹರಿಸಿಲ್ಲವೇ ಎಂದು ಪತ್ರಕರ್ತರನ್ನು ಶಾಸಕರು ಪ್ರಶ್ನಿಸಿದರು.

ನಾನು ಪತ್ರಕರ್ತರ ಭವನ ನಿರ್ಮಾಣ ಕಾಮಗಾರಿ ಪರಿಶೀಲಿಸಿದ್ದೇನೆ. ತಳಹಂತದ ಕಾಮಗಾರಿಯೇ ಕಳಪೆಯಾಗಿದೆ. ಮುಂದೆ ಭವನದ ಗತಿ ಏನು? ಎಂದು ನಿರ್ಮಿತಿ ಕೇಂದ್ರದ ಅಧಿಕಾರಿಗಳ ಕಾರ್ಯವೈಖರಿಗೆ ಶಾಸಕರು ಗರಂ ಆದರು.

ಕ್ವಾರಿಗೆ ಬಿದ್ದು ಅವಿವಾಹಿತ ಸಾವು

ಚಾಮರಾಜನಗರ, ಜು.11–ಕ್ವಾರಿಗೆ ಬಿದ್ದು ಅವಿವಾಹಿತ ಮೃತಪಟ್ಟಿರುವ ಘಟನೆ ಗುಂಡ್ಲುಪೇಟೆ ತಾಲೂಕಿನ ತೆರಕಣಾಂಬಿಯಲ್ಲಿ ಬುಧವಾರ ತಡರಾತ್ರಿ ನಡೆದಿದೆ.

ಗುಂಡ್ಲುಪೇಟೆ ತಾಲೂಕಿನ ಕುರುಬರಹುಂಡಿ ಗ್ರಾಮದ ರಘು(36) ಮೃತಪಟ್ಟಿದ್ದು, ಈತ ವಯಸ್ಸಾದರೂ ಇನ್ನು ಮದುವೆಯಾಗಿಲ್ಲ ಎಂಬ ಜುಗುಪ್ಸೆಯಿಂದ ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂಬುದು ಮೇಲ್ನೋಟಕ್ಕೆ ತಿಳಿದುಬಂದಿದೆ ಎಂದು ವೃತ್ತ ನಿರೀಕ್ಷಕ ವನರಾಜು ತಿಳಿಸಿದ್ದಾರೆ.

ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ.ಕವಿತಾ, ಡಿವೈಎಸ್ಪಿ ಲಕ್ಷ್ಮಯ್ಯ, ಇನ್ಸ್‌ಪೆಕ್ಟರ್ ಈಶ್ವರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಸಂಬಂಧ ತೆರಕಣಾಂಬಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಳ್ಳತನ ಮಾಡಿ ಸಿಕ್ಕಿ ಬಿದ್ದ ಅಪ್ರಾಪ್ತರು!

35 ಗ್ರಾಂ ಚಿನ್ನ, 2 ಸಾವಿರ ನಗದು, ಮೊಬೈಲ್ ವಶ

ಕೊಳ್ಳೇಗಾಲ, ಜು.11–ನಾಲ್ಕು ದಿನಗಳ ಹಿಂದೆ ಪಟ್ಟಣದ ಎರಡು ಮನೆಗಳಲ್ಲಿ ಕಳ್ಳತನ ಮಾಡಿದ್ದ ಮೂವರು ಅಪ್ರಾಪ್ತರನ್ನು ಬಂಧಿಸಿರುವ ಪೊಲೀಸರು, 35 ಗ್ರಾಂ ಚಿನ್ನಾಭರಣ, 2 ಸಾವಿರ ನಗದು ಹಾಗೂ ಮೊಬೈಲ್ ವಶಪಡಿಸಿಕೊಂಡಿದ್ದಾರೆ.

ಪಟ್ಟಣದ ಉಷಾ ಮತ್ತು ಜಗದೀಶ್ ಅವರ ಮನೆಯಲ್ಲಿ ನಾಲ್ಕು ದಿನಗಳ ಹಿಂದೆ ಕಳ್ಳತನವಾಗಿತ್ತು.

ಈ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಈ ವೇಳೆ ಮನೆಯ ಸಿಸಿಟಿವಿ ಕ್ಯಾಮರಾ ಪರಿಶೀಲಿಸಿದಾಗ ಮೂವರು ಅಪ್ರಾಪ್ತರು ಮನೆಯೊಳಗೆ ಓಡಾಡುತ್ತಿರುವ ದೃಶ್ಯ ಪತ್ತೆಯಾಗಿದೆ. ನಂತರ ಈ ಮೂವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕಳ್ಳತನ ಮಾಡಿರುವುದು ಬೆಳಕಿಗೆ ಬಂದಿದೆ.

ಎಸ್‌ಐ ತಖೀವುಲ್ಲಾ, ಎಸ್‌ಐ ಉಮಾವತಿ, ಸಿಬ್ಬಂದಿ ಕಿಶೋರ್, ವೆಂಕಟೇಶ್, ಬಿಳಿಗೌಡ, ಶಿವಕುಮಾರ, ಅಂಬರೀಶ, ಬಸವರಾಜು, ಸವಿರಾಜು ಪತ್ತೆ ಕಾರ್ಯದಲ್ಲಿ ಪಾಲ್ಗೊಂಡಿದ್ದರು.

ಜು.19, ಮ.ಬೆಟ್ಟಕ್ಕೆ ಸಚಿವ ವಿ.ಸೋಮಣ್ಣ



ಚಾಮರಾಜನಗರ, ಜು.11–ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಸಚಿವ ವಿ.ಸೋಮಣ್ಣ ಜು.19ರಂದು ಮಲೆಮಹದೇಶ್ವರಬೆಟ್ಟಕ್ಕೆ ಆಗಮಿಸಲಿದ್ದಾರೆ.

ಅಂದು ಸಂಜೆ 5.30 ಗಂಟೆಗೆ ಮಹದೇಶ್ವರಬೆಟ್ಟಕ್ಕೆ ಆಗಮಿಸುವ ಸಚಿವರು, ಸ್ಥಳೀಯ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಬಳಿಕ ಅಲ್ಲೇ ವಾಸ್ತವ್ಯ ಹೂಡಲಿದ್ದಾರೆ. ಜು.20ರಂದು ಬೆಟ್ಟದಲ್ಲಿ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿ, ಮಧ್ಯಾಹ್ನ 12 ಗಂಟೆಗೆ ಬೆಂಗಳೂರಿಗೆ ತೆರಳಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.



ಮೈಸೂರಿನಲ್ಲಿ 'ಫಾದರ್' ಶೂಟಿಂಗ್

ಆರ್. ಚಂದ್ರು ಅವರ ಆರ್.ಸಿ.ಸ್ಟುಡಿಯೋಸ್ ನಿರ್ಮಾಣದ ತಂದೆ ಮಗನ ಸಂಬಂಧದ ಸುತ್ತ ನಡೆಯುವ ಕಥಾಹಂದರ ಇರುವ ಫಾದರ್ ಚಿತ್ರದ ಚಿತ್ರೀಕರಣ ಸಾಂಸ್ಕೃತಿಕ ನಗರಿ ಮೈಸೂರಿನ ವಿವಿ ಮೊಹಲ್ಲಾದ ನೂರು ವರ್ಷ ಹಳೆಯ ಮನೆಯಲ್ಲಿ ನಡೆಯುತ್ತಿದೆ. ಈ ಸಂದರ್ಭದಲ್ಲಿ ಶೂಟಿಂಗ್ ಸೆಟ್‌ಗೆ ಬಂದ ಪತ್ರಕರ್ತರ ಜೊತೆ ನಿರ್ಮಾಪಕ ಆರ್.ಚಂದ್ರು, ತಂದೆ ಮಗನಾಗಿ ನಟಿಸುತ್ತಿರುವ ಪ್ರಕಾಶ್ ರೈ-ಡಾರ್ಲಿಂಗ್ ಕೃಷ್ಣ ಸಿನಿಮಾ ಕುರಿತಂತೆ ಮಾಹಿತಿ ಹಂಚಿಕೊಂಡರು. ನಿರ್ಮಾಪಕ ಆರ್.ಚಂದ್ರು ಮಾತನಾಡುತ್ತ, ನಮ್ಮ ಸಂಸ್ಥೆಯ ಮೂಲಕ 5 ಬಿಗ್ ಬಜೆಟ್ ಚಿತ್ರಗಳನ್ನು ನಿರ್ಮಿಸುತ್ತಿದ್ದೇನೆ. ಒಮ್ಮೆಗೇ 5 ಚಿತ್ರ ಮಾಡುವುದು ಸುಲಭದ ಮಾತಲ್ಲ. ಸಿನಿಮಾ ಪ್ರೀತಿಯೇ ಇದಕ್ಕೆ ಕಾರಣ. ಫಾದರ್ ಅದ್ಭುತ ಕಥೆ. ಪ್ರತಿಯೊಬ್ಬ ತಂದೆ, ಮಗನ ಬಾಂಧವ್ಯವನ್ನು ಇಲ್ಲಿ ಹೇಳಲಾಗುತ್ತಿದೆ. ಇಂಥದ್ದೊಂದು ಟಿಪಿಕಲ್ ಕಂಟೆಂಟ್ ಸಿನಿಮಾ ಮಾಡೋಕೆ ಹೆಮ್ಮೆ ಎನಿಸುತ್ತಿದೆ. ಈ ಚಿತ್ರಕ್ಕೆ ಗ್ರಾಂಡ್‌ಫಾದರ್ ಪ್ರಕಾಶ್‌ರಾಜ್ ಎನ್ನಬಹುದು. ಕೃಷ್ಣ ಜೊತೆ ಈ ಮೊದಲೇ ಸಿನಿಮಾ ಮಾಡಬೇಕಿತ್ತು. ಆದರೆ, ಅದೀಗ ಸಾಧ್ಯವಾಗಿದೆ. ತಾಜಮಹಲ್ ಥರ ಇದು ಮತ್ತೊಂದು ಎಮೋಷನಲ್ ಜರ್ನಿ. ಎಲ್ಲರಿಗೂ ಇಷ್ಟವಾಗುತ್ತದೆ ಎಂಬ ನಂಬಿಕೆಯಿದೆ. ತಂದೆಯ ಪಾತ್ರದ ಬಗ್ಗೆ ಕೇಳುತ್ತಿದ್ದಂತೆಯೇ, ಈ ಪಾತ್ರವನ್ನು ಪ್ರಕಾಶ್ ರೈ ಮಾಡಿದರೆ ಚೆನ್ನಾಗಿರುತ್ತದೆ ಎನಿಸಿತು. ಅವರು ಕೂಡ ಅಭಿನಯಿಸಲು ಪ್ರೀತಿಯಿಂದ ಒಪ್ಪಿಕೊಂಡಿದ್ದಾರೆ. ಒಂದೇ ಹಂತದಲ್ಲಿ ಮೈಸೂರು, ವಾರಣಾಸಿ, ಮಂಗಳೂರಿನಲ್ಲಿ ಚಿತ್ರೀಕರಿಸುವ ಯೋಜನೆಯಿದೆ ಎಂದರು.

ನಂತರ ಡಾರ್ಲಿಂಗ್ ಕೃಷ್ಣ ಮಾತನಾಡಿ, ಈ ಕಥೆ ಕೇಳಿ, ಮೊದಲು ಇಷ್ಟಪಟ್ಟಿದ್ದು ಪತ್ನಿ ಮಿಲನಾ. ಕಥೆ ಚೆನ್ನಾಗಿದೆ. ನೀವು ಮಾಡಲೇಬೇಕೆಂದು ಹೇಳಿದರು. ಅಲ್ಲದೆ ಪ್ರಕಾಶ್ ರೈ ಅವರ ಜೊತೆ ನಟಿಸುವ ಆಸೆ ಮೊದಲಿಂದಲೂ ಇತ್ತು. ಫಾದರ್ ಜನರ ಮನಸಿನಲ್ಲಿ ಉಳಿಯುವಂಥ ಚಿತ್ರವಾಗಲಿದೆ ಎಂದರು.

ಪ್ರಕಾಶ್ ರೈ ಮಾತನಾಡಿ, ನಾನು ಆರ್.ಚಂದ್ರು ಜೊತೆ ಕಬ್ಜ ಚಿತ್ರದಲ್ಲೇ ಕೆಲಸ ಮಾಡಬೇಕಿತ್ತು. ಕಾರಣಾಂತರಗಳಿಂದ ಸಾಧ್ಯವಾಗಿರಲಿಲ್ಲ. ಎಲ್ಲರ ಮನಸಿಗೆ ಹತ್ತಿರವಾಗುವ ಕಥೆಯಿದು. ತಂದೆ-ಮಗನ ಪ್ರೀತಿಯ ಜೊತೆಗೆ, ಇವತ್ತಿನ ತಂದೆ, ಮಕ್ಕಳ ಸಂಬಂಧದ ಬಗ್ಗೆ ಹೇಳಲಾಗಿದೆ. ಕಥೆ ಕೇಳಿದಾಗ ಇಂದಿನ ಕಾಲಕ್ಕೆ ಮುಖ್ಯವಾಗಿ ಬೇಕಾದ ಸಿನಿಮಾ ಎಂದೆನಿಸಿತು. ಇದು ಕಾಡುವಂತಹ ಚಿತ್ರವಾಗಲಿದೆ. ನಾನು ತುಂಬಾ ಇಷ್ಟಪಡುವ ಮೈಸೂರಿನಲ್ಲಿ ಚಿತ್ರೀಕರಣ ನಡೀತಿರೋದು ಖುಷಿಯಾಗಿದೆ. ಇಂಥ ನಿರ್ಮಾಪಕರು ಕನ್ನಡಕ್ಕೆ ಬೇಕು. ಕನ್ನಡ ಸಿನಿಮಾರಂಗಕ್ಕೆ ಚಂದ್ರು ಅವರ ಕೊಡುಗೆ ತುಂಬಾ ಇದೆ ಎಂದು ಹೇಳಿದರು. ನಾಯಕಿ ಅಮೃತಾ ಅಯ್ಯಂಗಾರ್, ನಿರ್ದೇಶಕ ರಾಜ್‌ಮೋಹನ್, ಕಾರ್ಯಕಾರಿ ನಿರ್ಮಾಪಕ ದಯಾಳ್ ಪದ್ಮನಾಭನ್ ಫಾದರ್ ಕುರಿತಂತೆ ಮಾತನಾಡಿದರು.

ಮಳೆ ಅಬ್ಬರ 'ಕಾಂತಾರ' ಶೂಟಿಂಗ್ ಬ್ರೇಕ್ !

ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯಾದ್ಯಂತ ಮಳೆಯ ಅಬ್ಬರ ಜೋರಾಗಿದೆ. ಅದರಲ್ಲೂ ಉಡುಪಿಯಲ್ಲಿ 200 ಮಿಮೀ. ಗಿಂತಲೂ ಹೆಚ್ಚು ಮಳೆಯಾಗುತ್ತಿದೆ. ಧಾರಾಕಾರವಾಗಿ ಸುರಿಯುತ್ತಿರುವ ಮಳೆಯ ಕಾರಣಕ್ಕೆ ಗುಡ್ಡ ಕುಸಿತ ಸೇರಿದಂತೆ ಅನೇಕ ಅವಾಂತರಗಳು ಸೃಷ್ಟಿಯಾಗಿವೆ. ಇದರ ಪರಿಣಾಮ ಕಾಂತಾರ ಚಿತ್ರದ ಚಿತ್ರೀಕರಣಕ್ಕೂ ತಟ್ಟಿದೆ. ಹಾಗಾಗಿ ಸಿನಿಮಾದ ಶೂಟಿಂಗ್‌ಗೆ ಬ್ರೇಕ್ ಬಿದ್ದಿದೆ. ಮಳೆಯ ಅವಾಂತರದಿಂದ ಕಾಂತಾರ ಪ್ರೀಕ್ವೆಲ್ ಶೂಟಿಂಗ್‌ಗೆ ನಿರ್ದೇಶಕ ರಿಷಬ್ ಶೆಟ್ಟಿ ಅವರು ಸ್ವಲ್ಪ ದಿನ ಬಿಡುವು ನೀಡಿದ್ದಾರೆ.

ಕಾಂತಾರ ಯಶಸ್ಸಿನ ನಂತರ ಕಾಂತಾರ ಪ್ರೀಕ್ವೆಲ್ ಮಾಡಲು ರಿಷಭ್‌ಶೆಟ್ಟಿ ಮುಂದಾಗಿದ್ದರು. ಅದರ ಚಿತ್ರೀಕರಣ, ಕುಂದಾಪುರದಲ್ಲಿ ಹಾಕಿದ್ದ ಬೃಹತ್ ಸೆಟ್‌ನಲ್ಲಿ ನಡೆಯುತ್ತಿತ್ತು. ಮಳೆಯ ಅಬ್ಬರ ಜೋರಾದ ಕಾರಣ ತಾತ್ಕಾಲಿಕವಾಗಿ ಚಿತ್ರೀಕರಣವನ್ನು ರಿಷಬ್ ಶೆಟ್ಟಿ ನಿಲ್ಲಿಸಿದ್ದಾರೆ. ಸದ್ಯ ಎಡೆಬಿಡದೆ ಸುರಿಯುತ್ತಿರುವ ಮಳೆಯ ಅಬ್ಬರ ಕಡಿಮೆಯಾದ ನಂತರ ಚಿತ್ರದ ಶೂಟಿಂಗ್‌ನ್ನು ಪುನಃ ಪ್ರಾರಂಭಿಸಲಿದ್ದಾರೆ.

'ಕಾಂತಾರ' ಚಿತ್ರದಲ್ಲಿ ರಿಷಬ್ ಶೆಟ್ಟಿ



'ತೂಫಾನ್' ಮೊದಲ ನೋಟ



ಕೆ.ಜಿ.ಎಫ್, ಕಬ್ಜ ಚಿತ್ರಗಳಂತೆ ಡಾರ್ಕ್ ಶೇಡ್ ಕಥಾಹಂದರ ಒಳಗೊಂಡ ಮತ್ತೊಂದು ಚಿತ್ರ ತೂಫಾನ್. ಆರ್. ಚಂದ್ರಕಾಂತ್ ನಿರ್ದೇಶನದ ಎರಡನೇ ಚಿತ್ರವಿದು. ಬಹುಭಾಷೆಗಳಲ್ಲಿ ನಿರ್ಮಾಣವಾಗುತ್ತಿರುವ ಈ ಚಿತ್ರದ ಮೊದಲ ನೋಟ(ಫಸ್ಟ್ ಗ್ಲಿಂಪ್ಸ್) ಇತ್ತೀಚೆಗೆ ಬಿಡುಗಡೆಯಾಯಿತು. ಬೆಳಗಾವಿ ಮೂಲದ ಷರೀಫ್‌ಬೇಗಂ ನದಾಫ್ ಅವರ ನಿರ್ಮಾಣದ ಈ ಚಿತ್ರಕ್ಕೆ ರೋಶನ್ ಕಥೆ ಬರೆದು, ನಾಯಕನಾಗಿ ನಟಿಸುತ್ತಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಆರ್.ಚಂದ್ರಕಾಂತ್, ಈ ಸಿನಿಮಾ ರೋಷನ್ ಅವರ ಕನಸು. ಅವರು ನನ್ನ ಬಳಿ ಈ ಕಥೆಯನ್ನು ತಂದು ನಾನೇ ನಿರ್ದೇಶನ ಮಾಡಬೇಕೆಂದು ಕೇಳಿದರು. 1994ರ ಸಮಯದ ಕಥೆಯಿದು. ಮಗ ತಂದೆಗಾಗಿ ಹೇಗೆ ಸೇಡು ತೀರಿಸಿಕೊಳ್ಳುತ್ತಾನೆ ಎಂಬ ಕಥೆಯನ್ನು ಈ ಚಿತ್ರದಲ್ಲಿ ಹೇಳಲಾಗುತ್ತಿದೆ. ಈಗಾಗಲೇ ಅರ್ಧದಷ್ಟು ಚಿತ್ರೀಕರಣ ಮುಗಿದಿದೆ. ನಮ್ಮ ಚಿತ್ರ ಹೇಗೆ ಬರುತ್ತಿದೆ, ಯಾವ ಥರ ಇದೆ ಎಂಬುದನ್ನು ತೋರಿಸಲು ಈ ಗ್ಲಿಂಪ್ಸ್ ಮಾಡಿದ್ದೇನೆ. ನಮ್ಮ ಚಿತ್ರಕ್ಕೆ ಹಿಂದೆ ಭೈರ್ಯ-07 ಎಂಬ ಹೆಸರಿತ್ತು, ಭೈರ್ಯ ಚಿತ್ರದ ನಾಯಕನ ಹೆಸರಾಗಿದ್ದು, ಈಗ ತೂಫಾನ್ ಅಂತ ಬದಲಾಯಿಸಿದ್ದೇವೆ, ಖಳನಾಯಕನಾಗಿ ಭೀಷ್ಮ ರಾಮಯ್ಯ, ಉಳಿದಂತೆ ರಂಗಾಯಣ ರಘು, ಅಶ್ವಿನ್ ಹಾಸನ್, ಸೂರ್ಯಪ್ರವೀಣ್, ಅಯ್ಯಪ್ಪ ಶರ್ಮ, ಬಿ.ಸುರೇಶ್, ಉಗ್ರಂರವಿ ನಟಿಸಿದ್ದಾರೆ ಎಂದರು. ನಾಯಕ ರೋಶನ್ ಮಾತನಾಡಿ, ಕೆಜಿಎಫ್ ಚಿತ್ರದ ಕಥೆಗೂ ಇದಕ್ಕೂ ಸಂಬಂಧವಿಲ್ಲ. ಪ್ರತಿಭೆ ಇರುವ ಇಂತಹ ನಿರ್ದೇಶಕರಿಗೆ ಅವಕಾಶ ಕೊಡಬೇಕು. ಒನ್‌ಲೈನ್ ನನ್ನದಾದರೂ, ಅದಕ್ಕೆ ಸುಂದರ ಆಕಾರ ಕೊಡುತ್ತಿರುವುದು ನಿರ್ದೇಶಕರು. ನಾನೊಬ್ಬ ಆಟೋ ಚಾಲಕನ ಮಗನಾಗಿದ್ದರೂ ಪ್ರಮೋಷನ್ ಮಾಡಲು ಚಿಕ್ಕ ಕನಸು ಕಂಡಿಲ್ಲ. ಭಾರತದಾದ್ಯಂತ ಸಾವಿರಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ತೆರೆಗೆ ತರುವ ಛಲವಿದೆ. ಅದಕ್ಕೆ ಕೆಜಿಎಫ್‌ನ ಪ್ರಶಾಂತ್ ನೀಲ್ ಅವರ ಆರ್ಶೀವಾದ ಸಿಕ್ಕಿದೆ. ನನ್ನ ಎರಡು ವರ್ಷದ ಶ್ರಮ ಇಲ್ಲಿಯವರೆಗೂ ತಂದು ನಿಲ್ಲಿಸಿದೆ ಎಂದರು.

ನಾಯಕಿ ಅನುಷಾ ರೈ ಮಾತನಾಡಿ, ತನ್ನ ಪಾತ್ರ ಮೂರು ಶೇಡ್‌ಗಳಲ್ಲಿದ್ದು, ಮುಗ್ಧ ಹುಡುಗಿ, ಡೋಂಟ್ ಕೇರ್ ಥರದ ಪಾತ್ರ ಹಾಗೂ ಯುವರಾಣಿಯ ಪಾತ್ರವನ್ನು ನಾನು ನಿರ್ವಹಿಸುತ್ತಿದ್ದೇನೆ ಎಂದರು. ಸಚಿನ್ ಬಸ್ರೂರು ಅವರ ಸಂಗೀತ, ಗಂಗು ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ.

ಸಾಮಾನ್ಯನ ರಾಜಕೀಯ 'ಸಿಂಹಾಸನ'





ಸಿಂಹಾಸನ ಅತಿ ಸಾಮಾನ್ಯ ಹುಡುಗನೊಬ್ಬ ರಾಜಕೀಯ ಕ್ಷೇತ್ರದಲ್ಲಿ ಹಂತ ಹಂತವಾಗಿ ಬೆಳವಣಿಗೆ ಹೊಂದಿ ಹೇಗೆ ಶಾಸಕನಾಗುವ ಹಂತಕ್ಕೆ ಬೆಳೆದ ಎಂಬುದನ್ನು ಹೇಳುವ ಚಿತ್ರ. ದಯಾನಂದಸ್ವಾಮಿ ಅವರ ನಿರ್ದೇಶನವಿರುವ ಈ ಚಿತ್ರದ ಮುಹೂರ್ತ ಶ್ರೀಗಾಯಿತ್ರಿ ವಿಶ್ವಕರ್ಮ ದೇವಸ್ಥಾನದಲ್ಲಿ ನೆರವೇರಿತು. ಒಂದಷ್ಟು ದಿನ ಮೀಡಿಯಾದಲ್ಲಿ ಕೆಲಸಮಾಡಿದ್ದ, ಚಾಮರಾಜನಗರ ಮೂಲದ ಚಂದ್ರು ಈ ಚಿತ್ರದ ನಾಯಕ, ನಿರ್ಮಾಪಕ. ರೇಷ್ಮಾ ಚಿತ್ರದ ನಾಯಕಿಯಾಗಿ ನಟಿಸಲಿದ್ದಾರೆ. ಒಂದಷ್ಟು ಚಿತ್ರಗಳಿಗೆ ಸಹಾಯಕ ನಿರ್ದೇಶಕರಾಗಿ ಕೆಲಸಮಾಡಿದ್ದು, ತಿಪಟೂರಿನ ಡಿ.ಆರ್.ದಯಾನಂದ ಸ್ವಾಮಿ ಈ ಚಿತ್ರದ ಮೂಲಕ ಮೊದಲ ಬಾರಿಗೆ ನಿರ್ದೇಶಕನಾಗುತ್ತಿದ್ದಾರೆ.

ಮುಹೂರ್ತದ ನಂತರ ಮಾತನಾಡಿದ ನಿರ್ದೇಶಕ ದಯಾನಂದಸ್ವಾಮಿ, ಇದೊಂದು ಸಾಮಾನ್ಯ ವ್ಯಕ್ತಿಯ ರಾಜಕೀಯ ಬೆಳವಣಿಗೆ ಕುರಿತಾದ ಚಿತ್ರ. ಪೊಲಿಟಿಕಲ್ ಡ್ರಾಮಾ ಕಥಾಹಂದರ ಹೊಂದಿದೆ. ಕೂಲಿಕೆಲಸ ಮಾಡುವ ಸಾಮಾನ್ಯ ವ್ಯಕ್ತಿ ರಾಜಕೀಯದಲ್ಲಿ ಹೇಗೆಲ್ಲಾ ಬೆಳವಣಿಗೆ ಹೊಂದುತ್ತಾನೆ, ರಾಜಕೀಯದಲ್ಲಿ ಯಾವೆಲ್ಲ ಕಷ್ಟ, ತೊಂದರೆಗಳಿಗೆ ಸಿಲುಕುತ್ತಾನೆ. ನಂತರ ಅದೆಲ್ಲವನ್ನು ಎದುರಿಸಿ ಹೇಗೆ ಸಾಧನೆ ಮಾಡುತ್ತಾನೆಂಬುದು ಚಿತ್ರದ ಕಾನ್ಸೆಪ್ಟ್, ವೀಕ್ಷಕರಿಗೆ ಕನೆಕ್ಟ್ ಆಗುವಂಥ ಸಾಕಷ್ಟು ದೃಶ್ಯಗಳು ಇದರಲ್ಲಿವೆ. ಚಿತ್ರದಲ್ಲಿ ಐದು ಗೀತೆಗಳಿದ್ದು ಅರ್ಜುನ್ ಸ್ವರಾಜ್ ಸಂಗೀತ ಸಂಯೋಜಿಸಲಿದ್ದಾರೆ. ಬೆಂಗಳೂರು, ಚನ್ನಪಟ್ಟಣ, ಮೈಸೂರು ಸುತ್ತಮುತ್ತ ಚಿತ್ರದ ಚಿತ್ರೀಕರಣ ನಡೆಸಲಿದ್ದೇವೆ ಎಂದು ಹೇಳಿದರು.

ನಂತರ ನಿರ್ಮಾಪಕ, ನಾಯಕ ಚಂದ್ರು ಮಾತನಾಡುತ್ತ, ದಯಾನಂದ್ ನನಗೆ 15 ವರ್ಷಗಳ ಸ್ನೇಹಿತ, ಅವರ ಬಳಿ ಒಂದೊಳ್ಳೆ ಕಾನ್ಸೆಪ್ಟ್ ಇತ್ತು, ಹಾಗಾಗಿ ಚಿತ್ರನಿರ್ಮಾಣಕ್ಕೆ ಮುಂದಾದೆ. ಒಂದು ಸಿನಿಮಾದಲ್ಲಿ ನಟಿಸಬೇಕೆನ್ನುವುದು ನನ್ನ ಬಹುದಿನಗಳ ಆಸೆಯಾಗಿತ್ತು, ಕೂಲಿ ಕೆಲಸ ಮಾಡುವ ವ್ಯಕ್ತಿಯಾಗಿ ನಾನು ಚಿತ್ರದಲ್ಲಿ ಕಾಣಿಸಿಕೊಂಡಿದ್ದೇನೆ, ನಂತರ ನನ್ನ ಪಾತ್ರ ಹಲವು ತಿರುವುಗಳನ್ನು ಪಡೆದುಕೊಳ್ಳುತ್ತದೆ. ಚಿತ್ರದಲ್ಲಿ ಕಾನ್ಸೆಪ್ಟೇ ಹೀರೋ ಎಂದು ಹೇಳಿದರು. ನಾಯಕಿ ರೇಷ್ಮಾ ಮಾತನಾಡುತ್ತ, ಇದು ನನ್ನ 2ನೇ ಚಿತ್ರ, ಇದರಲ್ಲಿ ನಾನೊಬ್ಬ ಕಾಲೇಜು ಸ್ಟೂಡೆಂಟ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ನಾಯಕನ ಒಳ್ಳೇತನ ನೋಡಿ ಆತನನ್ನು ಇಷ್ಟಪಡುತ್ತೇನೆ, ಮುಂದೇನಾಗುತ್ತೆ ಅಂತ ಚಿತ್ರದಲ್ಲಿ ನೋಡಿ ಎಂದರು. ಚಿತ್ರದಲ್ಲಿ ಖಳನಟನಾಗಿ ಪ್ರಕಾಶ್ ಸಣ್ಣಕ್ಕಿ ಕಾಣಿಸಿಕೊಂಡಿದ್ದಾರೆ, ಅಲ್ಲದೆ ಕಾಮಿಡಿ ಪಾತ್ರ ನಿರ್ವಹಿಸುತ್ತಿರುವ ಗುರು ಹಾಗೂ ಸಂಜಯ್ ತಮ್ಮ ಪಾತ್ರಪರಿಚಯ ಮಾಡಿಕೊಂಡರು.

ಸಿನಿಪದಬಂಧ-534

1		2		3	■	4	■	■	5	6
	■		■	7					■	
8			■		■		■	■	■	
	■		■		■	9		10		
■	11				■		■		■	■
■	■		■	■	12	■	13			
■	14					■		■	■	■
15	■		■	■		■		■	16	■
	■		■	17						18
19			■	■		■		■	■	
	■	■	20			■	■	21		

ಹೆಸರು ______

ವಿಳಾಸ ______

______

ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1. ಅಂಬರೀಷ್ - ಜಯಮಾಲ ಪ್ರೀತಿಯಲ್ಲಿ ದ್ವೇಷವಿದೆ 5
5. ಅನಂತ್‌ನಾಗ್ ಅಭಿನಯದಲ್ಲಿ "ಕ್ಷಾಮ" ತಲೆದೋರಿದೆ 2
7. ತ್ರಿಮೂರ್ತಿಗಳಲ್ಲಿಬ್ಬರು ಸೇರಿಕೊಂಡರೆ ಗಾಯಕನೊಬ್ಬ ಪ್ರತ್ಯಕ್ಷ! 5
8. ರಮೇಶ್ ಅರವಿಂದ್ - ಚಾರುಲತ ನಡುವೆ ನಡೆದ ವಿವಾಹ 3
9. ಪ್ರಭಾಕರ್ ಪುತ್ರನನ್ನು ಹೀಗೂ ಕರೆಯಿರಿ 5
11. ರಾಜನ್ ನಿರ್ದೇಶನದ ನಟ್ಟಿರುಳಿಗೆ ಸುಂದರ ಕೃಷ್ಣ ಅರಸ್ ಅಭಿನಯವಿದೆ 4
13. ವಿಷ್ಣುವರ್ಧನ್ - ಭವಾನಿ ಅಭಿನಯದ ಸರ್ಪಸ್ತ್ರಿ 4
14. ಗಂಡುಗಲಿ _ _ _ _ _ 5
17. ಬಿಲ್ಲು, ಕೊಡಲಿ ಹಿಡಿದ ಇಬ್ಬರಿಗೂ ವಿಜಯ್ ನಿರ್ದೇಶಕ 7
19. "ಜನನ ಮರಣಗಳೆರಡು _ _ _ ಮುಂದೆ ಹೋಗದು ಹಿಂದೆ ಬಾರದು.....", 3
20. ಗಣೇಶ್ - ವೇದಿಕಾ ಮಿಲನಗೊಂಡಿದ್ದಾರೆ 3
21. ವಿಶುಕುಮಾರ್ ಆಂಗ್ಲ ತಾಯಿ 3

ವಿಜೇತರು: ರಂಜಿತ ಎಂ., ನಂ.65, 9ನೇ ಕ್ರಾಸ್ 'ಐ' ಬ್ಲಾಕ್, ರಾಮಕೃಷ್ಣನಗರ, ಮೈಸೂರು-570022



ಉಮ್ಮತ್ತೂರು ಇಂದುಶೇಖರ್
ಮೊ.9880820462

ಸಿನಿ ಪದಬಂಧ 533ರ ಉತ್ತರ

ಗಾ	ಜಿ	ನ	ಮ	ನೆ	■	ಪ್ರೇ	■	■	ನಿಂ	ಬೆ
ಳಿ	■	ಕ್ಕಾ	■	ಪೋ	ಸ್ಟ್	ಮಾ	ಸ್ಟ	ರ್	■	ಳ್ಳಿ
ಪ	ತಂ	ಗ	■	ಲಿ	■	ನು	■	■	■	ನಾ
ಟ	■	ನೋ	■	ಯ	■	ಬಂ	ಧು	ಬ	ಳ	ಗ
■	ಅಂ	ಡ	ಮಾ	ನ್	■	ಧ	■	ಸ	■	■
■	■	ಆ	■	■	ಶಾಂ	■	ದೇ	ವ	ಯಾ	ನಿ
■	ಆ	ಷಾ	ಡ	ಭೂ	ತಿ	■	ವ	■	■	■
ಜ	■	ಡ	■	■	ಶಾಂ	■	ರ	■	ಜಾ	■
ಯ	■	ಮೋ	■	ಪ್ರೀ	ತಿ	ಪ್ರೇ	ಮ	ಪ್ರ	ಣ	ಯ
ಮಾ	ರ್ತಾಂ	ಡ	■	■	ಶಾಂ	■	ನೆ	■	■	ಮು
ಲ	■	■	ಆ	ಹು	ತಿ	■	■	ಗ	ಗ	ನ

ಮೇಲಿನಿಂದ ಕೆಳಕ್ಕೆ

1. ಪ್ರೀತಿಯುಳ್ಳ ರಾಜ್‌ಕುಮಾರ್‌ಗೆ ಎಂ.ಆರ್.ವಿಠ್ಠಲ್ ನಿರ್ದೇಶಕ 4
2. ವಿಷ್ಣುವಿನ ಮುಖ್ಯ ಭೂಮಿಕೆಯಲ್ಲಿ ವರದಕ್ಷಿಣೆಯ ಹೆಸರಿನಲ್ಲಿ ವಧುವಿನ ಪೋಷಕರ ಶೋಷಣೆಯಾಗಿದೆ 10
3. ವಿಷ್ಣುವರ್ಧನ್ - ಭಾರತಿಯ ಇರುಳಿನ ಗೌಪ್ಯತೆ 5
4. ಉದಯ್ ಕುಮಾರ್ ಕಟ್ಟಿದ ಉಪ್ಪರಿಗೆ 5
6. ಮೌನ ಸಂಗ್ರಾಮ ಸಾರಿದ ನಟ 4
10. ಪ್ರಭಾಕರ್ ಬಿರುದು ಇಲ್ಲಿ ಅಸ್ತವ್ಯಸ್ತ 3
12. ಸಿದ್ದಲಿಂಗಯ್ಯನವರ ನಿರ್ದೇಶನದಲ್ಲಿ ಪ್ರೀತಿ ಮೂರು ಬಾರಿ ಬಂದಿದೆ 6
13. ಶಿವೆ ಸರ್ಪವನ್ನು ಅಲಂಕರಿಸಿದ ನಿರ್ದೇಶಕ ಇಲ್ಲಿ ಇನ್ಸಿಲ್ ಕಳೆದುಕೊಂಡಿದ್ದಾನೆ 5
15. ದ್ವಾರಕೀಶ್ - ಜಯಚಿತ್ರ ಇಬ್ಬರೂ ಕುಬ್ಜರೇ! 4
16. ಆಕಸ್ಮಿಕ ಚಿತ್ರದ ಮಾಧವಿ ಪಾತ್ರ 2
18. ಮಂಡ್ಯ ನಾಗರಾಜ್ ಮಾಡಿದ ಕೊಲೆ 3

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

'ದಿ ಪ್ರೆಸೆಂಟ್' ಮೂರು ಕಾಲಮಾನಗಳ ಸುತ್ತ



ಹಿಂದೆ ನಡೆದ, ಈಗ ನಡೆಯುತ್ತಿರುವ ಹಾಗೂ ಮುಂದೆ ನಡೆಯಬಹುದಾದ ಕಾನ್ಸೆಪ್ಟ್ ಮೂರು ಚಿತ್ರಗಳನ್ನು ನಿರ್ದೇಶಿಸಹೊರಟಿದ್ದಾರೆ ನಿರ್ದೇಶಕ ಶಿವಪೂರ್ಣ. ಈ ಮೂರು ಕಾಲಘಟ್ಟದಲ್ಲಿ ಬರುವ ಆತ್ಮವೊಂದರ ಕಥೆಯನ್ನು ನಿರ್ದೇಶಕ ಶಿವಪೂರ್ಣ (ಲೋಕೇಶ್) ಅವರು ದಿ ಪ್ರೆಸೆಂಟ್ ಚಿತ್ರದ ಮೂಲಕ ಹೇಳಹೊರಟಿದ್ದಾರೆ. ಹಾರರ್ ಶೇಡ್ ಇರುವ ಮೈಥಲಾಜಿಕಲ್ ಕಥೆ ಒಳಗೊಂಡ ಈ ಚಿತ್ರದಲ್ಲಿ ಶಿವರಾಮೇಗೌಡರ ಅಳಿಯ ರಾಜೀವ್ ರಾಥೋಡ್ ನಾಯಕ. ಇತ್ತೀಚೆಗೆ ಕಂಠೀರವ ಸ್ಟುಡಿಯೋದಲ್ಲಿ ಈ ಚಿತ್ರದ ಮುಹೂರ್ತ ನೆರವೇರಿದೆ.

ಚಿತ್ರದ ನಿರ್ದೇಶಕ ಹಾಗೂ ನಿರ್ಮಾಪಕರೂ ಆದ ಶಿವಪೂರ್ಣ ಮಾತನಾಡುತ್ತ, ಕಳೆದೊಂದು ವರ್ಷದಿಂದ ಈ ಕಾನ್ಸೆಪ್ಟ್ ಮೇಲೆ ರಿಸರ್ಚ್ ಮಾಡಿ ಚಿತ್ರಕಥೆ ಹೆಣೆದಿದ್ದೇನೆ. ಒಂದು ಆತ್ಮದ ಮೂರು ಜನ್ಮದ ಕಥೆಯನ್ನು ಈ ಮೂಲಕ ಹೇಳಹೊರಟಿದ್ದು, ಮೂರು ಭಾಗಗಳಲ್ಲಿ ಈ ಚಿತ್ರ ಮೂಡಿಬರಲಿದೆ.

ಅನಿವಾಳಲ್ಲಿ ಮೊರಾರ್ಜಿ ವಸತಿ ಶಾಲೆ ಉದ್ಘಾಟನೆ



ಕಾರ್ಯಕ್ರಮದಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಬೆಟ್ಟದಪುರ, ಜು.11– ಪಿರಿಯಾಪಟ್ಟಣ ತಾಲೂಕಿನ ಅನಿವಾಳು ಗ್ರಾಮದಲ್ಲಿ 10 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆ ಮತ್ತು ಕಾಲೇಜು ಕಟ್ಟಡವನ್ನು ರಾಜ್ಯ ಅಲ್ಪಸಂಖ್ಯಾತ ಹಾಗೂ ವಸತಿ ಸಚಿವ ಜಮೀರ್ ಅಹಮ್ಮದ್ ಉದ್ಘಾಟಿಸಿದರು.

ನಂತರ ಮಾತನಾಡಿದ ಸಚಿವ ಜಮೀರ್ ಅಹಮ್ಮದ್, ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಅಲ್ಪಸಂಖ್ಯಾತ ಇಲಾಖೆಗೆ 3500 ಕೋಟಿ ಅನುದಾನ ನೀಡುತ್ತಿದ್ದು, ಈ ಪೈಕಿ ಅಲ್ಪಸಂಖ್ಯಾತರ ಶಿಕ್ಷಣಕ್ಕಾಗಿ ಒಂದು ಸಾವಿರ ಕೋಟಿ ಅನುದಾನ ಮೀಸಲಿಟ್ಟು ರಾಜ್ಯಾದ್ಯಂತ 50 ವಸತಿ ಶಾಲೆಗಳನ್ನು ತೆರೆಯಲಾಗುವುದು ಎಂದ ಅವರು ರಾಜ್ಯದ ಅಲ್ಪಸಂಖ್ಯಾತ ವಿದ್ಯಾರ್ಥಿಗಳು ಶೇ.99ರಷ್ಟು ಅಂಕ ಗಳಿಸಿದರೇ ಅವರ ಮುಂದಿನ ವಿದ್ಯಾಭ್ಯಾಸಕ್ಕೆ ವೈಯಕ್ತಿಕವಾಗಿ ನೆರವು ನೀಡಲಾಗುವುದು, ಅಲ್ಲದೇ ವಸತಿ ಶಾಲೆಗಳಲ್ಲಿ ಓದುವ ವಿದ್ಯಾರ್ಥಿಗಳು ಹೆಚ್ಚಿನ ಅಂಕ ಗಳಿಸಿದರೆ ಅವರಿಗೆ ವೈಯಕ್ತಿಕವಾಗಿ 10 ಸಾವಿರ ರೂ. ನೀಡಲಾಗುವುದು. ಪ್ರಸ್ತುತ 400 ಮಕ್ಕಳಿಗೆ ಐಎಎಸ್ ಮತ್ತು ಐಪಿಎಸ್ ತರಬೇತಿ ನೀಡಲಾಗುತ್ತಿದ್ದು, ಹೆಚ್ಚಿನ ವಿದ್ಯಾಭ್ಯಾಸಕ್ಕೆ ಸರ್ಕಾರದಿಂದ ಸಹಾಯಧನ ನೀಡಲಾಗುವುದು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಪಶು ಸಂಗೋಪನೆ, ರೇಷ್ಮೆ ಸಚಿವ ಕೆ.ವೆಂಕಟೇಶ್, ತಾಲೂಕಿನಲ್ಲಿ ವಸತಿ ಶಾಲೆಗಳನ್ನು ಹೆಚ್ಚಾಗಿ ತೆರೆದು ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಸಹಕಾರ ನೀಡಲಾಗುವುದು. ಇಂದು ಉದ್ಘಾಟನೆಗೊಂಡ ವಸತಿ ಶಾಲೆಗೆ ಅಗತ್ಯ ಎಲ್ಲಾ ಮೂಲಸೌಕರ್ಯ ಒದಗಿಸಿ ರಾಜ್ಯ ಮಟ್ಟದ ವಸತಿ ಶಾಲೆಯಾಗಿ ಮಾಡಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಬೆಟ್ಟದಪುರದ ವಸತಿ ಶಾಲೆಯಲ್ಲಿ ಹೆಚ್ಚು ಅಂಕ ಗಳಿಸಿದ ಮಕ್ಕಳಿಗೆ ಸನ್ಮಾನ ಹಾಗೂ ವೈಯಕ್ತಿಕವಾಗಿ 10 ಸಾವಿರ ರೂಗಳನ್ನು ಸಚಿವ ಜಮೀರ್ ಅಹಮ್ಮದ್ ಖಾನ್ ವಿತರಿಸಿದರು. ಈ ವೇಳೆ ತಾಲೂಕು ಆಶ್ರಯ ಸಮಿತಿ ಅಧ್ಯಕ್ಷ ನಿತಿನ್ ವೆಂಕಟೇಶ್, ಕಾಂಗ್ರೆಸ್ ಮುಖಂಡರಾದ ಸ್ವಾಮಿಗೌಡ, ರಹಮದ್ ಜಾನ್ ಬಾಬು, ಗ್ರಾಪಂ ಅಧ್ಯಕ್ಷರಾದ ಕಾಮಾಕ್ಷಮ್ಮ ವೀಣಾ ಕಿವಿ, ಜಿಲ್ಲಾ ಅಲ್ಪಸಂಖ್ಯಾತ ಕಲ್ಯಾಣಾಧಿಕಾರಿ ಮಾರ್ಕಂಡಯ್ಯ, ಅಲ್ಪಸಂಖ್ಯಾತ ಇಲಾಖೆ ಅಧಿಕಾರಿಗಳಾದ ಸ್ವಾಮಿ, ರಾಜು, ತಹಸೀಲ್ದಾರ್ ಕುಂಜಿ ಅಹಮದ್, ತಾಪಂ ಇಒ ಸುನೀಲ್ ಕುಮಾರ್ ಹಾಗೂ ಅನಿವಾಳು, ಹರದೂರು, ಹರಿನಹಳ್ಳಿ ಗ್ರಾಮಸ್ಥರಿದ್ದರು.

ರೈತರು ನಂಜನಗೂಡು ರಸಬಾಳೆ ರಕ್ಷಣೆಗೆ ಮುಂದಾಗಿ

ವಿಚಾರ ಸಂಕಿರ್ಣದಲ್ಲಿ ಶಾಸಕ ದರ್ಶನ್ ಸಲಹೆ



ಕಾರ್ಯಕ್ರಮವನ್ನು ಶಾಸಕ ದರ್ಶನ್ ಉದ್ಘಾಟಿಸಿದರು.

ನಂಜನಗೂಡು, ಜು.11– ಇಡೀ ವಿಶ್ವದಲ್ಲೇ ನಂಜನಗೂಡು ರಸಬಾಳೆ ವಿಭಿನ್ನ ರುಚಿ, ವಿಶೇಷತೆಯಿಂದ ಕೂಡಿದ ಹಣ್ಣು ಎಂದು ಹೆಸರುವಾಸಿಯಾಗಿದೆ. ಈ ರಸಬಾಳೆ ತಳಿಯನ್ನು ಉಳಿಸಿ ಬೆಳೆಸುವ ಸಲುವಾಗಿ ಸರ್ಕಾರ ರೈತರಿಗೆ ಪ್ರೋತ್ಸಾಹ ನೀಡುತ್ತಿದೆ. ರೈತರು ಇದರ ಸದುಪಯೋಗ ಪಡೆದು ರಸಬಾಳೆ ಬೆಳೆಯುವ ಮೂಲಕ ಹಣ್ಣಿನ ರಕ್ಷಣೆಗೆ ಮುಂದಾಗಬೇಕು ಎಂದು ಶಾಸಕ ದರ್ಶನ್ ತಿಳಿಸಿದರು.

ನಗರದ ಎಪಿಎಂಸಿ ಸಭಾಂಗಣದಲ್ಲಿ ತೋಟಗಾರಿಕೆ ಇಲಾಖೆಯಿಂದ ಏರ್ಪಡಿಸಿದ್ದ ರಸಬಾಳೆ ಕೃಷಿಯಲ್ಲಿ ವೈಜ್ಞಾನಿಕ ಬೇಸಾಯ ಕ್ರಮಗಳ ಬಗ್ಗೆ ವಿಚಾರ ಸಂಕಿರ್ಣ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ನಂಜನಗೂಡು ರಸಬಾಳೆ ಈ ಭಾಗದ ಮಣ್ಣಿನಲ್ಲಿ ಮಾತ್ರ ಬೆಳೆಯುವಂತಹ ವಿಶೇಷ ತಳಿ. ಈ ಹಣ್ಣಿನ ರುಚಿಗೆ ಎಲ್ಲರೂ ಮನ ಸೋಲುತ್ತಾರೆ. ಆದ್ದರಿಂದ ಇಡೀ ದೇಶದಲ್ಲಿ ರಸಬಾಳೆಗೆ, ನಂಜನಗೂಡು ತಾಲೂಕಿಗೆ ಮಾತ್ರ ಭೌಗೋಳಿಕ ಸ್ಥಾನಮಾನ ದೊರೆತಿರುವುದು ಹೆಮ್ಮೆಯ ಸಂಗತಿಯಾಗಿದೆ. ಈ ನಂಜನಗೂಡು ರಸ ಬಾಳೆಗೆ ರೋಗಬಾಧೆ ಅಧಿಕ. ಹೆಚ್ಚಿನ ಇಳುವರಿ ಬರಲ್ಲ ಎಂಬ ಕಾರಣಕ್ಕೆ ರೈತರು ಇದನ್ನು ಬೆಳೆಯಲು ಹಿಂದೇಟು ಹಾಕುತ್ತಿರುವ ಕಾರಣ ಈ ಬೆಳೆ ಅಳಿವಿನ ಅಂಚಿನಲ್ಲಿದೆ.

ನಂಜನಗೂಡು ರಸಬಾಳೆಯನ್ನು ಉತ್ತೇಜಿಸುವ ಸಲುವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕಳೆದ ಬಜೆಟ್‌ನಲ್ಲಿ ಉತ್ತೇಜನ ಕಾರ್ಯಕ್ರಮ ರೂಪಿಸಿ ರೈತರಿಗೆ ನೆರವು ನೀಡುತ್ತಿದ್ದಾರೆ. ಸುತ್ತೂರಿನ ಕೆವಿಕೆ ಕೃಷಿ ವಿಜ್ಞಾನ ಸಂಸ್ಥೆ ವಿಜ್ಞಾನಿಗಳು ಕೂಡ ಈ ರಸಬಾಳೆ ತಳಿಯನ್ನು ತಂತ್ರಜ್ಞಾನ ಆಧಾರಿತವಾಗಿ ಹೇಗೆ ವೈಜ್ಞಾನಿಕ ಕ್ರಮಗಳನ್ನು ಅನುಸರಿಸಿ ಬೆಳೆ ಬೆಳೆಯಬೇಕು. ಹೇಗೆ ರೋಗ ಬಾಧೆ ತಡೆಗಟ್ಟಬೇಕು ಎಂಬ ಬಗ್ಗೆ ತರಬೇತಿ ನೀಡುತ್ತಿದ್ದಾರೆ. ನಂಜನಗೂಡು ರಸ ಬಾಳೆ ತಳಿ ಉಳಿಸಿ ಬೆಳೆಸುವ ಸಲುವಾಗಿ ತೋಟಗಾರಿಕೆ ಇಲಾಖೆ, ಸರ್ಕಾರ ಯಾವಾಗಲೂ ರೈತರ ಜೊತೆ ನಿಲ್ಲಲಿದೆ ಎಂದರು.

ಸುತ್ತೂರು ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ಡಾ.ವಿನಯ್, ರಸ ಬಾಳೆ ಬೆಳೆಯಲು ಭೂಮಿ ಸಿದ್ಧತೆ ಹೇಗೆ ಮಾಡಿಕೊಳ್ಳಬೇಕು. ಕಂದುಗಳ ಆಯ್ಕೆ ಹೇಗೆ ಮಾಡಬೇಕು. ಪೋಷಕಾಂಶಗಳ ನಿರ್ವಹಣೆಯನ್ನು ಅನುಸರಿಸುವ ವಿಧಾನವನ್ನು ರೈತರಿಗೆ ತಿಳಿಸಿಕೊಟ್ಟರು. ಡಾ.ವೈ.ಪಿ.ಪ್ರಸಾದ್ ಅವರು ರಸಬಾಳೆಗೆ ತಗಲುವ ರೋಗ ಬಾಧೆ, ಕೀಟ ಬಾಧೆಯನ್ನು ನಿಯಂತ್ರಿಸುವ ವಿಧಾನಗಳ ಬಗ್ಗೆ ಪ್ರಾತ್ಯಕ್ಷಿಕೆ ನೀಡಿದರು.

ತೋಟಗಾರಿಕೆ ಸಹಾಯಕ ನಿರ್ದೇಶಕ ಚಂದ್ರು ಮಾತನಾಡಿ, ಈ ಬಾರಿ 484 ಹೆಕ್ಟೇರ್ ಪ್ರದೇಶದಲ್ಲಿ ತೆಂಗು ಅಭಿವೃದ್ಧಿಗೊಳಿಸುವ ಗುರಿ ಹೊಂದಲಾಗಿದ್ದು, 500 ಫಲಾನುಭವಿಗಳಿಗೆ 5 ಸಾವಿರ ತೆಂಗಿನ ಸಸಿಗಳನ್ನು ವಿತರಿಸಲಾಗಿದೆ ಎಂದು ಮಾಹಿತಿ ನೀಡಿದರು. ಇದೇ ವೇಳೆ ತೆಂಗು ಅಭಿವೃದ್ಧಿ ಮಂಡಳಿಯಿಂದ ತೆಂಗು ಉತ್ಪಾದನಾ ಸುಧಾರಣಾ ಕಾರ್ಯ ಯೋಜನೆಯಡಿ ತೆಂಗಿನ ಸಸಿಗಳನ್ನು ಮತ್ತು ಔಷಧ ಸೇರಿದಂತೆ ಪರಿಕರಗಳನ್ನು ವಿತರಿಸಲಾಯಿತು.

ಈ ವೇಳೆ ಮಾಜಿ ಶಾಸಕ ಕೇಶವ ಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಸಿ.ಎಂ.ಶಂಕರ್, ಮುಖಂಡರಾದ ದೊರೆಸ್ವಾಮಿ ನಾಯಕ, ನಗರಸಭಾ ಸದಸ್ಯರಾದ ಶ್ರೀಕಂಠಸ್ವಾಮಿ, ಪ್ರದೀಪ್, ರೈತ ಸಂಘದ ಜಿಲ್ಲಾಧ್ಯಕ್ಷ ಟಿ.ಆರ್.ವಿದ್ಯಾ ಸಾಗರ್, ತಾಲೂಕು ಅಧ್ಯಕ್ಷ ಸತೀಶ್ ರಾವ್, ತೋಟಗಾರಿಕಾ ಇಲಾಖೆ ನಾಗೇಶ್ ರಾವ್ ಸೇರಿದಂತೆ ಹಲವರಿದ್ದರು.

ಬಿಜೆಪಿ ಎಸ್‌ಟಿ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಎಂ.ಕೃಷ್ಣನಾಯಕ

ವೈಯಕ್ತಿಕ ಕಾರಣಗಳಿಂದ ಬಿಜೆಪಿಗೆ ರಾಜೀನಾಮೆ ನೀಡಲು ನಿರ್ಧಾರ

ಹೆಚ್.ಡಿ.ಕೋಟೆ, ಜು.11– ವೈಯಕ್ತಿಕ ಕಾರಣಗಳಿಂದಾಗಿ ಬಿಜೆಪಿ ಎಸ್‌ಟಿ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಹಾಗೂ ಬಿಜೆಪಿ ಪ್ರಾಥಮಿಕ ಸದಸ್ಯತ್ವಕ್ಕೆ



ರಾಜೀನಾಮೆ ನೀಡುತ್ತಿದ್ದೇನೆ ಎಂದು ಬಿಜೆಪಿ ಎಸ್‌ಟಿ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಎಂ.ಕೃಷ್ಣ ನಾಯಕ ತಿಳಿಸಿದರು. ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾನು ವೈಯಕ್ತಿಕ ಕಾರಣಗಳಿಂದ ಬಿಜೆಪಿ ಎಸ್‌ಟಿ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಹಾಗೂ ಬಿಜೆಪಿ ಪ್ರಾಥಮಿಕ ಸದಸ್ಯತ್ವಕ್ಕೆ ಸೋಮವಾರ ಬೆಂಗಳೂರಿನ ಬಿಜೆಪಿ ಕಚೇರಿಯಲ್ಲಿ ಪಕ್ಷದ ವರಿಷ್ಠರಿಗೆ ರಾಜೀನಾಮೆ ಸಲ್ಲಿಸುತ್ತೇನೆ ಎಂದರು.

ಹೆಚ್.ಡಿ.ಕೋಟೆ ಕ್ಷೇತ್ರದಲ್ಲಿ ಕಳೆದ 8 ವರ್ಷಗಳಿಂದ ಸಮಾಜ ಸೇವೆಯಲ್ಲಿ ತೊಡಗಿಕೊಂಡು ತಾಲೂಕಿನ ಜನತೆ ಸೇವೆ ಮಾಡುತ್ತಾ, ಕೊರೊನಾ ವೇಳೆ ಕೋಟೆ ಹಾಗೂ ಸರಗೂರಿನ ಆಸ್ಪತ್ರೆಗಳಿಗೆ ಆಂಬುಲೆನ್ಸ್, ಔಷಧ, ಆಹಾರ ಕಿಟ್ ವಿತರಣೆ, ಕೋಟೆ–ಸರಗೂರಲ್ಲಿ ಅಪ್ಪಾಜಿ ಕ್ಯಾಂಟೀನ್ ತೆರೆದು 10 ರೂ.ಗೆ ತಿಂಡಿ, ಊಟದ ವ್ಯವಸ್ಥೆ ಮಾಡುವ ಜೊತೆಗೆ ಹಲವು ಸಮಾಜಮುಖಿ ಕಾರ್ಯಗಳನ್ನು ಕೈಗೊಂಡಿದ್ದೇನೆ. ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ತಾಲೂಕಿನ ಜನತೆ 50 ಸಾವಿರಕ್ಕೂ ಹೆಚ್ಚು ಮತಗಳನ್ನು ನೀಡಿ 2 ಸ್ಥಾನ ನೀಡಿದಕ್ಕೆ ಕ್ಷೇತ್ರದ ಜನತೆಗೆ ಋಣಿಯಾಗಿರುತ್ತೇನೆ. ನಾನು ಬಿಜೆಪಿ ತೊರೆದರೂ ತಾಲೂಕಿನಲ್ಲಿ ಇರುತ್ತೇನೆ. ತಾಲೂಕಿನ ಋಣ ತೀರಿಸುವ ವರೆಗೆ ಕ್ಷೇತ್ರ ಬಿಟ್ಟು ಹೋಗುವುದಿಲ್ಲ ಎಂದು ತಿಳಿಸಿದರು.

ವಾಟಾಳು ಪಿಎಸಿಎಸ್ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆ

ಅಧ್ಯಕ್ಷರಾಗಿ ನಿಂಗಪ್ಪ, ಉಪಾಧ್ಯಕ್ಷರಾಗಿ ಶಿವಕುಮಾರ್ ಆಯ್ಕೆ



ವಾಟಾಳು ಪಿಎಸಿಎಸ್ ಅಧ್ಯಕ್ಷರಾಗಿ ನಿಂಗಪ್ಪ, ಉಪಾಧ್ಯಕ್ಷರಾಗಿ ಶಿವಕುಮಾರ್ ಆಯ್ಕೆಯಾದರು.

ತಿ.ನರಸೀಪುರ, ಜು.11– ತಾಲೂಕಿನ ವಾಟಾಳು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಸುಜ್ಜಲೂರು ಎಂ.ನಿಂಗಪ್ಪ ಉಪಾಧ್ಯಕ್ಷರಾಗಿ ಹೆಚ್.ಪಿ.ಶಿವಕುಮಾರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಗ್ರಾಮದ ಸಹಕಾರ ಸಂಘದ ಆವರಣದಲ್ಲಿ ನಡೆದ ಚುನಾವಣಾ ಸಭೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಎಂ.ನಿಂಗಪ್ಪ, ಉಪಾಧ್ಯಕ್ಷ ಸ್ಥಾನಕ್ಕೆ ಹೆಚ್.ಪಿ.ಶಿವಕುಮಾರ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿಯಾದ ಸಹಕಾರ ಅಭಿವೃದ್ಧಿ ಅಧಿಕಾರಿ ರಾಜಣ್ಣ ಘೋಷಿಸಿದರು.

ಚುನಾವಣೆಯಲ್ಲಿ ನಿರ್ದೇಶಕರಾದ ಆದಿಬೆಟ್ಟಹಳ್ಳಿ ಎ.ಬಿ.ಮಂಜುನಾಥ್, ಗ್ರಾಪಂ ಮಾಜಿ ಅಧ್ಯಕ್ಷ ಎಂ.ನಾಗೇಶ್, ಫ್ಯಾನ್ಸಿ ಮೋಹನ್, ಶಿವಣ್ಣ, ಗುರುಬಸವ ನಾಯಕ, ರೇವಣ್ಣ, ದ್ರಾಕ್ಷಾಯಿಣಮ್ಮ, ಶಾರದಮ್ಮ, ನಂಜುಂಡಸ್ವಾಮಿ, ಪುಟ್ಟರಾಜು ಭಾಗವಹಿಸಿ ಅಧ್ಯಕ್ಷರ ಆಯ್ಕೆಗೆ ಅನುಮೋದನೆ ನೀಡಿದರು.

ತಮ್ಮ ಆಯ್ಕೆಗೆ ಸಹಕರಿಸಿದ ನಿರ್ದೇಶಕರಿಗೆ ಅಭಿನಂದನೆ ಸಲ್ಲಿಸಿ ಮಾತನಾಡಿದ ನೂತನ ಅಧ್ಯಕ್ಷ ಎಂ.ನಿಂಗಪ್ಪ, ನೂತನ ಸಹಕಾರ ಸಂಘ ಉದಯವಾಗಿದ್ದು, ತಮ್ಮೆಲ್ಲರ ಸಹಕಾರದಿಂದ ಸಂಘವನ್ನು ಅಭಿವೃದ್ಧಿಪಡಿಸಿ ರೈತರಿಗೆ ಸರ್ಕಾರದಿಂದ ಸಿಗುವ ಎಲ್ಲಾ ರೀತಿಯ ಸವಲತ್ತುಗಳನ್ನು ಕೊಡಿಸಲು ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ ಎಂದರು. ಮಾಜಿ ಅಧ್ಯಕ್ಷ ಎ.ಬಿ.ಮಂಜುನಾಥ್ ಮಾತನಾಡಿ, ಸಹಕಾರ ಸಂಘಕ್ಕೆ ಸ್ವಂತ ಕಟ್ಟಡ ನಿರ್ಮಿಸುವ ಅಗತ್ಯವಿದ್ದು, ಅದಕ್ಕಾಗಿ ಕ್ಷೇತ್ರದ ಶಾಸಕರೂ ಆದ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಮತ್ತು ಸಂಸದ ಸುನೀಲ್ ಬೋಸ್ ಅವರನ್ನು ಭೇಟಿ ಮಾಡಿ ಅನುದಾನ ಪಡೆದು ಸುಸಜ್ಜಿತ ಕಟ್ಟಡ ನಿರ್ಮಾಣಕ್ಕೆ ಎಲ್ಲರೂ ಕೈ ಜೋಡಿಸಿ ಎಂದು ಮನವಿ ಮಾಡಿದರು.

ಈ ವೇಳೆ ಜಿಲ್ಲಾ ಬ್ಯಾಂಕ್ ಪ್ರತಿನಿಧಿ ಎನ್.ಎಸ್.ಶೇಖರ್, ಸಿಇಒ ಹೆಚ್.ಎನ್.ಬಸವಣ್ಣ, ಸಹಕಾರ ಸಂಘದ ವ್ಯಾಪ್ತಿಯ ಗ್ರಾಮದ ಯಜಮಾನರು ಮುಖಂಡರು ಹಾಜರಿದ್ದರು.

ಶಾಸಕ ಜಿ.ಡಿ.ಹರೀಶ್‌ಗೌಡರಿಗೆ ಸನ್ಮಾನ



ಹುಣಸೂರು ತಾಲೂಕಿನ ಯಶೋಧರಪುರದಲ್ಲಿ ಶ್ರೀಮೂರೂರಮ್ಮ ದೇವಿ ದೇವಸ್ಥಾನ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿದ ಶಾಸಕ ಜಿ.ಹರೀಶ್‌ಗೌಡರನ್ನು ಸನ್ಮಾನಿಸಲಾಯಿತು. ಈ ವೇಳೆ ಗ್ರಾಮದ ಮುಖಂಡರಾದ ಪಾಲಾಕ್ಷ, ನಿಂಗಪ್ಪ, ಮಂಜುನಾಥ, ಜಗದೀಶ, ಅಶೋಕ, ಗಿರೀಶ್, ರಾಜು, ಹರೀಶ, ವೆಂಕಟೇಶ್, ಬಿ.ನಾಗ, ಗ್ರಾಪಂ ಸದಸ್ಯರಾದ ಕೆ.ಸುಭಾಷಿಣಿ, ರಾಮೇಗೌಡ, ಶೈಲಂ, ಮಂಜುನಾಥ ಇನ್ನಿತರರಿದ್ದರು.

ಬೈಲಕುಪ್ಪೆಯಲ್ಲಿ ವೈದ್ಯನ ಬಂಧನ

ಬೈಲಕುಪ್ಪೆ, ಜು.11– ಮಹಿಳೆಯೊಂದಿಗೆ ಅಸಭ್ಯವಾಗಿ ವರ್ತಿಸಿದ ವೈದ್ಯನನ್ನು ಬೈಲಕುಪ್ಪೆ ಠಾಣೆ ಪೊಲೀಸರು ಬಂಧಿಸಿದ್ದಾರೆ.



ಇಲ್ಲಿನ ಸಿ.ಎಸ್. ರೆಡ್ಡಿ ಕ್ಲಿನಿಕ್‌ನ ಚಂದ್ರಸೇನ ರೆಡ್ಡಿ ಬಂಧನಕ್ಕೊಳಗಾದ ವೈದ್ಯ. ಸಮೀಪದ ತಿರುಮಲಪುರ ಗ್ರಾಮದ ಮಹಿಳೆಯೊಬ್ಬರು ಬುಧವಾರ ರಾತ್ರಿ ಅನಾರೋಗ್ಯದ ಕಾರಣ ಕ್ಲಿನಿಕ್‌ಗೆ ಬಂದಿದ್ದ ವೇಳೆ ವೈದ್ಯ ಚಂದ್ರಸೇನ ರೆಡ್ಡಿ ಆಕೆಯೊಂದಿಗೆ ಅಸಭ್ಯವಾಗಿ ನಡೆದುಕೊಂಡಿದ್ದಾನೆ ಎನ್ನಲಾಗಿದೆ. ಈ ಸಂಬಂಧ ಮಹಿಳೆ ಬೈಲಕುಪ್ಪೆ ಪೊಲೀಸ್ ಠಾಣೆಗೆ ದೂರು ನೀಡಿದ ಹಿನ್ನೆಲೆಯಲ್ಲಿ ಪ್ರಕರಣ ದಾಖಲಿಸಿಕೊಂಡ ಎಸ್‌ಐ ಅಜಯ್ ಕುಮಾರ್ ವೈದ್ಯನನ್ನು ವಶಕ್ಕೆ ಪಡೆದು ಕ್ಲಿನಿಕ್ ಬಂದ್ ಮಾಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಏಕತೆ, ನಾಯಕತ್ವಕ್ಕೆ ಮತ್ತೊಂದು ಹೆಸರೆ ರೋಟರಿ

ಪದಗ್ರಹಣ ಅಧಿಕಾರಿ ರೋ.ಎಂಪಿಎಚ್‌ಎಫ್ ಬಿ.ಶೇಖರ್‌ಶೆಟ್ಟಿ



ಹುಣಸೂರು ರೋಟರಿ ಪದಗ್ರಹಣಾಧಿಕಾರಿ ರೊ.ಬಿ.ಶೇಖರ್‌ಶೆಟ್ಟಿ ಮತ್ತು ರೋಟರಿ ಕುಟುಂಬದವರು.

ಹುಣಸೂರು, ಜು.11– ಅಂತಾರಾಷ್ಟ್ರೀಯ ರೋಟರಿ ಸಂಸ್ಥೆ ಒಂದು ವಿಶ್ವವಿದ್ಯಾನಿಲಯವಿದ್ದಂತೆ ಎಂದು ಪದಗ್ರಹಣ ಅಧಿಕಾರಿ ರೋ.ಎಂ ಪಿಎಚ್‌ಎಫ್ ಬಿ.ಶೇಖರ್‌ಶೆಟ್ಟಿ ಬಣ್ಣಿಸಿದರು.

ರೋಟರಿ ಸಂಸ್ಥೆ ನೂತನ ಅಧ್ಯಕ್ಷ ಕೆ.ಪಿ.ಪ್ರಸನ್ನ, ಕಾರ್ಯದರ್ಶಿ ಹೆಚ್.ಆರ್.ಕೃಷ್ಣಕುಮಾರ್ ಹಾಗೂ ಪದಾಧಿಕಾರಿಗಳ ಪದಗ್ರಹಣ ನೆರವೇರಿಸಿ ಮಾತನಾಡಿದ ಅವರು, ಸೇವೆ, ಒಡನಾಟ, ಪ್ರೀತಿ, ಸ್ನೇಹ, ತ್ಯಾಗ, ಸಮಗ್ರತೆ, ಏಕತೆ, ನಾಯಕತ್ವಕ್ಕೆ ಮತ್ತೊಂದು ಹೆಸರೆ ರೋಟರಿ ಸಂಸ್ಥೆ. ಕಟ್ಟ ಕಡೆಯ ಹಾಗೂ ಮುಂದಿನ ಪೀಳಿಗೆಯ ವ್ಯಕ್ತಿಗೂ ಸೇವೆ ಸಲ್ಲಿಸುವ ಅವಕಾಶ ನೀಡುವುದು ರೋಟರಿ ಸಂಸ್ಥೆ ಧ್ಯೇಯವಾಗಿದೆ. ರೋಟರಿ ಪ್ರಪಂಚದಾದ್ಯಂತ 1.2 ಮಿಲಿಯನ್, ಭಾರತದಲ್ಲಿ 1.40 ಲಕ್ಷ ಸದಸ್ಯರಿರುವ ದೊಡ್ಡ ಸಂಸ್ಥೆಯಾಗಿದೆ. ಇಂತಹ ಸಂಸ್ಥೆ ಸದಸ್ಯರಾಗಿರುವುದು ಹೆಮ್ಮೆಯ ವಿಷಯ ಎಂದರು.

ಹುಣಸೂರು ರೋಟರಿ ಸಂಸ್ಥೆ ತನ್ನ ಅತ್ಯುತ್ತಮ ಕಾರ್ಯಗಳಿಂದ ಪ್ಲಾಟಿನಂ ಪ್ರಶಸ್ತಿ ಪಡೆದಿರುವುದು ಅದ್ಭುತ ಸಾಧನೆ ಶ್ಲಾಘಿಸಿದರು. ರೋಟರಿ ಅಧ್ಯಕ್ಷ ಕೆ.ಪಿ.ಪ್ರಸನ್ನ ಮಾತನಾಡಿ, ನಾನು ಸರ್ಕಾರಿ ಅಧಿಕಾರಿಯಾಗಿದ್ದರೂ ರೋಟರಿ ಸೇವೆ, ಸ್ನೇಹ ಬಂಧನಕ್ಕೆ ಮನಸೋತು ಅಳಿಲು ಸೇವೆ ಮಾಡಲು ಬಂದಿದ್ದು, ಜೀವನದ ಅಂತ್ಯದವರೆಗೂ ರೋಟರಿ ಸೇವೆಗೆ ಮುಡುಪಾಗಿರುವೆ ಎಂದರು. ಕಾರ್ಯದರ್ಶಿ ಹೆಚ್.ಆರ್.ಕೃಷ್ಣಕುಮಾರ್ ಮಾತನಾಡಿ, ರೋಟರಿ ಸಂಸ್ಥೆ ತಾಲೂಕು ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಶಿಕ್ಷಣ, ಆರೋಗ್ಯ, ಹಸಿವು ನಿರ್ಮೂಲನೆಗಾಗಿ ಸೇವೆ ಎಂಬ ಧ್ಯೇಯವಿಟ್ಟುಕೊಂಡು ಇಡೀ ವಿಶ್ವದಲ್ಲಿ ನಿಸ್ವಾರ್ಥ ಸೇವೆ ಮಾಡುತ್ತಿರುವ ಏಕೈಕ ಸಂಸ್ಥೆ ಎಂದರು.

ನಿಕಟಪೂರ್ವ ಅಧ್ಯಕ್ಷ ಚೆನ್ನಕೇಶವ, ಕಾರ್ಯದರ್ಶಿ ಪ್ರಸನ್ನ 2023–24ನೇ ಸಾಲಿನ ವರದಿ ಮಂಡಿಸಿದರು. ಕಾರ್ಯಕ್ರಮದಲ್ಲಿ ಸಹಾಯಕ ಗವರ್ನರ್ ಆರ್.ಆನಂದ್, ವಲಯ 6ರ ಸೇನಾನಿ ಮೀನುಮನೆ ಪಾಂಡುಕುಮಾರ್, ಪಿ.ಇನ್ನರ್ ವ್ಹೀಲ್ ಅಧ್ಯಕ್ಷೆ ಸ್ಮಿತಾ, ರೋ.ಸತ್ಯನಾರಾಯಣ್, ಹಿರಿಯ ಸಹಾಯಕ ಗವರ್ನರ್ ಡಾ.ಹರಿಶೆಟ್ಟಿ, ಸದಸ್ಯರಾದ ಡಾ.ಸರೋಜಿನಿ ವಿಕ್ರಮ್, ಡಾ.ರವಿಕುಮಾರ್, ಡಾ.ವೃಷೇಂದ್ರ ಸ್ವಾಮಿ, ರೊ.ರಾಜಶೇಖರ್, ಡಾ.ರಘು, ರೊ.ಧರ್ಮಾಪುರ ನಾರಾಯಣ್ ತಂಗಮರಿಯಪ್ಪನ್, ಜಿ.ವಿ.ಶ್ರೀನಾಥ್, ಶ್ಯಾಮ್, ರವೀಶ್ ಇದ್ದರು.

ವನ ಮಹೋತ್ಸವ: 40 ಸಾವಿರ ಗಿಡ ನೆಡಲು ನಿರ್ಧಾರ

ಬನ್ನೂರು, ಜು.11– ಈ ಬಾರಿ ತಿ.ನರಸೀಪುರ ತಾಲೂಕಿನಲ್ಲಿ 40 ಸಾವಿರ ಗಿಡ ನೆಡುವ ಮೂಲಕ ವನ ಮಹೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಗಿದೆ ಎಂದು ಮೈಸೂರು ಜಿಲ್ಲಾ ಸಾಮಾಜಿಕ ಅರಣ್ಯ ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ನಾಗರಾಜು ತಿಳಿಸಿದರು.



ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಪ್ರಸ್ತುತ ಅರಣ್ಯ ನಾಶದಿಂದ ಪರಿಸರದಲ್ಲಿ ಸಾಕಷ್ಟು ಬದಲಾವಣೆಯಾಗುತ್ತಿದ್ದು, ಅದನ್ನು ಸರಿಪಡಿಸುವ ನಿಟ್ಟಿನಲ್ಲಿ ನಮ್ಮ ಇಲಾಖೆ ಹಲವು ಕಾರ್ಯಕ್ರಮಗಳನ್ನು ರೂಪಿಸಿ ತ್ವರಿತಗತಿಯಲ್ಲಿ ಮಾಡುತ್ತಿದ್ದು ಅದಕ್ಕೆ ವ್ಯಾಪಕ ಬೆಂಬಲ ಸಿಕ್ಕಿದೆ ಎಂದ ಅವರು, ತಾಲೂಕಿನ ಎಲ್ಲಾ ಗ್ರಾಮಸ್ಥರು ಮತ್ತು ಮುಖಂಡರು ಅರಣ್ಯ ಸಂರಕ್ಷಣೆ ಕಾರ್ಯದಲ್ಲಿ ತೊಡಗುವಂತೆ ಮನವಿ ಮಾಡಿದರು.

ಇಟ್ನ ಗ್ರಾಪಂಗೆ ಅಧ್ಯಕ್ಷ, ಉಪಾಧ್ಯಕ್ಷರ ಅವಿರೋಧ ಆಯ್ಕೆ



ಅಧ್ಯಕ್ಷರಾಗಿ ಆರ್.ಕಾಳಿಂಗನಾಯಕ, ಉಪಾಧ್ಯಕ್ಷೆಯಾಗಿ ಗೌರಮ್ಮ ಆಯ್ಕೆಯಾದರು.

ಸರಗೂರು, ಜು.11– ತಾಲೂಕಿನ ಇಟ್ನ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ, ಆರ್. ಕಾಳಿಂಗನಾಯಕ, ಉಪಾಧ್ಯಕ್ಷೆಯಾಗಿ ಗೌರಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಗ್ರಾಪಂನಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಆರ್.ಕಾಳಿಂಗ ನಾಯಕ, ಉಪಾಧ್ಯಕ್ಷ ಸ್ಥಾನಕ್ಕೆ ಗೌರಮ್ಮ ಅವರನ್ನು ಹೊರತುಪಡಿಸಿ ಬೇರೆ ಯಾರು ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ, ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ಹೆಚ್.ಡಿ.ಶ್ರೀಧರಮೂರ್ತಿ, ಪಿಡಿಒ ಹೆಚ್.ಎಸ್.ಚಿನ್ನಸ್ವಾಮಿ ಘೋಷಿಸಿದರು.

ಈ ವೇಳೆ ಗ್ರಾಪಂ ಸದಸ್ಯರಾದ ಜಯರಾಮ, ಎಸ್.ಚನ್ನನಾಯಕ, ಸವಿತಾ, ಗೀತಾ, ಶಿವಮ್ಮ, ಗ್ರಾಮದ ಮುಖಂಡರಾದ ಎನ್.ಬಸವನಾಯಕ, ವಿ.ಸಿದ್ದರಾಜು, ಬಿ.ಬಸವರಾಜು, ಬೆಟ್ಟನಾಯಕ, ಈರ ನಾಯಕ, ಮಾಜಿ ಯಜಮಾನ ನಿಂಗರಾಜು, ಚಾಮನಾಯಕ, ರಾಮನಾಯಕ ಇನ್ನಿತರರಿದ್ದರು.

ಸೋಸಲೆ ಗ್ರಾಪಂಗೆ ಎನ್.ಶೈಲಜಾ ಅಧ್ಯಕ್ಷೆ



ಸೋಸಲೆ ಗ್ರಾಪಂ ಅಧ್ಯಕ್ಷರಾಗಿ ಎನ್.ಶೈಲಜಾ ಆಯ್ಕೆಯಾದರು.

ತಿ.ನರಸೀಪುರ, ಜು.11– ತಾಲೂಕಿನ ಸೋಸಲೆ ಗ್ರಾಮ ಪಂಚಾಯಿತಿ ನೂತನ ಅಧ್ಯಕ್ಷೆಯಾಗಿ ಎನ್.ಶೈಲಜಾ ಮಹೇಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷೆ ಚಾಂದಿನಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ ಹಿನ್ನೆಲೆಯಲ್ಲಿ ಗುರುವಾರ ಗ್ರಾಪಂ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಸಾಮಾನ್ಯ ಮಹಿಳೆಗೆ ಮೀಸಲಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಎನ್.ಶೈಲಜಾ ಅವರೊಬ್ಬರೇ ನಾಮಪತ್ರ ಸಲ್ಲಿಸಿದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ, ಜಿಪಂ ಎಇಇ ಚರಿತ ಘೋಷಿಸಿದರು.

ನೂತನ ಅಧ್ಯಕ್ಷೆ ಎನ್.ಶೈಲಜಾ ಮಾತನಾಡಿ, ಎಲ್ಲಾ ಸದಸ್ಯರ ವಿಶ್ವಾಸ, ಬೆಂಬಲದಿಂದ ಅಧ್ಯಕ್ಷೆಯಾಗಿ ಆಯ್ಕೆಯಾಗಲು ಸಾಧ್ಯವಾಗಿದೆ. ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಂಸದ ಸುನೀಲ್ ಬೋಸ್ ಅವರ ಸಹಕಾರದೊಂದಿಗೆ ಹೆಚ್ಚಿನ ಅನುದಾನ ತಂದು ಗ್ರಾಪಂ ವ್ಯಾಪ್ತಿಯ ಎಲ್ಲಾ ಗ್ರಾಮಗಳನ್ನು ಅಭಿವೃದ್ಧಿಪಡಿಸಲಾಗುವುದು. ಇತ್ತೀಚೆಗೆ ಡೆಂಗ್ಯೂ ಹೆಚ್ಚಾಗುತ್ತಿರುವುದರಿಂದ ಸ್ವಚ್ಛತೆಗೆ ಮೊದಲ ಆದ್ಯತೆ ನೀಡಿ, ಆರೋಗ್ಯ ರಕ್ಷಣೆಗೆ ಒತ್ತು ನೀಡುವುದಾಗಿ ಭರವಸೆ ನೀಡಿದರು.

ಎಸ್ಸಿ/ಎಸ್ಟಿ ಹಿತರಕ್ಷಣಾ ಸಮಿತಿ ಸದಸ್ಯ ಸೊಸ್ಲೆ ಮಹದೇವಸ್ವಾಮಿ ಮಾತನಾಡಿ, ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸ್ಮಶಾನ ಅಭಿವೃದ್ಧಿಗೆ 20 ಲಕ್ಷ, ಎಸ್‌ಇಪಿ ಪ್ರೋ ಗ್ರಾಂಗೆ 30 ಲಕ್ಷ, ನೂತನ ಚಾವಡಿ ನಿರ್ಮಾಣಕ್ಕೆ 30 ಲಕ್ಷ ಅನುದಾನ ನೀಡಿದ್ದಾರೆ. ಸಚಿವರಿಂದ ಗ್ರಾಪಂಗೆ ಮತ್ತಷ್ಟು ಅನುದಾನ ತರಲಾಗುವುದು ಎಂದರು.

ಈ ವೇಳೆ ಉಪಾಧ್ಯಕ್ಷೆ ಸಿ.ಪ್ರೀತಿ, ಪಿಡಿಒ ಪುಟ್ಟಸ್ವಾಮಿ, ಸದಸ್ಯರಾದ ಎಸ್.ಪುಟ್ಟಸ್ವಾಮಿ, ಎನ್.ನಾಗೇಂದ್ರ, ಎಂ.ಭಾಗ್ಯ, ಸುವರ್ಣ, ಎಸ್.ಎನ್.ಮಧುಸೂಧನ್, ರೇಖಾಪ್ರಭ, ಎಂ.ಮಹೇಶ್, ಎಸ್.ವಿ.ಮಹೇಶ್ ಕುಮಾರ್, ನಾಗರತ್ನ, ಆರ್.ಮಲ್ಲೇಶ್, ರಾಜಮ್ಮ, ಜ್ಞಾನೇಂದ್ರ, ಸುಂದರ್, ಹೇಮಾ, ಆಶಾ, ನಾರಾಯಣ, ಮಂಜುನಾಥ, ಜಿಪಂ ಮಾಜಿ ಅಧ್ಯಕ್ಷ ಎಸ್.ಎನ್. ಸಿದ್ದಾರ್ಥ್, ಕೆಪಿಸಿಸಿ ಸದಸ್ಯ ಹೊನ್ನನಾಯಕ, ಮುಖಂಡರಾದ ರಾಜಣ್ಣ, ಶಿವಕುಮಾರ್, ಸಿದ್ದರಾಜು, ರಾಜೇಶ್, ಲಿಂಗರಾಜು, ಮಹದೇವಶೆಟ್ಟಿ, ಸೋಮಣ್ಣ ಮತ್ತಿತರರಿದ್ದರು.

ಬೆಟ್ಟದಪುರದಲ್ಲಿ ಅದ್ಧೂರಿ ಕೆಂಪೇಗೌಡ ಜಯಂತಿ

ಬೆಟ್ಟದಪುರ, ಜು.11– ಗ್ರಾಮದಲ್ಲಿ ಗುರುವಾರ ನಾಡಪ್ರಭು ಕೆಂಪೇಗೌಡರ ಜಯಂತಿಯನ್ನು ಅದ್ಧೂರಿಯಾಗಿ ಆಚರಿಸಲಾಯಿತು.

ಜಯಂತಿ ಅಂಗವಾಗಿ ಕೆಂಪೇಗೌಡ ಸ್ನೇಹ ಬಳಗದ ವತಿಯಿಂದ ಬೆಳ್ಳಿ ರಥದಲ್ಲಿ ಕೆಂಪೇಗೌಡರ ಪ್ರತಿಮೆ ಪ್ರತಿಷ್ಠಾಪಿಸಿ ವಿವಿಧ ಪುಷ್ಪಗಳಿಂದ ರಥವನ್ನು ಅಲಂಕಾರ ಮಾಡಿ, ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮೆರವಣಿಗೆಗೆ ಚಾಲನೆ ನೀಡಲಾಯಿತು. ಬಳಿಕ ಗ್ರಾಮದ ಪ್ರಮುಖ ಬೀದಿಗಳಲ್ಲಿ ವಿವಿಧ ಜಾನಪದ ಕಲಾ ಪ್ರಕಾರಗಳೊಂದಿಗೆ ಮೆರವಣಿಗೆ ಮಾಡಲಾಯಿತು.

ದೈಹಿಕ ಶಿಕ್ಷಣ ಶಿಕ್ಷಕ ನಾರಾಯಣಗೌಡ, ಸಮಾಜ ಸೇವಕ ಗಗನ್, ರೈತ ಮುಖಂಡ ದೇವರಾಜು ಮಾತನಾಡಿದರು. ಈ ವೇಳೆ ಮುಖಂಡರಾದ ಆರ್.ವೆಂಕಟೇಶ್, ಮಹೇಶ್, ನಟರಾಜ್, ಮಂಜಣ್ಣ, ಚೇತನ್, ನಾಗರಾಜ್, ಚಂದ್ರೇಗೌಡ, ನಾಗೇಗೌಡ, ರಾಜು, ಕುಮಾರ್, ಕೃಷ್ಣೇಗೌಡ, ನಾಗರಾಜು, ಗೋವಿಂದೇಗೌಡ, ಶಿವಣ್ಣಗೌಡ, ಉದಯ್, ಚಂದ್ರು, ಗಿರಿಗೌಡ, ಹೊನ್ನೇಗೌಡ ಇನ್ನಿತರರಿದ್ದರು.

ಯಜಮಾನ್ ಪುಟ್ಟಲಿಂಗಪ್ಪ ನಿಧನ

ಸುತ್ತೂರು, ಜು.11– ಗ್ರಾಮದ ನಾಯಕ ಜನಾಂಗದ ಯಜಮಾನ ಪುಟ್ಟಲಿಂಗಪ್ಪ (70) ಬುಧವಾರ ನಿಧನರಾದರು.



ಮೃತರು ಇಬ್ಬರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗ್ರಾಮದ ಸ್ಮಶಾನದಲ್ಲಿ ಗುರುವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಚಿವ ಮಹದೇವಪ್ಪ ದಲಿತರನ್ನು ರಾಜಕೀಯವಾಗಿ ಬೆಳೆಸಿಲ್ಲ

ಮಾಜಿ ಶಾಸಕ ಎಸ್.ಬಾಲರಾಜ್ ಆರೋಪ



ಮತದಾರರ ಕೃತಜ್ಞತಾ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಎಸ್.ಬಾಲರಾಜ್ ಮಾತನಾಡಿದರು.

ನಂಜನಗೂಡು, ಜು.11– ದಲಿತರ ಬಗ್ಗೆ ಗಂಟೆಗಟ್ಟಲೇ ಮಾತನಾಡುವ ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ ತಮ್ಮ ಮಗನನ್ನು ಸಂಸದರನ್ನಾಗಿ ಮಾಡಿರುವುದನ್ನು ಹೊರತುಪಡಿಸಿ ಜಿಲ್ಲೆಯಲ್ಲಿ ಯಾವುದೇ ದಲಿತರನ್ನು ರಾಜಕೀಯವಾಗಿ ಬೆಳೆಸಿಲ್ಲ ಎಂದು ಮಾಜಿ ಶಾಸಕ ಎಸ್.ಬಾಲರಾಜ್ ಆರೋಪಿಸಿದರು.

ನಗರದ ಯಾತ್ರಿ ಭವನ್ ಕಲ್ಯಾಣ ಮಂಟಪದಲ್ಲಿ ಗುರುವಾರ ತಾಲೂಕು ಬಿಜೆಪಿ ವತಿಯಿಂದ ಆಯೋಜಿಸಿದ್ದ ಮತದಾರರಿಗೆ ಕೃತಜ್ಞತಾ ಸಭೆಯಲ್ಲಿ ಮಾತನಾಡಿದ ಅವರು, ಚುನಾವಣೆ ಸಂದರ್ಭ ಬಿಜೆಪಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೆ ದಲಿತರ ಮೀಸಲಾತಿ ತೆಗೆಯುತ್ತಾರೆ ಎಂಬ ಹಸಿ ಸುಳ್ಳು ಹೇಳಿಕೊಂಡು ಅಪಪ್ರಚಾರ ಮಾಡಿದರು. ನೇರವಾಗಿ ಚುನಾವಣೆ ಎದುರಿಸದೆ ನಾನು ಶ್ರೀನಿವಾಸ ಪ್ರಸಾದ್ ಅವರನ್ನು ನಿಂದಿಸಿದ್ದೇನೆ. ಚುನಾವಣೆ ನಡೆಸಲು ಹಣವಿಲ್ಲದೆ ಸ್ಪರ್ಧೆಯಿಂದ ನಿರ್ಗಮಿಸಿದ್ದೇನೆ ಎಂದ ಹೆಚ್.ಸಿ.ಮಹದೇವಪ್ಪನವರ ಬಗ್ಗೆ ಮಾತನಾಡಲು ಹೇಸಿಗೆಯಾಗುತ್ತದೆ. ಬನ್ನಿ, ಸೋಲಿಗೆ ಹೆದರಿ ಓಡಿ ಹೋಗುವುದಿಲ್ಲ. ಬನ್ನಿ ಎದುರು ಬದುರಾಗಿ ತೊಡೆತಟ್ಟಿ ರಾಜಕೀಯ ಹೋರಾಟ ಮಾಡೋಣ. ಸುಳ್ಳು ಸುದ್ದಿ ಹಬ್ಬಿಸಿ, ಭ್ರಷ್ಟಾಚಾರದ ಹಣದಲ್ಲಿ ಚುನಾವಣೆ ಗೆಲ್ಲುವ ನಿಮಗೆ ಜನ ಬುದ್ದಿ ಕಲಿಸುತ್ತಾರೆ. ಕಾಂಗ್ರೆಸ್‌ನವರು ಶ್ರೀನಿವಾಸ ಪ್ರಸಾದ್ ಅವರ ಮನೆಗೆ ಎಡತಾಕಿ, ಪ್ರಚಾರ ಪಡೆದುಕೊಂಡು ಚುನಾವಣೆ ಗೆದ್ದರು. ಕಳೆದ 30 ವರ್ಷಗಳಿಂದ ದಲಿತರ ಮತ ಪಡೆದು ವಂಚಿಸುತ್ತಿರುವ ಹೆಚ್.ಸಿ.ಮಹದೇವಪ್ಪ ಸಂವಿಧಾನ ರಕ್ಷಕನಂತೆ ಫೋಸ್ ಕೊಡುತ್ತ ದಲಿತರನ್ನು ವಂಚಿಸುತ್ತಿದ್ದಾರೆ ಎಂದರು.

ಮಾಜಿ ಶಾಸಕ ಬಿ.ಹರ್ಷವರ್ಧನ್ ಮಾತನಾಡಿ, ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನವರು ಶ್ರೀನಿವಾಸ ಪ್ರಸಾದ್ ನಮಗೆ ಬೆಂಬಲ ನೀಡಿದ್ದಾರೆ ಎಂದು ಬಿಂಬಿಸಿಕೊಂಡು ಚುನಾವಣೆ ಗೆದ್ದರು. ನಿನ್ನೆ ಕಾಂಗ್ರೆಸ್ ನೇತೃತ್ವದಲ್ಲಿ ನಡೆದ ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ನಗರದಲ್ಲಿ ಅಂಬೇಡ್ಕರ್ ಭವನ, ಪುತ್ಥಳಿ ನಿರ್ಮಿಸಿದ ಶ್ರೀನಿವಾಸ ಪ್ರಸಾದ್ ಅವರ ಭಾವಚಿತ್ರ ಬಳಸಲಿಲ್ಲ. ಜಿಲ್ಲೆಯಲ್ಲಿ ದಲಿತರ ಸ್ವಾಭಿಮಾನದ ಬದುಕಿಗೆ ಕಾರಣರಾದ ಅವರನ್ನು ಕಾರ್ಯಕ್ರಮದಲ್ಲಿ ನೆಪಕ್ಕಾದರೂ ನೆನೆಯಲಿಲ್ಲ. ಇಂದಿನ ಶಾಸಕರು ಒಂದೂವರೆ ವರ್ಷವಾದರೂ ಕ್ಷೇತ್ರಕ್ಕೆ ಒಂದು ರೂ. ಅನುದಾನ ತರಲು ಸಾಧ್ಯವಾಗಿಲ್ಲ. ನಾನು ತಂದ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಮತ್ತೆ ಭೂಮಿ ಪೂಜೆ ನಡೆಸುತ್ತಿದ್ದಾರೆ ಎಂದು ಆರೋಪಿಸಿದ ಅವರು, ಮುಂದಿನ ವಿಧಾನಸಭಾ ಚುನಾವಣೆಗೂ ಸಹ ನಂಜನಗೂಡು ಕ್ಷೇತ್ರ ಮೀಸಲು ಕ್ಷೇತ್ರವಾಗಿ ಉಳಿಯಲಿದೆ. ಆದ್ದರಿಂದ ಕ್ಷೇತ್ರದ ಶಾಸಕರ ವೈಫಲ್ಯಗಳನ್ನು ಜನರಿಗೆ ತಿಳಿಸಿ ಪಕ್ಷವನ್ನು ಸದೃಢವಾಗಿ ಕಟ್ಟುವ ಉದ್ದೇಶದಿಂದ ಮುಂದಿನ ಚುನಾವಣೆಗಳಲ್ಲಿ ಪಕ್ಷದ ಕಾರ್ಯಕರ್ತರು ಭಿನ್ನಾಭಿಪ್ರಾಯ ಮರೆತು ಒಂದಾಗಿ ದುಡಿದು ಪಕ್ಷವನ್ನು ಕ್ಷೇತ್ರದಲ್ಲಿ ಮತ್ತೆ ಅಧಿಕಾರಕ್ಕೆ ತರೋಣ ಎಂದರು.

ಕಾರ್ಯಕ್ರಮದಲ್ಲಿ ಬಿಜೆಪಿ ಮಂಡಲ ಅಧ್ಯಕ್ಷ ಕೆಂಡಗಣ್ಣಪ್ಪ, ನಗರಾಧ್ಯಕ್ಷ ಸಿದ್ದರಾಜು, ಜಿಪಂ ಮಾಜಿ ಸದಸ್ಯರಾದ ಮಂಗಳಾ ಸೋಮಶೇಖರ್, ಸಿ.ಚಿಕ್ಕರಂಗನಾಯಕ, ಬಿಜೆಪಿ ಕಾರ್ಯದರ್ಶಿ ಪುಟ್ಟಸ್ವಾಮಿ, ಮುಖಂಡರಾದ ಸೋಮಣ್ಣ, ಸಿದ್ದರಾಜು, ಆರ್.ವಿ.ಮಹದೇವಸ್ವಾಮಿ, ಮಹೇಶ್, ನಾಗಮಣಿ, ಮೀನಾಕ್ಷಿ, ಗೋವರ್ಧನ್, ಉಮೇಶ್, ಪರಶಿವಮೂರ್ತಿ, ಮಧುರಾಜು, ಬಿ.ಎಸ್.ರಾಮು, ಶಿವಣ್ಣ, ಸಿದ್ದರಾಜು ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಡೆಂಗ್ಯೂ ನಿಯಂತ್ರಣಕ್ಕೆ ಆದ್ಯತೆ ನೀಡಿ

ಅಧಿಕಾರಿಗಳಿಗೆ ಶಾಸಕ ಜಿ.ಟಿ.ದೇವೇಗೌಡ ಸೂಚನೆ



ಮೈಸೂರಿನ ಜಲದರ್ಶಿನಿ ಅತಿಥಿ ಗೃಹದ ಸಭಾಂಗಣದಲ್ಲಿ ಪೋಸ್ಟರ್‌ಗಳನ್ನು ಹಂಚುವ ಮೂಲಕ ಡೆಂಗ್ಯೂ ಬಗ್ಗೆ ಅರಿವು ಮೂಡಿಸಲಾಯಿತು

ಮೈಸೂರು, ಜು.11(ಆರ್‌ಕೆ)–ಡೆಂಗ್ಯೂ ಹರಡದಂತೆ ಆದ್ಯತೆ ಮೇಲೆ ಕೆಲಸ ಮಾಡಬೇಕು ಎಂದು ಶಾಸಕ ಜಿ.ಟಿ. ದೇವೇಗೌಡ ಅವರು ಅಧಿಕಾರಿಗಳಿಗೆ ಇಂದಿಲ್ಲಿ ಸೂಚನೆ ನೀಡಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದ ಸಭಾಂಗಣದಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಡೆಂಗ್ಯೂ ಮತ್ತು ಚಿಕೂನ್ ಗುನ್ಯಾ ಸೋಂಕು ವೇಗವಾಗಿ ಹರಡುತ್ತಿದೆ. ಅದನ್ನು ತಡೆಗಟ್ಟುವ ಜವಾಬ್ದಾರಿ ನಿಮ್ಮ ಮೇಲಿದೆ ಎಂದರು.

ಸ್ವಚ್ಛತೆ ಕಾಪಾಡುವುದರಿಂದ ಸೊಳ್ಳೆಗಳ ಉತ್ಪತ್ತಿ ನಿಯಂತ್ರಿಸಿ ಡೆಂಗ್ಯೂ ಹರಡದಂತೆ ತಡೆಯಬಹುದಾಗಿದೆ. ಪಾಲಿಕೆ ವ್ಯಾಪ್ತಿಯ ವಾರ್ಡ್‌ಗಳು, ಗ್ರಾಮಗಳಲ್ಲಿ ಮನೆ ಮನೆಗೆ ತೆರಳಿ ಸ್ವಚ್ಛತೆ ಬಗ್ಗೆ ಅರಿವು ಮೂಡಿಸಿ, ಕಸ ಬೇರ್ಪಡಿಸಿ ವೈಜ್ಞಾನಿಕವಾಗಿ ವಿಲೇವಾರಿ ಮಾಡಬೇಕು ಎಂದು ತಿಳಿಸಿದರು.

ಮನೆ, ಹೋಟೆಲ್‌ಗಳಲ್ಲಿರುವ ನೀರಿನ ತೊಟ್ಟಿಗಳನ್ನು ಪ್ರತೀ ದಿನ ಸ್ವಚ್ಛಗೊಳಿಸಬೇಕು. ಚರಂಡಿ, ಮನೆ ಸುತ್ತಮುತ್ತಲಿನ ಪ್ರದೇಶ, ಹೂಕುಂಡಗಳಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳಬೇಕು. ಸಾರ್ವಜನಿಕರಿಗೆ ಈ ಬಗ್ಗೆ ಮನವರಿಕೆ ಮಾಡಿಕೊಡ ಬೇಕೆಂದು ಜಿ.ಟಿ.ದೇವೇಗೌಡರು ಅಧಿಕಾರಿಗಳಿಗೆ ಸಲಹೆ ನೀಡಿದರು.

ಮೈ–ಕೈ, ತಲೆ ನೋವು, ನೆಗಡಿ, ಜ್ವರ ಕಂಡು ಬಂದಲ್ಲಿ ಕೂಡಲೇ ಸಮೀಪದ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಪಡೆದುಕೊಳ್ಳಬೇಕು. ರಕ್ತ ಪರೀಕ್ಷೆ ಮಾಡಿಸಿಕೊಳ್ಳುವಂತೆ ಸಾರ್ವಜನಿಕರಿಗೆ ಸಲಹೆ ನೀಡಬೇಕು. ಶಾಲಾ–ಕಾಲೇಜುಗಳಲ್ಲಿ ಆರೋಗ್ಯ ಇಲಾಖೆ ಅಧಿಕಾರಿಗಳು, ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು ಡೆಂಗ್ಯೂ ನಿಯಂತ್ರಣ ಕುರಿತಂತೆ ಜಾಗೃತಿ ಮೂಡಿಸಬೇಕು ಎಂದು ಅವರು ತಿಳಿಸಿದರು.

ಈ ವೇಳೆ ಮಾಹಿತಿ ನೀಡಿದ ತಾಲೂಕು ಆರೋಗ್ಯಾಧಿಕಾರಿ ಡಾ. ಪುಟ್ಟತಾಯಮ್ಮ, ಜನವರಿಯಿಂದ ಈವರೆಗೆ ನಗರ ಪ್ರದೇಶದಲ್ಲಿ 196 ಡೆಂಗ್ಯೂ ಪ್ರಕರಣ ದಾಖಲಾಗಿದ್ದು, ಗ್ರಾಮಗಳಲ್ಲಿ 66 ಪ್ರಕರಣಗಳಿವೆ. ಡೆಂಗ್ಯೂ ಮತ್ತು ಚಿಕೂನ್ ಗುನ್ಯಾ ನಿಯಂತ್ರಿಸಲು ಕೇವಲ ಆರೋಗ್ಯ ಇಲಾಖೆಯಿಂದ ಮಾತ್ರ ಸಾಧ್ಯವಿಲ್ಲ. ಎಲ್ಲಾ ಇಲಾಖೆ ಅಧಿಕಾರಿಗಳು ಹಾಗೂ ಸಾರ್ವಜನಿಕರ ಸಹಕಾರ ಅತ್ಯಗತ್ಯ ಎಂದರು.

ಕರಪತ್ರ, ಪೋಸ್ಟರ್‌ಗಳನ್ನು ಹಂಚುವ ಮೂಲಕ ಡೆಂಗ್ಯೂ ಬಗ್ಗೆ ಅರಿವು ಮೂಡಿಸುತ್ತಿದ್ದೇವೆ. ಕಾಯಿಲೆಯ ಲಕ್ಷಣಗಳನ್ನು ಮನದಟ್ಟು ಮಾಡಿ ತಕ್ಷಣ ಚಿಕಿತ್ಸೆ ಪಡೆಯುವಂತೆ ಸಲಹೆ ನೀಡುತ್ತಿದ್ದೇನೆ ಎಂದು ಶ್ರೀರಾಂಪುರ ಪಟ್ಟಣ ಪಂಚಾಯ್ತಿ ಮುಖ್ಯ ಲೆಕ್ಕಾಧಿಕಾರಿ ಸುರೇಶ್ ಶಾಸಕರಿಗೆ ಮಾಹಿತಿ ನೀಡಿದರು.


ಪಾಲಿಕೆ ವಲಯ ಕಚೇರಿ–3ರ ಸಹಾಯಕ ಆಯುಕ್ತ ಸತ್ಯಮೂರ್ತಿ ಅವರು ಮಾತನಾಡಿ, ಕ್ಷೇತ್ರ ವ್ಯಾಪ್ತಿಯ ವಾರ್ಡ್‌ಗಳಲ್ಲಿ ಚರಂಡಿ ಸ್ವಚ್ಛಗೊಳಿಸಲಾಗಿದೆ. ದಿನಕ್ಕೆರಡು ಬಾರಿ ಫಾಗಿಂಗ್ ಮಾಡಲಾಗುತ್ತಿದ್ದು, ಸೊಳ್ಳೆಗಳ ನಿಯಂತ್ರಣಕ್ಕೆ ಕ್ರಮ ವಹಿಸುತ್ತಿದ್ದೇವಲ್ಲದೆ, ಮನೆಗಳ ಹೂ ಕುಂಡದ ಕೆಳಗಿನ ಪ್ಲೇಟ್‌ಗಳಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳಿ ಎಂದು ಜನರಿಗೆ ಮನವರಿಕೆ ಮಾಡಿಕೊಡುತ್ತಿದ್ದೇವೆ ಎಂದು ತಿಳಿಸಿದರು.

ಜಲಜೀವನ ಮಿಷನ್ ಯೋಜನೆಯ ಪ್ರಗತಿ ಪರಿಶೀಲಿಸಿದ ಶಾಸಕ ಜಿ.ಟಿ.ದೇವೇಗೌಡರು, ದೊಡ್ಡಮಾರಗೌಡನಹಳ್ಳಿ, ಧನಗಳ್ಳಿ, ಇಲವಾಲ ಗ್ರಾಮ ಪಂಚಾಯ್ತಿಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಕಾಮಗಾರಿಗಳು ನಡೆದಿಲ್ಲ. ಗ್ರಾಮೀಣ ನೈರ್ಮಲ್ಯ ಮತ್ತು ಕುಡಿಯುವ ನೀರು ಸರಬರಾಜು ವಿಭಾಗದ ಇಂಜಿನಿಯರ್‌ಗಳು ಕ್ರಮ ವಹಿಸಬೇಕು ಎಂದರು.

ಬೋಗಾದಿ ಪಟ್ಟಣ ಪಂಚಾಯ್ತಿ ವ್ಯಾಪ್ತಿಯಲ್ಲಿ ಅಮೃತ ಯೋಜನೆಯಡಿ ಟ್ಯಾಂಕ್ ನಿರ್ಮಿಸಲು ಕಲ್ಯಾಣಿ ನಗರ, ಪುಟ್ಟೇಗೌಡರ ಬಡಾವಣೆ, ರವಿಶಂಕರ್ ಲೇಔಟ್‌ನಲ್ಲಿ ಜಾಗ ಮಂಜೂರು ಮಾಡುವಂತೆ ಮುಡಾ ಆಯುಕ್ತರಿಗೆ ಶಾಸಕರು ದೂರವಾಣಿ ಮೂಲಕ ತಿಳಿಸಿದರು.

ಹೂಟಗಳ್ಳಿ ನಗರಸಭೆ ಆಯುಕ್ತ ಚಂದ್ರಶೇಖರ್, ಕಾರ್ಯ ನಿರ್ವಹಣಾಧಿಕಾರಿಗಳಾದ ಗಿರಿಧರ್ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಚಾಮುಂಡಿಬೆಟ್ಟಕ್ಕೆ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಭೇಟಿ; ಪರಿಶೀಲನೆ



ಚಾಮುಂಡಿಬೆಟ್ಟದಲ್ಲಿ ಗುರುವಾರ ಸಂಜೆ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಆಷಾಢ ಶುಕ್ರವಾರದ ಸಿದ್ಧತೆ ಪರಿಶೀಲನೆ ನಡೆಸಿದರು.

ಮೈಸೂರು,ಜು.11(ಪಿಎಂ)– ನಾಳೆ ಮೊದಲ ಆಷಾಢ ಶುಕ್ರವಾರ. ಇದರ ಪ್ರಯುಕ್ತ ಚಾಮುಂಡಿಬೆಟ್ಟದಲ್ಲಿ ನಡೆಯುವ ವಿಶೇಷ ಪೂಜೆ ಹಾಗೂ ಭಕ್ತಾದಿಗಳಿಗೆ ಕಲ್ಪಿಸಿರುವ ಸೌಲಭ್ಯಗಳ ಬಗ್ಗೆ ಗುರುವಾರ ಸ್ಥಳಕ್ಕೆ ಭೇಟಿ ನೀಡಿ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಪರಿಶೀಲನೆ ನಡೆಸಿದರು.

ಆಷಾಢ ಮಾಸದ ಎಲ್ಲಾ ಶುಕ್ರವಾರದಂದು ಬೆಟ್ಟದಲ್ಲಿ ನಡೆಯುವ ವಿಶೇಷ ಪೂಜೆ ಕೈಂಕರ್ಯದಲ್ಲಿ ಭಕ್ತಾದಿಗಳು ಪಾಲ್ಗೊಳ್ಳಲು ಜಿಲ್ಲಾಡಳಿತದ ವತಿಯಿಂದ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ. ಇಂದು ಸ್ಥಳಕ್ಕೆ ಭೇಟಿ ನೀಡಿದ ಜಿಲ್ಲಾಧಿಕಾರಿಗಳು, ಭಕ್ತರು ಸರದಿ ಸಾಲಿನಲ್ಲಿ ಚಾಮುಂಡೇಶ್ವರಿ ದೇವಾಲಯ ಪ್ರವೇಶಿಸಲು ಕಲ್ಪಿಸಿರುವ ವ್ಯವಸ್ಥೆ, ಬಸ್ ನಿಲ್ದಾಣಕ್ಕೆ ಮಾಡಿರುವ ವ್ಯವಸ್ಥೆ ಹಾಗೂ ಭದ್ರತಾ ಕ್ರಮಗಳ ಸಂಬಂಧ ಪರಿಶೀಲನೆ ನಡೆಸಿದರು.

ಶೌಚಾಲಯ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ನೂಕುನುಗ್ಗಲು ಆಗದಂತೆ ತಡೆಗಟ್ಟಲು ಕೈಗೊಂಡಿರುವ ವ್ಯವಸ್ಥೆಯನ್ನು ಪರಿಶೀಲಿಸಿ, ಎಲ್ಲವೂ ಸುಗಮವಾಗಿ ನಡೆಯಲು ಅಧೀನ ಅಧಿಕಾರಿಗಳಿಗೆ ಸಲಹೆ ಸೂಚನೆಗಳನ್ನು ನೀಡಿದರು. ಅಲ್ಲದೆ, ಭಕ್ತಾದಿಗಳಿಗೆ ಯಾವುದೇ ತೊಂದರೆ ಆಗದಂತೆ ಎಲ್ಲಾ ರೀತಿ ಕ್ರಮಗಳನ್ನು ಕೈಗೊಳ್ಳಲು ನಿರ್ದೇಶನ ನೀಡಿದರು.

ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಡಿಸಿಪಿ ಎಂ. ಮುತ್ತುರಾಜ್, ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಂ.ಜೆ.ರೂಪಾ, ದೇವಾಲಯದ ಪ್ರಧಾನ ಅರ್ಚಕ ಡಾ.ಶಶಿಶೇಖರ್ ದೀಕ್ಷಿತ್ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಜರಿದ್ದರು.

ವಾರಣಾಸಿಯ ವಿಶ್ವಶಾಂತಿ ಮಹಾಯಾಗಕ್ಕೆ ಆಹ್ವಾನ



ನಗರದ ಖಾಸಗಿ ಹೋಟೆಲ್‌ನಲ್ಲಿ ವಿಶ್ವ ಶಾಂತಿ ಮಹಾಯಾಗದ ಕುರಿತ ಪ್ರಚಾರ ಕಾರ್ಯಕ್ರಮವನ್ನು ಸ್ವರ್ವೇದ ಮಹಾಮಂದಿರ ಟ್ರಸ್ಟ್‌ನ ಶ್ರೀ ವಿಜ್ಞಾನ ದೇವ್ ಜೀ ಮಹಾರಾಜ್ ಉದ್ಘಾಟಿಸಿ, ಮಾಹಿತಿ ನೀಡಿದರು

ಮೈಸೂರು, ಜು.11(ಎಂಕೆ)– ಸ್ವರ್ವೇದ ಮಹಾಮಂದಿರ ಟ್ರಸ್ಟ್ ವತಿಯಿಂದ ವಿಹಂಗಮ ಯೋಗ ಸಂತ ಸಮಾಜದ ಶತಮಾನೋತ್ಸವದ ಅಂಗವಾಗಿ 2024ರ ಡಿ.6 ಮತ್ತು 7 ರಂದು ವಾರಣಾಸಿ (ಕಾಶಿ) ಸ್ವರ್ವೇದ್ ಮಹಾಮಂದಿರ್ ಧಾಮ್‌ನಲ್ಲಿ ನಡೆಯುವ 25000 ಕುಂಡಗಳ ವಿಶ್ವ ಶಾಂತಿ ಮಹಾಯಾಗಕ್ಕೆ ಅಧಿಕ ಸಂಖ್ಯೆಯಲ್ಲಿ ಭಾಗವಹಿಸುವಂತೆ ಸ್ವರ್ವೇದ ಮಹಾ ಮಂದಿರ ಟ್ರಸ್ಟ್‌ನ ಶ್ರೀ ವಿಜ್ಞಾನ ದೇವ್ ಜೀ ಮಹಾರಾಜ್ ಮನವಿ ಮಾಡಿದರು.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ವಿಶ್ವ ಶಾಂತಿ ಮಹಾಯಾಗದ ಪ್ರಚಾರ ಕುರಿತ ಕಾರ್ಯಕ್ರಮದಲ್ಲಿ ಮಾಹಿತಿ ನೀಡಿದ ಅವರು, ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ರಾಷ್ಟ್ರವ್ಯಾಪಿ ಸ್ವರ್ವೇದ ಸಂಕಲ್ಪ ಯಾತ್ರೆ ಹಮ್ಮಿಕೊಂಡಿದ್ದು, ಇದರ ಅಂಗವಾಗಿ ಮೈಸೂರಿನಲ್ಲಿರುವ ಯೋಗ ಸಂತರನ್ನು ಆಹ್ವಾನಿಸುತ್ತಿದ್ದೇವೆ ಎಂದರು.

ವಿಹಂಗಮ ಯೋಗ ಭಾರತದ ಋಷಿಗಳ ಅತ್ಯಂತ ಹಳೆಯ ಯೋಗ ವಿದ್ಯೆಯಾಗಿದೆ. ಇದರಿಂದ ಮನಸ್ಸನ್ನು ನಿಯಂತ್ರಿಸಲು ಸಹಾಯವಾಗುತ್ತದೆ. ಉನ್ನತ ಮಟ್ಟದ ಚೈತನ್ಯ ಅರಿವು, ಸಕಾರಾತ್ಮಕ ಶಕ್ತಿಯ ಅನುಭವ, ಆಂತರಿಕ ಶಾಂತಿ, ಏಕಾಗ್ರತೆ ಹೆಚ್ಚಿಸುತ್ತದೆ. ನಿದ್ರಾ ಹೀನತೆ ದೂರವಾಗಿ, ರೋಗ ನಿರೋಧಕ ಶಕ್ತಿ ಹೆಚ್ಚಾಗಲೂ ವಿಹಂಗಮ ಯೋಗ ಸಹಕಾರಿ ಎಂದು ತಿಳಿಸಿದರು. ಇದಕ್ಕೂ ಮುನ್ನ ಸ್ವರ್ವೇದದ ಸುಮಧುರ ಸಂಗೀತ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಕೃಷಿ ವಿಜ್ಞಾನಿ ಡಾ.ವಸಂತ್ ಕುಮಾರ್ ತಿಮಕಾಪುರ, ಹಿರಿಯ ಸಮಾಜ ಸೇವಕ ಡಾ.ರಘುರಾಮ್ ವಾಜಪೇಯಿ, ಅಗರ್‌ವಾಲ್ ಸಮಾಜದ ಮುಖಂಡ ಡಾ.ಎಸ್.ಕೆ.ಮಿತ್ತಲ್, ವಿಹಂಗಮ ಯೋಗ ಪ್ರಚಾರಕಿ ಹೆಚ್.ಎಲ್. ಯಮುನಾ ಮತ್ತಿತರರು ಉಪಸ್ಥಿತರಿದ್ದರು.

ಆಷಾಢ ಪೂಜೆಗೆ ಪೂಜಾ ಸಾಮಾಗ್ರಿಗಳ ಖರೀದಿ ಭರಾಟೆ

ಮಾರುಕಟ್ಟೆಗಳಲ್ಲಿ ತೀವ್ರ ಚಟುವಟಿಕೆ



ಆಷಾಢ ಮಾಸದ ಮೊದಲ ಶುಕ್ರವಾರದ ಹಿನ್ನಲೆಯಲ್ಲಿ ದೇವರಾಜ ಮಾರುಕಟ್ಟೆಯಲ್ಲಿ ಹೂವು ಖರೀದಿಸುತ್ತಿರುವ ಮಹಿಳೆಯರು


ಮೈಸೂರು, ಜು.11(ಎಂಕೆ)– ಆಷಾಢ ಮಾಸದ ಮೊದಲ ಶುಕ್ರವಾರದ ಹಿನ್ನಲೆಯಲ್ಲಿ ಮೈಸೂರಿನ ದೇವರಾಜ, ಮಂಡಿ, ಅಗ್ರಹಾರ ಮಾರುಕಟ್ಟೆಗಳಲ್ಲಿ ಹೂವು, ಹಣ್ಣುಗಳು ಹಾಗೂ ಪೂಜಾ ಸಾಮಗ್ರಿಗಳ ಮಾರಾಟ ಭರಾಟೆ ಜೋರಾಗಿತ್ತು.

ಗುರುವಾರ ಬೆಳಗ್ಗೆಯಿಂದ ರಾತ್ರಿವರೆಗೂ ತುಂಬಿತುಳುಕುತ್ತಿದ್ದ ಮಾರುಕಟ್ಟೆಗಳಲ್ಲಿ ಹೂ, ಹಣ್ಣು ಹಾಗೂ ಪೂಜಾ ಸಾಮಾಗ್ರಿಗಳು ವ್ಯಾಪಾರ ಭರ್ಜರಿಯಾಗಿತ್ತು. ಜನರು ತರಹೇವಾರಿ ಹೂವುಗಳು, ಹಣ್ಣುಗಳು ಹಾಗೂ ಪೂಜೆಗೆ ಬೇಕಾಗುವ ತೆಂಗಿನಕಾಯಿ, ಕರ್ಪೂರ, ಅಗರಬತ್ತಿ, ದೀಪದ ಬತ್ತಿ, ಗೆಜ್ಜೆ ವಸ್ತ್ರ ಅರಿಶಿನ–ಕುಂಕುಮ ಇನ್ನಿತರೆ ವಸ್ತುಗಳನ್ನು ಖರೀದಿಸುತ್ತಿರುವುದು ಸಾಮಾನ್ಯವಾಗಿತ್ತು. ಅದರಲ್ಲೂ ಹೂವುಗಳ ಮಾರಾಟ ಕಡೆಯಂತೂ ಕಾಲಿಡಲೂ ಸ್ಥಳವಿಲ್ಲದಷ್ಟು ಜನಸಂದಣಿ ಇತ್ತು.

ಸೇವಂತಿಗೆ ಹೂ ಒಂದು ಮಾರಿಗೆ 80–120 ರೂ., ಸೇವಂತಿಗೆ ಬಿಡಿ ಹೂ 250 ಗ್ರಾಂಗೆ 60 ರಿಂದ 80 ರೂ., ಕಮಲದ ಹೂ ಒಂದಕ್ಕೆ 10 ರೂ., ಸಣ್ಣ ಗುಲಾಬಿ 250 ಗ್ರಾಂ 40–50 ರೂ.ಗೆ ಮಾರಾಟವಾದರೆ, ಮಲ್ಲಿಗೆ, ಕಾಕಡ, ಕನಕಾಂಬರ ಹೂ ಗಳಿಗೆ ಬಾರಿ ಬೇಡಿಕೆ ಇತ್ತು ಹಾಗೆಯೇ ಏಲಕ್ಕಿ ಮತ್ತು ರಸಬಾಳೆ ಕೆಜಿಗೆ 80–100 ರೂ. ಇದ್ದರೆ ಸೇಬು, ಕಿತ್ತಳೆ, ದಾಳಿಂಬೆ, ಸೀಬೆ ಮತ್ತಿತರ ಹಣ್ಣುಗಳಿಗೂ ಬೇಡಿಕೆ ಹೆಚ್ಚಾಗಿತ್ತು.

ದೇವರಾಜ ಮಾರುಕಟ್ಟೆಯಲ್ಲಿ ಎತ್ತ ನೋಡಿದರೂ ಕಾಣುತ್ತಿದ್ದ ಮಹಿಳೆಯರು ಖರೀದಿಯಲ್ಲಿ ತೊಡಗಿದ್ದರು. ಹಾಗೆಯೇ ಧನ್ವಂತರಿ ರಸ್ತೆ, ಸಯ್ಯಾಜಿ ರಾವ್ ರಸ್ತೆ ಬದಿಯಲ್ಲೂ ಹೂ, ಹಣ್ಣು ವ್ಯಾಪಾರ ಜೋರಾಗಿದ್ದು, ಹಬ್ಬದ ವಾತಾವರಣ ಮನೆ ಮಾಡಿತ್ತು. ಇದರ ನಡುವೆ ದುಬಾರಿಯಾಗಿದ್ದರೂ ಅವಶ್ಯವಿರುವ ತರಕಾರಿಗಳನ್ನು ಜನರು ಕೊಂಡೊಯ್ಯುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.

ಬಜೆಟ್ 2024–25: ಆರ್ಥಿಕ ತಜ್ಞರ ಜೊತೆ ಸಭೆ ನಡೆಸಿದ ಪ್ರಧಾನಿ ಮೋದಿ



ನವದೆಹಲಿ, ಜು.11– ಕೇಂದ್ರ ಬಜೆಟ್‌ಗೆ ಕೆಲ ದಿನಗಳು ಬಾಕಿ ಉಳಿದಿದ್ದು, ಆರ್ಥಿಕ ತಜ್ಞರ ಜೊತೆ ಪ್ರಧಾನಿ ನರೇಂದ್ರ ಮೋದಿ ಸಭೆ ನಡೆಸಿದ್ದಾರೆ. ಬಜೆಟ್ ಕುರಿತಂತೆ ಅವರ ಸಲಹೆಗಳು ಮತ್ತು ಅಭಿಪ್ರಾಯಗಳನ್ನು ಮೋದಿ ಪಡೆದಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಇದೇ 23ರಂದು ಬಜೆಟ್ ಮಂಡಿಸಲಿದ್ದಾರೆ. ಆರ್ಥಿಕ ತಜ್ಞರ ಜೊತೆಗೆ ವಲಯವಾರು ನುರಿತ ವ್ಯಕ್ತಿಗಳು, ನೀತಿ ಆಯೋಗದ ಉಪಾಧ್ಯಕ್ಷರಾದ ಸುಮನ್ ಬೆರ್ರಿ ಮತ್ತು ಇತರರು ಸಭೆಯಲ್ಲಿ ಹಾಜರಿದ್ದರು. ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಕಂಪನಿ ವ್ಯವಹಾರಗಳ ಖಾತೆ ರಾಜ್ಯ ಸಚಿವ ರಾವ್ ಇಂದ್ರಜಿತ್ ಸಿಂಗ್, ಮುಖ್ಯ ಆರ್ಥಿಕ ಸಲಹೆಗಾರ ವಿ ಅನಂತ ನಾಗೇಶ್ವರನ್ ಮತ್ತು ಆರ್ಥಿಕ ತಜ್ಞ ಸುರ್ಜಿತ್ ಭಲ್ಲಾ ಮತ್ತು ಅಶೋಕ್ ಗುಲಾಟಿ ಹಾಗೂ ಬ್ಯಾಂಕರ್ ಕೆ.ವಿ. ಕಾಮತ್ ಮತ್ತಿತರರು ಉಪಸ್ಥಿತರಿದ್ದರು.

ಮೋದಿಯವರ 3.0 ಸರ್ಕಾರದ ಮೊದಲ ಬಜೆಟ್ ಇದಾಗಿದ್ದು, 2047ಕ್ಕೆ ಭಾರತವನ್ನು ಅಭಿವೃದ್ಧಿ ಹೊಂದಿದ ದೇಶವನ್ನಾಗಿ ರೂಪಿಸುವ ನಿಟ್ಟಿನಲ್ಲಿ ಹಲವು ಯೋಜನೆಗಳನ್ನು ಘೋಷಿಸುವ ನಿರೀಕ್ಷೆ ಇದೆ ಎಂದು ವರದಿ ತಿಳಿಸಿದೆ. ಆರ್ಥಿಕ ತಜ್ಞರು, ಕೈಗಾರಿಕೋದ್ಯಮಿಗಳು ಸೇರಿದಂತೆ ಹಲವರ ಜೊತೆ ಈಗಾಗಲೇ ನಿರ್ಮಲಾ ಸೀತಾರಾಮನ್ ಸಭೆ ನಡೆಸಿದ್ದಾರೆ. ಹಲವು ತಜ್ಞರು ಸಾಮಾನ್ಯ ಜನರಿಗೆ ತೆರಿಗೆಯಿಂದ ವಿನಾಯಿತಿ ಕೊಡುವಂತೆ ಮನವಿ ಸಲ್ಲಿಸಿದ್ದಾರೆ ಎಂದು ವರದಿಯಾಗಿದೆ. 2023–24ರ ಸಾಲಿನಲ್ಲಿ ಆರ್ಥಿಕ ಬೆಳವಣಿಗೆ ದರ ಶೇಕಡ 8.2ರಷ್ಟು ದಾಖಲಾಗಿದೆ.

ಮುಖ್ಯಮಂತ್ರಿಗಳಿಂದ ಬೆಳೆ ಸಮೀಕ್ಷೆ ಆ್ಯಪ್ ಡೌನ್ಲೋಡ್ ಮಾಹಿತಿಯುಳ್ಳ ಪೋಸ್ಟರ್ ಬಿಡುಗಡೆ



ಮೈಸೂರಿನ ಅತಿಥಿಗೃಹದಲ್ಲಿ ಬೆಳೆ ಸಮೀಕ್ಷೆ ಆ್ಯಪ್ ಡೌನ್ಲೋಡ್ ಮಾಹಿತಿಯುಳ್ಳ ಪೋಸ್ಟರ್ ಅನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಗುರುವಾರ ಬಿಡುಗಡೆ ಮಾಡಿದರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮತ್ತಿತರರಿದ್ದರು.

ಮೈಸೂರು, ಜು.11(ಎಂಕೆ)– 2024–25ನೇ ಸಾಲಿನ ಬೆಳೆ ಸಮೀಕ್ಷೆ ಆ್ಯಪ್ ಡೌನ್ಲೋಡ್ ಮಾಹಿತಿಯುಳ್ಳ ಪೋಸ್ಟರ್ ಅನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಗುರುವಾರ ಬಿಡುಗಡೆ ಮಾಡಿದರು.

ಮೈಸೂರಿನ ನಜರ್‌ಬಾದ್‌ನಲ್ಲಿರುವ ಅತಿಥಿ ಗೃಹದಲ್ಲಿ ಪೋಸ್ಟರ್ ಬಿಡುಗಡೆಗೊಳಿಸಿದ ಅವರು, ಮುಂಗಾರು ಹಂಗಾಮಿಗೆ ಬೆಳೆ ಸಮೀಕ್ಷೆ ಕಾರ್ಯಕ್ಕೆ ರೈತರು ಆಂಡ್ರಾಯ್ಡ್ ಮೊಬೈಲ್ ಫೋನ್ ಪ್ಲೇ ಸ್ಟೋರ್ ಮೂಲಕ ಬೆಳೆ ಸಮೀಕ್ಷೆ ಆ್ಯಪ್ ಡೌನ್ಲೋಡ್ ಮಾಡಿಕೊಂಡು ರೈತರು ತಮ್ಮ ಜಮೀನಿನಲ್ಲಿ ಬೆಳೆದಿರುವ ವಿವಿಧ ಬೆಳೆಗಳನ್ನು ನಮೂದಿಸಲು ಅವಕಾಶವಿರುತ್ತದೆ. ರೈತರು ಈ ಆ್ಯಪ್‌ನ್ನು ಸದುಪಯೋಗಪಡಿಸಿಕೊಳ್ಳಲು ಮಾಹಿತಿ ನೀಡುವುದರ ಜೊತೆಗೆ ಕೃಷಿ ಸಂಬಂಧಿತ ಕಾರ್ಯಕ್ರಮಗಳನ್ನು ವ್ಯವಸ್ಥಿತವಾಗಿ ಜಾರಿಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ, ಶಾಸಕ ರವಿಶಂಕರ್, ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಮತ್ತಿತರರಿದ್ದರು.

30 ಸಾವಿರಕ್ಕೂ ಹೆಚ್ಚು ಮಂದಿಯಿಂದ ಆ್ಯಪ್ ಬಳಕೆ: ಮೈಸೂರು ಜಿಲ್ಲೆಯ 9 ತಾಲೂಕುಗಳಿಂದ 30,445 ಮಂದಿ ರೈತರು ಆ್ಯಪ್ ಬಳಕೆ ಮಾಡುತ್ತಿದ್ದಾರೆ. ರೈತರು ತಮ್ಮ ಆಂಡ್ರಾಯ್ಡ್ ಮೊಬೈಲ್‌ನ ಗೂಗಲ್ ಪ್ಲೇ ಸ್ಟೋರ್‌ನಲ್ಲಿ 'Farmer Crop Survey 2024-25' ಆ್ಯಪ್ ಡೌನ್ಲೋಡ್ ಮಾಡಿಕೊಂಡು E-KYC ಮೂಲಕ ಆಧಾರ್ ನಂಬರ್ ಹಾಗೂ ಮೊಬೈಲ್ ನಂಬರ್ ದೃಢೀಕರಿಸಿ, ನಮೂದಿಸಿದ ನಂತರ ರೈತರ ಜಮೀನಿನ ಪೂರ್ಣ ಮಾಹಿತಿ ಬರಲಿದೆ. ಬೆಳೆ ಸಮೀಕ್ಷೆಯ ಮಾಹಿತಿಗಳನ್ನು ನೀಡಿ, ಅಪ್ ಮಾಡಬೇಕಾಗುತ್ತದೆ ಎಂದು ಕೃಷಿ ಇಲಾಖೆ ಜಂಟಿ ನಿರ್ದೇಶಕ ಚಂದ್ರಶೇಖರ್ ತಿಳಿಸಿದರು.

ಬರೀ 6 ಜನರಿಗೆ ಮುಡಾದಿಂದ 3.15 ಲಕ್ಷ ಚದರಡಿ ಭೂಮಿ ನೀಡಿದೆ!



ಮೈಸೂರು, ಜು.11(ಬಿಎಲ್‌ಯು)– ಮುಡಾದಿಂದ ಬರೀ ಆರು ಜನರಿಗೆ 3.15 ಲಕ್ಷ ಚದರ ಅಡಿಯ ಭೂಮಿಯನ್ನು ಅಕ್ರಮವಾಗಿ ನೀಡಲಾಗಿದೆ ಎಂದು ಶಾಸಕ ಟಿ.ಎಸ್.ಶ್ರೀವತ್ಸ ಆರೋಪಿಸಿದ್ದಾರೆ.

ನಗರದ ಬಿಜೆಪಿ ಕಚೇರಿಯಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 2023 ರಿಂದ 2024 ರ ಅವಧಿಯಲ್ಲಿ ನೂರಾರು ಕೋಟಿ ರೂಪಾಯಿ ಮೌಲ್ಯದ ಭೂಮಿಯನ್ನು ಅಕ್ರಮವಾಗಿ ನೀಡಲಾಗಿದೆ ಎಂದು ಆಪಾದಿಸಿದರು.

ಶಾಂತಮ್ಮ ಎಂಬುವರಿಗೆ 81 ಸಾವಿರ ಚದರಡಿ, ನಾಗರಾಜುಗೆ 98 ಸಾವಿರ ಚದರಡಿ, ರಷೀದ್‌ಗೆ 55 ಸಾವಿರ ಚದರಡಿ, ರಾಕೇಶ್ ಪಾಪಣ್ಣಗೆ 33 ಸಾವಿರ ಚದರಡಿ ಹಾಗೂ ಮತ್ತೊಬ್ಬ ವ್ಯಕ್ತಿಗೆ 70 ಸಾವಿರ ಚದರಡಿ ಭೂಮಿ ನೀಡಲಾಗಿದೆ ಎಂದು ದೂರಿದರು.

ಮುಡಾದಲ್ಲಿ ಇಂತಹ ಬಹಳಷ್ಟು ಹಗರಣ ನಡೆದಿದ್ದು, ಈಗ ಮುಖ್ಯಮಂತ್ರಿ ಸಿದ್ದರಾಮಯ್ಯ ಮನೆ ಬಳಿ ಹೋಗಿ ನಿಂತಿದೆ. ಇಷ್ಟೆಲ್ಲಾ ಹಗರಣ ನಡೆದಿದ್ದರೂ ಮುಡಾ ಅಧ್ಯಕ್ಷ ಮರಿಗೌಡ ಸೇರಿದಂತೆ ಕಾಂಗ್ರೆಸ್ ನಾಯಕರು ಏನು ನಡೆದಿಲ್ಲ ಎಂದು ಕ್ಲೀನ್ ಚೀಟ್ ಕೊಟ್ಟಿದ್ದಾರೆ. ಇವರೇ ಹೀಗೆ ಹೇಳಿಕೆ ಕೊಟ್ಟರೆ ಇನ್ನು ತನಿಖೆ ಮಾಡುವ ಪ್ರಮೇಯವೇನಿತ್ತು ಎಂದು ಶ್ರೀವತ್ಸ ಪ್ರಶ್ನಿಸಿದರು.

2023 ರಲ್ಲಿ ತಾಂತ್ರಿಕ ಸಮಿತಿ ಮುಡಾ ಹಗರಣದ ಬಗ್ಗೆ ವರದಿ ನೀಡಿತ್ತು ಆಗಲೂ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ತರುವಾಯ ಬಹಳಷ್ಟು ಹಗರಣ ನಡೆದರೂ ಸರ್ಕಾರ ತಪ್ಪಿತಸ್ಥ ಆಯುಕ್ತರನ್ನು ವಜಾ ಮಾಡಲಿಲ್ಲ, ಯಾವುದೇ ಕ್ರಮ ಕೂಡ ಜರುಗಿಸಲಿಲ್ಲ ಸರ್ಕಾರ ಒಂದು ರೀತಿ ಮೊಂಡಾಟಕ್ಕೆ ಬಿದ್ದಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮುಡಾ ಹಗರಣದ ಬಗ್ಗೆ ರಾಜ್ಯಪಾಲರು ಹಾಗೂ ಹೈಕೋರ್ಟ್ ಮುಖ್ಯ ನ್ಯಾಯಾಧೀಶರಿಗೆ ಪತ್ರ ಬರೆದು ಪೂರ್ಣ ವಿವರ ನೀಡಿದ್ದೇನೆ. ಶೀಘ್ರದಲ್ಲೇ ಅವರು ದಾಖಲಾತಿ ಸಲ್ಲಿಸುವಂತೆ ಸೂಚಿಸುವ ಸಾಧ್ಯತೆ ಇದೆ. ಆ ವೇಳೆ ಹಗರಣ ಕುರಿತಂತೆ ದಾಖಲಾತಿ ಸಮೇತ ಸಮಗ್ರ ಮಾಹಿತಿ ನೀಡುತ್ತೇನೆ ಎಂದು ಶ್ರೀವತ್ಸ ತಿಳಿಸಿದರು.

ಗ್ರಾಮ್‌ನಲ್ಲಿ ಯೂತ್ ಫಾರ್ ಗವರ್ನೆನ್ಸ್ ಫೆಲೋಶಿಪ್

ಮೈಸೂರು, ಜು. 8– ಮೈಸೂರಿನ ಗ್ರಾಸ್‌ರೂಟ್ಸ್ ರಿಸರ್ಚ್ ಮತ್ತು ಅಡ್ವಕಸಿ ಮೂವ್‌ಮೆಂಟ್ ಸಂಸ್ಥೆಯಲ್ಲಿ ಯೂತ್ ಫಾರ್ ಗವರ್ನೆನ್ಸ್ ಫೆಲೋಶಿಪ್ ಕಾರ್ಯಕ್ರಮ ಆಯೋಜಿಸಲಾಗಿತ್ತು. ಉದ್ಘಾಟನಾ ಸಮಾರಂಭದಲ್ಲಿ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯ (ಎಸ್‌ಐಆರ್‌ಡಿ) ನಿರ್ದೇಶಕಿ ಶ್ರೀಮತಿ ಕೆ ಲಕ್ಷ್ಮೀ ಪ್ರಿಯಾ, ಮೈಸೂರು ನಗರ ಪಾಲಿಕೆ ಆಯುಕ್ತ ಅಶಾದ್–ಉರ್–ರಹಮಾನ್–ಷರೀಫ್, ಎಚ್‌ಎಸ್‌ಎಫ್‌ನ ಕಾರ್ಯಕ್ರಮ ವ್ಯವಸ್ಥಾಪಕ ಡಾ.ದೀಪಕ್ ಧವನ್ ಉಪಸ್ಥಿತರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗ್ರಾಸ್ರೂಟ್ಸ್ ರಿಸರ್ಚ್ ಅಂಡ್ ಅಡ್ವಕಸಿ ಮೂವ್‌ಮೆಂಟ್‌ನ ಕಾರ್ಯನಿರ್ವಾಹಕ ನಿರ್ದೇಶಕ ಡಾ.ಬಸವರಾಜು ಆರ್.ಶ್ರೇಷ್ಠ ವಹಿಸಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ಇಂಡಿಯನ್ 2 (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಮಹಾರಾಜ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಹಿಂದೂಸ್ತಾನಿ 2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಇಂಡಿಯನ್ 2 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಲ್ಕಿ (ಕ)	4 ಪ್ರದರ್ಶನಗಳು
ರಾಜಕಮಲ್	
ಸರ್ಫಿರಾ (ಹಿಂ)	4 ಪ್ರದರ್ಶನಗಳು
ಸಂಗಂ	
ಇಂಡಿಯನ್ 2 (ತ)	4 ಪ್ರದರ್ಶನಗಳು
ಲಿಡೋ	
ಶಾಸ್ತ್ರಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಇಂಡಿಯನ್ 2 (ತ)	4 ಪ್ರದರ್ಶನಗಳು
ಪ್ರಭಾ	
ಜಾಕಿ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕಲ್ಕಿ 2898 ಎಡಿ (3ಡಿ) (ತೆ): ಬೆ.9.35ಕ್ಕೆ, ಇಂಡಿಯನ್ 2 (ತ): ಮ.1ಕ್ಕೆ, ಇನ್‌ಸೈಡ್ ಔಟ್ 2 (3ಡಿ)(ಇಂ): ಸಂ.4.35ಕ್ಕೆ, ಕಲ್ಕಿ 2898 ಎಡಿ (ಕ): ಸಂ.6.45ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 2	ಸರ್ಫಿರಾ (ಹಿಂ): ಬೆ.9.45ಕ್ಕೆ, ಮ.12.50ಕ್ಕೆ, ರಾ.7.20ಕ್ಕೆ, ರಾ.10.20ಕ್ಕೆ, ಕಲ್ಕಿ 2898 ಎಡಿ(3ಡಿ) (ತೆ): ಮ.3.55ಕ್ಕೆ.
ಸ್ಕ್ರೀನ್ 3	ಕಲ್ಕಿ 2898 ಎಡಿ (ಕ): ಬೆ.9.30ಕ್ಕೆ, ಮ.12.55ಕ್ಕೆ, ಫ್ಲೈ ಮಿ ಟು ದಿ ಮೂನ್ (ಇಂ): ಸಂ.4.20ಕ್ಕೆ, ರಾ.10.25ಕ್ಕೆ, ಕಲ್ಕಿ 2898 ಎಡಿ (3ಡಿ) (ಹಿಂ): ರಾ.7ಕ್ಕೆ.
ಸ್ಕ್ರೀನ್ 4	ಇಂಡಿಯನ್ 2 (ತ): ಬೆ.9.25ಕ್ಕೆ, ಮ.3.10ಕ್ಕೆ, ಸಂ.6.40ಕ್ಕೆ, ರಾ.10.10ಕ್ಕೆ, ಡೆಸ್ಪಿಕಬಲ್ ಮಿ 4 (3ಡಿ) (ಇಂ): ಮ.1ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಕಲ್ಕಿ 2898 ಎಡಿ (3ಡಿ) (ಹಿಂ): ಬೆ.11.15ಕ್ಕೆ, ಸಂ.6.45ಕ್ಕೆ, ಕಲ್ಕಿ 2898 ಎಡಿ (3ಡಿ) (ತೆ): ಮ.3ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.10.15ಕ್ಕೆ, ಮ.2ಕ್ಕೆ, ಸಂ.5.45ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಕಲ್ಕಿ 2898 ಎಡಿ (ತೆ): ಬೆ.10.45ಕ್ಕೆ, ಸಂ.6.15ಕ್ಕೆ, ಕಲ್ಕಿ 2898 ಎಡಿ (ಹಿಂ): ಮ.2.30ಕ್ಕೆ, ರಾ.10ಕ್ಕೆ.
ಸ್ಕ್ರೀನ್ 4	ಡೆಸ್ಪಿಕಬಲ್ ಮಿ 4 (3ಡಿ) (ಇಂ): ಬೆ.10.40ಕ್ಕೆ, ಮ.3.20ಕ್ಕೆ, ರಾ.8ಕ್ಕೆ, ರಾ.10.15ಕ್ಕೆ, ಕಿಲ್ (ಹಿಂ): ಮ.12.55ಕ್ಕೆ, ಸಂ.5.35ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಕಲ್ಕಿ 2898 ಎಡಿ (ಕ): ಬೆ.10.30ಕ್ಕೆ, ಸಂ.6ಕ್ಕೆ, ಲವ್ ಲಿ (ಕ): ಮ.1.55ಕ್ಕೆ
ಸ್ಕ್ರೀನ್ 2	ಇಂಡಿಯನ್ 2 (ತ): ಮ.1ಕ್ಕೆ, ಸಂ.4.25ಕ್ಕೆ, ರಾ.7.50ಕ್ಕೆ.
ಸ್ಕ್ರೀನ್ 3	ಕಲ್ಕಿ 2898 ಎಡಿ (3ಡಿ)(ತೆ): ಬೆ.11.10ಕ್ಕೆ, ಮ.2.40ಕ್ಕೆ, ಇಂಡಿಯನ್ 2 (ತ): ಸಂ.6.05ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಇಂಡಿಯನ್ 2 (ತ): ಬೆ.10ಕ್ಕೆ, ಕಲ್ಕಿ 2898 ಎಡಿ (ಕ): ಮ.1.25ಕ್ಕೆ, ರಾ.7.45ಕ್ಕೆ, ಖಾಲಿ ಕುಡುಕರು (ಕ): ಸಂ.4.50ಕ್ಕೆ

ಪಿವಿಆರ್ ಸಿನಿಮಾಸ್
PVR CINEMAS

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಏಪ್ಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕಳ್ಳತನ ಪತ್ತೆ ತಂತ್ರಜ್ಞಾನ: ಅಮೆರಿಕದಲ್ಲಿ ವಾಲ್‌ಮಾರ್ಟ್ ಗ್ರಾಹಕರು ಸುಸ್ತು!

ನ್ಯೂಯಾರ್ಕ್ (ಅಮೆರಿಕ): ರೀಟೇಲ್ ದೈತ್ಯ ಸಂಸ್ಥೆ ವಾಲ್‌ಮಾರ್ಟ್‌ಗೆ ತನ್ನ ಮಳಿಗೆಗಳಲ್ಲಿ ನಡೆಯುವ ಕಳ್ಳತನವೇ ಅತಿ ದೊಡ್ಡ ಸವಾಲು. ಅಮೆರಿಕದಲ್ಲಿ ಹಣದುಬ್ಬರ ಏರಿಕೆ ಕಾಣುತ್ತಿರುವ ಬೆನ್ನಲ್ಲೇ, ಕಳ್ಳತನ ಪ್ರಕರಣಗಳೂ ಹೆಚ್ಚಾಗುತ್ತಿವೆ. ಹೀಗಾಗಿ, ಕಳ್ಳತನ ಪತ್ತೆ ಹಾಗೂ ತಡೆಯಲು ಅತ್ಯಾಧುನಿಕ ತಂತ್ರಜ್ಞಾನಗಳ ನೆರವು ಪಡೆದಿರುವ ವಾಲ್‌ಮಾರ್ಟ್ ತನ್ನ ಮಳಿಗೆಗಳಲ್ಲಿ ಅಳವಡಿಕೆ ಮಾಡಿದೆ.

ಆದರೆ ಈ ತಂತ್ರಜ್ಞಾನದಲ್ಲಿ ಸಾಕಷ್ಟು ಲೋಪದೋಷಗಳಿವೆ. ಹೀಗಾಗಿ, ಗ್ರಾಹಕರು ಸಂಕಷ್ಟಕ್ಕೆ ಸಿಲುಕುತ್ತಿದ್ದು, ವಾಲ್‌ಮಾರ್ಟ್ ಮಳಿಗೆಯ ಸಿಬ್ಬಂದಿ ಪದೇ ಪದೇ ಗ್ರಾಹಕರ ನೆರವಿಗೆ ಬರಬೇಕಾದ ಪರಿಸ್ಥಿತಿ ಎದುರಾಗಿದೆ.

ಅಮೆರಿಕ ದೇಶಾದ್ಯಂತ ಇರುವ ವಾಲ್‌ಮಾರ್ಟ್ ಮಳಿಗೆಗಳಲ್ಲಿ ಗ್ರಾಹಕರು ಮಳಿಗೆಯ ಸಿಬ್ಬಂದಿ ಜೊತೆ ವಾದ ಮಾಡುವ, ಘರ್ಷಣೆಗೆ ಇಳಿಯುವ ಪ್ರಸಂಗಗಳು ನಡೆದಿವೆ. 15ಕ್ಕಿಂತ ಕಡಿಮೆ ವಸ್ತುಗಳನ್ನು ವಾಲ್‌ಮಾರ್ಟ್‌ನಲ್ಲಿ ಖರೀದಿ ಮಾಡಿದರೆ ಸೆಲ್ಫ್ ಚೆಕ್ ಔಟ್ ಮಾಡಬೇಕು ಎಂಬ ನಿಯಮ ಇದೆ. ಆದರೆ, ಇದು ನಮ್ಮ ಸಮಸ್ಯೆ ಅಲ್ಲ ಎನ್ನುತ್ತಿದ್ದಾರೆ ಗ್ರಾಹಕರು!

ತನ್ನ ಕ್ರಮವನ್ನು ಸಮರ್ಥಿಸಿಕೊಂಡಿರುವ ವಾಲ್‌ಮಾರ್ಟ್, ಗ್ರಾಹಕರು ಆದಷ್ಟು ಬೇಗ ಖರೀದಿ ಪ್ರಕ್ರಿಯೆ ಮುಗಿಸಿ ಚೆಕ್ ಔಟ್ ಮಾಡಲು ನೆರವಾಗಲು ಈ ಪದ್ಧತಿ ರೂಪಿಸಿರುವುದಾಗಿ ಸ್ಪಷ್ಟನೆ ನೀಡಿದೆ. ಈ ತಂತ್ರಜ್ಞಾನವನ್ನು ಹೊಸದಾಗಿ ರೂಪಿಸಲಾಗಿದೆ. 2024ರ ಮಾರ್ಚ್‌ನಲ್ಲಿ ಅಮೆರಿಕದ 2 ಸಾವಿರಕ್ಕೂ ಹೆಚ್ಚು ವಾಲ್‌ಮಾರ್ಟ್ ಮಳಿಗೆಗಳಲ್ಲಿ ಈ ವ್ಯವಸ್ಥೆಯ ಜೊತೆಯಲ್ಲೇ ಕಳ್ಳತನ ನಿಗ್ರಹ ತಂತ್ರಜ್ಞಾನವನ್ನೂ ಅಳವಡಿಕೆ ಮಾಡಲಾಗಿದೆ.

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಗುರುವಾರ	104.30 ಅಡಿ
ಒಳಹರಿವು	6146 ಕ್ಯೂಸೆಕ್
ಹೊರಹರಿವು	1972 ಕ್ಯೂಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284 ಅಡಿ
ಗುರುವಾರ	2282.68 ಅಡಿ
ಒಳಹರಿವು	5118 ಕ್ಯೂಸೆಕ್
ಹೊರಹರಿವು	5000 ಕ್ಯೂಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಗುರುವಾರ	2850.74 ಅಡಿ
ಒಳಹರಿವು	2059 ಕ್ಯೂಸೆಕ್
ಹೊರಹರಿವು	200 ಕ್ಯೂಸೆಕ್

ಹಸಿರು ನಮ್ಮ ಉಸಿರು